ಮಂಗಳವಾರ, ಸೆಪ್ಟೆಂಬರ್ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 261 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ

ಬದುಕಿನಲ್ಲಿ ಭೀತಿ, ಆತಂಕಗಳು ಸಹಜ. ಹಿಂಜರಿಕೆಗಳನ್ನು ಮೀರುವುದು ಬೆಳವಣಿಗೆಯ ಚಿಹ್ನೆ. ಇದು ಏಕಾಏಕಿ ಆಗುವಂಥದ್ದಲ್ಲ.

ಆಳ-ಅಗಲ

ಗುಜರಾತ್ ಅಸಹಕಾರ ಜಾರಿಗೆ ಬಾರದ ಸಿಂಹ ಸ್ಥಳಾಂತರ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,141 ▲	17,622 ▲	₹51,100 (ಬೆಂಗಳೂರು)	₹58,100 (ಬೆಂಗಳೂರು)	79.81 ▼

ಸಹಾಯವಾಣಿಗಳಲ್ಲಿ ಅಕ್ರಮ • ಕರೆಗಳು ಲಕ್ಷ, ದಾಖಲು ಪ್ರಕರಣ ನೂರಕ್ಕೂ ಕಡಿಮೆ

ಆಹಾರ: ದೂರೇ ಲಂಚದ ಮೂಲ

• ಚಂದ್ರಹಾಸ ಹಿರೇಮಳಲಿ



ಬೆಂಗಳೂರು: ಪಡಿತರ ವಿತರಣೆಯಲ್ಲಿನ ಅಕ್ರಮ, ಕಾಳಸಂತೆಯಲ್ಲಿ ಆಹಾರ ಧಾನ್ಯ ಮಾರಾಟ ತಡೆಯಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆರಂಭಿಸಿದ್ದ 'ಸಹಾಯವಾಣಿ'ಗಳೇ ಲಂಚಕ್ಕೆ ದಾರಿ ಮಾಡಿಕೊಟ್ಟಿವೆ.

ಇಲಾಖೆಯ ಸಹಾಯವಾಣಿಗೆ ಕರೆ ಮಾಡುವ ಸಾರ್ವಜನಿಕರು ಹೇಳುವ ಪಡಿತರ ವಿತರಣೆಯ ಸಮಸ್ಯೆ, ಲೋಪಗಳು, ಹಗರಣಗಳ ಸ್ವರೂಪದ ಮಾಹಿತಿ ಪಡೆಯುವ ಸಿಬ್ಬಂದಿಯು, ಲೋಪ ಎಸಗಿದ ನ್ಯಾಯಬೆಲೆ ಅಂಗಡಿಗಳು, ಅದರ ಮಾಲೀಕರು, ಗೋದಾಮುಗಳ ಅಧಿಕಾರಿ, ಸಿಬ್ಬಂದಿಯ ವಿವರ, ಮೊಬೈಲ್ ಸಂಖ್ಯೆಯ ವಿವರ ಪಡೆದುಕೊಳ್ಳುತ್ತಾರೆ. ದೂರುದಾರರ ಜತೆಗಿನ ಸಂಪರ್ಕ ಕಡಿತಗೊಂಡ ನಂತರ ವ್ಯವಹಾರಕ್ಕೆ ಇಳಿಯುತ್ತಾರೆ ಎಂಬ ದೂರು ವ್ಯಾಪಕವಾಗಿದೆ.

ಸಹಾಯವಾಣಿಗೆ ಬಂದ ದೂರು ದಾಖಲಿಸಿಕೊಳ್ಳದೆ ನೇರವಾಗಿ ಆರೋಪಿತರಿಗೆ ಕರೆ ಮಾಡುತ್ತಾರೆ.

5ನೇ ಪುಟ ನೋಡಿ

ನಾಲ್ವರು ಸಿಬ್ಬಂದಿ ಭಾಗಿ ಶಂಕೆ

ಲಂಚದ ಕುರಿತು ಪ್ರತಿಕ್ರಿಯೆ ಪಡೆಯಲು ಇಲಾಖೆ ಆಯುಕ್ತರಿಗೆ ಕರೆ ಮಾಡುತ್ತಿದ್ದಂತೆ ಎಚ್ಚೆತ್ತುಕೊಂಡ ಇಲಾಖೆಯು ಆಂತರಿಕ ವಿಚಾರಣೆ ಆರಂಭಿಸಿದೆ.

'ವಿಷಯ ತಿಳಿಯುತ್ತಿದ್ದಂತೆ ತ್ವರಿತ ವಿಚಾರಣೆ ಮಾಡಿದ್ದೇವೆ. ಮೂರರಿಂದ ನಾಲ್ಕು ಸಿಬ್ಬಂದಿ ಅಕ್ರಮದಲ್ಲಿ ಭಾಗಿಯಾಗಿರುವ ಮಾಹಿತಿ ಸಿಕ್ಕಿದೆ. ಇನ್ನಷ್ಟು ತನಿಖೆಯ ನಂತರ ಲಂಚ ಪಡೆದವರನ್ನು ವಜಾ ಮಾಡಲಾಗುವುದು. ಹಿಂದೆಯೂ ಇಂತಹ ಪ್ರಕರಣಗಳು ನಡೆದಿರುವ ಮಾಹಿತಿ ಇಲ್ಲ. ಸಮಗ್ರ ತನಿಖೆ ನಡೆಸಿ, ಮಾಹಿತಿ ನೀಡುವಂತೆ ಪಡಿತರ ಪೂರೈಕೆಯ ಜಂಟಿ ನಿರ್ದೇಶಕರಿಗೆ ಸೂಚಿಸಲಾಗಿದೆ' ಎಂದು ಆಹಾರ ಇಲಾಖೆ ಆಯುಕ್ತೆ ಎಂ. ಕನಗವಲ್ಲಿ ಮಾಹಿತಿ ನೀಡಿದರು. ಸಹಾಯವಾಣಿಗೆ ಬರುವ ಎಲ್ಲ ಕರೆಗಳು ದೂರುಗಳೇ ಆಗಿರುವುದಿಲ್ಲ. ಪಡಿತರ ಮಾಹಿತಿ ಕೇಳಲು ಹೆಚ್ಚಿನ ಜನರು ಕರೆ ಮಾಡುತ್ತಾರೆ. ಹಾಗಾಗಿ, ಕಡಿಮೆ ದೂರು ದಾಖಲಾಗಿರಬಹುದು ಎಂದು ಆಯುಕ್ತರು ಪ್ರತಿಕ್ರಿಯಿಸಿದರು.

ಹಲೋ ನಾನು ಪಡಿತರ ಸಹಾಯವಾಣಿ...

ಪಡಿತರ ಅಕ್ರಮ ತಡೆಗೆ ಇರುವ ಸಹಾಯವಾಣಿ ಕರೆಗಳ ಹಲವು ಆಡಿಯೊ ಧ್ವನಿ ಮುದ್ರಿಕೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹರಿಹರ, ಬಳ್ಳಾರಿ ಜಿಲ್ಲೆಯ ಕೊಟ್ಟೂರು, ಕಲಬುರಗಿ ಜಿಲ್ಲೆಯ ಜೇವರ್ಗಿ ಸೇರಿದಂತೆ ಹಲವು ಭಾಗಗಳಿಂದ ಬಂದ ದೂರು ಕರೆಗಳ ಮಾಹಿತಿ ಬಳಸಿಕೊಂಡು ಹಣ ಪಡೆದಿರುವ ಮಾಹಿತಿ ಈ ಆಡಿಯೊಗಳಲ್ಲಿವೆ.

ನ್ಯಾಯಬೆಲೆ ಅಂಗಡಿ ಮಾಲೀಕ ಹಾಗೂ 'ಸಹಾಯವಾಣಿ' ಸಿಬ್ಬಂದಿ ಸಂಭಾಷಣೆ ಹೀಗಿದೆ.

ಸಹಾಯವಾಣಿ: ಹಲೋ ನೀವು ಮೈಸೂರಿನ ನ್ಯಾಯಬೆಲೆ ಅಂಗಡಿ ಮಾಲೀಕರಾ?.

ಮಾಲೀಕ: ಹೌದು. ನೀವು ಯಾರು?

ಸಹಾಯವಾಣಿ: ನಾವು ಆಯುಕ್ತರ ಕಚೇರಿಯ ಸಹಾಯವಾಣಿ ಸಿಬ್ಬಂದಿ.

ಮಾಲೀಕ: ಹೇಳಿ ಸಾರ್ ಏನು ವಿಷಯ?

ಸಹಾಯವಾಣಿ: ನಿಮ್ಮ ಬಗ್ಗೆ ಒಬ್ಬರು ದೂರು ನೀಡಿದ್ದಾರೆ. ನೀವು ತಿಂಗಳಲ್ಲಿ ಪಡಿತರ ಬಂದ ಐದು ದಿನ ಮಾತ್ರ ಅಂಗಡಿ ತೆರೆಯುತ್ತೀರಂತೆ.

ಮಾಲೀಕ: ಇಲ್ಲ ಸಾರ್, ಎಲ್ಲ ದಿನವೂ ತೆರೆದಿರುತ್ತದೆ.

ಸಹಾಯವಾಣಿ: ಸುಳ್ಳು ಹೇಳಬೇಡಿ. ನಮ್ಮ ಬಳಿ ಎಲ್ಲ ದಾಖಲೆ ಇವೆ. ದೂರು ದಾಖಲಾದರೆ ನಿಮ್ಮ ಪರವಾನಗಿ ರದ್ದಾಗುತ್ತದೆ. ಸುಮ್ಮನೆ ಆಯುಕ್ತರ ನ್ಯಾಯಾಲಯಕ್ಕೆ ಅಲೆದಾಡಬೇಕಾಗುತ್ತದೆ.

ಮಾಲೀಕ: ಹಾಗೆಲ್ಲ ಮಾಡಬೇಡಿ ಸಾರ್. 30 ವರ್ಷ ನಿಷ್ಠೆಯಿಂದ ದುಡಿದಿದ್ದೇವೆ. ಯಾರದೋ ಮಾತು ಕೇಳಿ ಅನ್ಯಾಯ ಮಾಡಬೇಡಿ.

ಸಹಾಯವಾಣಿ: ದೂರು ಬೇಡ ಎಂದರೆ ನಿಮಗೆ ಸ್ವಲ್ಪ ಹೊರೆ ಆಗುತ್ತದೆ.

ಮಾಲೀಕ: ಹೇಳಿ ಸಾರ್ ಏನು ಮಾಡಬೇಕು.

ಸಹಾಯವಾಣಿ: ₹ 50 ಸಾವಿರ ಕೊಡಿ ಸಾಕು.

ಮಾಲೀಕ: ಸಾರ್, ಅಷ್ಟೊಂದು ಆಗಲ್ಲ.

ಸಹಾಯವಾಣಿ: ಎಷ್ಟು ಕೊಡ್ತೀರ ಬೇಗ ಹೇಳಿ.

ಮಾಲೀಕ: ₹ 10 ಸಾವಿರ ಅಷ್ಟೇ ಸಾ.

5ನೇ ಪುಟ ನೋಡಿ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟ

ಒತ್ತುವರಿ: ನ್ಯಾಯಾಂಗ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದಲ್ಲಿ ಕೆರೆಗಳು, ರಾಜಕಾಲುವೆ ಮತ್ತು ಬಫರ್ ವಲಯ ಒತ್ತುವರಿ ಮಾಡಿರುವುದನ್ನು ಗುರುತಿಸಿ ಕ್ರಮ ತೆಗೆದುಕೊಳ್ಳಲು ನ್ಯಾಯಾಂಗ ಅಧಿಕಾರಿಯಿಂದ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆಯಲ್ಲಿ ಸೋಮವಾರ ಪ್ರಕಟಿಸಿದರು.

ನಗರದಲ್ಲಿ ಮಳೆಯಿಂದ ಉಂಟಾದ ಪ್ರವಾಹದ ಕುರಿತು ಸದನದಲ್ಲಿ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ತನಿಖೆಗೆ ನೆರವಾಗಲು ತಾಂತ್ರಿಕ ವ್ಯಕ್ತಿಗಳನ್ನು ಒಳಗೊಂಡ ಒಂದು ಸಮಿತಿಯನ್ನೂ ರಚಿಸಲಾಗುವುದು ಎಂದು ಹೇಳಿದರು.

ಇದರ ಜತೆಗೆ ಹಿಂದೆ ಆಗಿರುವ ಒತ್ತುವರಿಗಳನ್ನು ಗುರುತಿಸಿ ಕ್ರಮತೆಗೆದುಕೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಕೆರೆಗಳು, ರಾಜಕಾಲುವೆ, ಬಫರ್ ವಲಯದ ಒತ್ತುವರಿ ತಡೆಯುವುದಕ್ಕೂ ಈ ಸಮಿತಿ ನೆರವಾಗಲಿದೆ. ಕೆರೆಗಳನ್ನು ಅಭಿವೃದ್ಧಿಪಡಿಸುವುದರ ಜತೆಗೆ ಅವುಗಳು ಒತ್ತುವರಿ ಆಗದಂತೆ ತಡೆಯುವುದು ಸರ್ಕಾರದ ಕೆಲಸ ಆಗಬೇಕಾಗಿದೆ ಎಂದು ಅವರು ತಿಳಿಸಿದರು.

> **ಕೆರೆಗಳ ಒತ್ತುವರಿ, ದುರ್ಬಳಕೆ ಕುರಿತು ತನಿಖೆ ನಿರ್ಧಾರ ಸ್ವಾಗತಿಸುತ್ತೇನೆ. ಯಾವೆಲ್ಲಾ ಕಾಲದಲ್ಲಿ ಕೆರೆಗಳ ಒತ್ತುವರಿಯಾಗಿದೆ. ಅದರ ಉದ್ದೇಶ ಏನಿತ್ತು ಎಂಬ ಬಗ್ಗೆ ತನಿಖೆ ಆಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ**
>
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ಬೆಂಗಳೂರಿನಲ್ಲಿ ಪ್ರವಾಹ ತಡೆಗೆ ಮಾಸ್ಟರ್‌ಪ್ಲಾನ್ ರೂಪಿಸಲಾಗುವುದು. ಇದರಡಿ ರಾಜಕಾಲುವೆಗಳ ನೀರನ್ನು ಪಿನಾಕಿನಿ ನದಿಯ ಮೂಲಕ ಕಾವೇರಿ ನದಿಗೆ ಸಂಪರ್ಕ ಕಲ್ಪಿಸಲಾಗುವುದು. ಬಿಡಿಎ, ಬಿಬಿಎಂಪಿ, ಬಿಎಂಆರ್‌ಡಿ ಸೇರಿ ಯೋಜನೆ ರೂಪಿಸಲಾಗುವುದು. ಮಳೆ ನಿರ್ವಹಣೆ ನಿರಂತರ ಪ್ರಕ್ರಿಯೆ. ಇದಕ್ಕಾಗಿ ಪ್ರತ್ಯೇಕ ಕಾರ್ಯಪಡೆ ರಚಿಸಲಾಗುವುದು ಎಂದೂ ಅವರು ಹೇಳಿದರು.

ಕೆರೆಗಳು, ರಾಜಕಾಲುವೆ ಒತ್ತುವರಿ ಸಂಬಂಧ 2006 ರಲ್ಲಿ ಹಸಿರು ನ್ಯಾಯಮಂಡಳಿಯ ಆದೇಶ ಬಂದ ನಂತರ ನಗರದಲ್ಲಿ ಯಾವುದೇ ಕೆರೆ, ರಾಜಕಾಲುವೆ, ಬಫರ್ ವಲಯ ಒತ್ತುವರಿ ಆಗಿಲ್ಲ. ಎನ್‌ಜಿಟಿ ಆದೇಶಕ್ಕೂ ಮೊದಲು ಮತ್ತು ನಂತರ ಇವುಗಳ ಸ್ಥಿತಿಯನ್ನು ಗುರುತಿಸುವ ಕಾರ್ಯ ನಡೆಯಲಿದೆ. ಹಲವು ರಾಜಕಾಲುವೆಗಳ ವಿಸ್ತೀರ್ಣ 30 ಮೀಟರ್ ಇದ್ದದ್ದು 3 ಮೀಟರ್‌ಗಳಿಗೆ ಇಳಿದಿವೆ. ಬಡಾವಣೆಗಳಲ್ಲಿ ಮಳೆ ನೀರು ಹರಿದು ಹೋಗಲು ಕಾಲುವೆಗಳಿಗೆ ಅವಕಾಶ ಮಾಡಿಲ್ಲ ಎಂದರು.

ತೆರಿಗೆ ವಂಚನೆ ಪ್ರಕರಣ: 'ಸುಪ್ರೀಂ' ಮೆಟ್ಟಿಲೇರಿರುವ ಐ.ಟಿ.

ಡಿ.ಕೆ. ಶಿವಕುಮಾರ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ತೆರಿಗೆ ವಂಚನೆ ಪ್ರಕರಣಗಳನ್ನು ವಜಾಗೊಳಿಸಿರುವ ಹೈಕೋರ್ಟ್ ಆದೇಶದ ವಿರುದ್ಧ ಆದಾಯ ತೆರಿಗೆ ಇಲಾಖೆ (ಐಟಿ) ಸಲ್ಲಿಸಿರುವ ಅರ್ಜಿಯ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಜೆ.ಕೆ. ಮಹೇಶ್ವರಿ ಅವರನ್ನು ಒಳಗೊಂಡ ಪೀಠವು, ಕರ್ನಾಟಕ ಹೈಕೋರ್ಟ್‌ನ ಕೆಲವು ಅಭಿಪ್ರಾಯಗಳಿಗೆ ತಡೆಯಾಜ್ಞೆ ನೀಡಿದೆ. ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು ನಾಲ್ಕು ವಾರಗಳ ಕಾಲಾವಕಾಶ ನೀಡಿರುವ ನ್ಯಾಯಪೀಠ, ವಿಚಾರಣೆಯನ್ನು ಆರು ವಾರಗಳ ಕಾಲ ಮುಂದೂಡಿತು.

ಅಧಿಕಾರಿಯೊಬ್ಬರು ನೀಡಿದ ಕ್ರಿಮಿನಲ್ ದೂರನ್ನು ವಿಚಾರಣೆಗೆ ಪರಿಗಣಿಸುವ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಕುರಿತು ಹೈಕೋರ್ಟ್ ನೀಡಿರುವ ಹೇಳಿಕೆಗಳಿಗೆ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ. ಆದರೆ, ಈ ಸಂಬಂಧ ಹೊಸದಾಗಿ ವಿಚಾರಣೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಲು ಆದಾಯ ತೆರಿಗೆ ಇಲಾಖೆ ಮುಕ್ತವಾಗಿದೆ ಎಂದಿದೆ.

ವಿಚಾರಣೆಯ ವೇಳೆ, ಪ್ರತಿವಾದಿಯ ಪರವಾಗಿ ಹಿರಿಯ ವಕೀಲರಾದ ಮುಕುಲ್ ರೊಹಟಗಿ ಹಾಗೂ ಸಿ.ಎ. ಸುಂದರಂ ವಾದ ಮಂಡಿಸಿದರೆ, ಐಟಿ ಇಲಾಖೆಯ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಾಮನ್ ವಾದ ಮಂಡಿಸಿದರು.

2017ರ ಆಗಸ್ಟ್‌ನಲ್ಲಿ ನಡೆದ ಐಟಿ ದಾಳಿಯ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ವಿರುದ್ಧ ದಾಖಲಾಗಿರುವ ಮೂರು ಪ್ರಕರಣಗಳನ್ನು ರದ್ದುಗೊಳಿಸುವಂತೆ ವಿಶೇಷ ನ್ಯಾಯಾಲಯ 2019ರ ಫೆಬ್ರುವರಿ 29ರಂದು ನೀಡಿದ ಆದೇಶದ ವಿರುದ್ಧ ಆದಾಯ ತೆರಿಗೆ ಇಲಾಖೆಯು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ಮರು ಪರಿಶೀಲನಾ ಅರ್ಜಿಯನ್ನು ಹೈಕೋರ್ಟ್ 2021ರ ಏಪ್ರಿಲ್‌ನಲ್ಲಿ ವಜಾಗೊಳಿಸಿತ್ತು.

ಈ ನಡುವೆ, ಶಿವಕುಮಾರ್ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಿದ್ದರೂ ಬಹಿರಂಗಪಡಿಸದ ಆದಾಯದ ಪ್ರಮಾಣವನ್ನು ಅಂದಾಜು ಹಾಕಿದ ನಂತರ ಹೊಸ ವಿಚಾರಣೆ ನಡೆಸಲು ಇಲಾಖೆಗೆ ವಿಶೇಷ ನ್ಯಾಯಾಲಯ ಅನುಮತಿ ನೀಡಿತ್ತು. ಶಿವಕುಮಾರ್ ನಿವಾಸ ಹಾಗೂ ಕಚೇರಿಯ ಮೇಲೆ ದಾಳಿ ನಡೆಸಿದ್ದ ಆದಾಯ ತೆರಿಗೆ ಇಲಾಖೆಯು ಮೂರು ತೆರಿಗೆ ವಂಚನೆ ಪ್ರಕರಣಗಳನ್ನು ದಾಖಲಿಸಿತ್ತು. ಇದರೊಂದಿಗೆ, ಬಿಡದಿ ಬಳಿಯ ಈಗಲ್‌ಟನ್ ರೆಸಾರ್ಟ್‌ಗೆ ದಾಳಿ ನಡೆಸಿದಾಗ ಡಿ.ಕೆ.ಶಿವಕುಮಾರ್ ಅವರು ತಮ್ಮ ಬಳಿ ಇದ್ದ ಚೀಟಿಯೊಂದನ್ನು ಹರಿದು ಹಾಕಿ ಸಾಕ್ಷ್ಯ ನಾಶ ಮಾಡಿದ್ದಾರೆ ಎಂದು ಐ.ಟಿ ಆರೋಪಿಸಿತ್ತು.

ಇನ್ನೊಂದು ಸುದ್ದಿ 5

ಅಕ್ರಮ ಸಾಲ ಆ್ಯಪ್: ಗೂಗಲ್ ಮೇಲೆ ಒತ್ತಡ

ಮುಂಬೈ (ರಾಯಿಟರ್ಸ್): ದೇಶದಲ್ಲಿ ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳನ್ನು ನಿಯಂತ್ರಿಸುವ ಉದ್ದೇಶದಿಂದ, ಗೂಗಲ್ ಕಂಪನಿಯು ತನ್ನ ಪರಿಶೀಲನಾ ಪ್ರಕ್ರಿಯೆಯನ್ನು ಇನ್ನಷ್ಟು ಕಠಿಣವಾಗಿಸಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚಿಸಿವೆ.

11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಿಕ್ಷಕರ ವರ್ಗಾವಣೆ ನಿಯಮ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆಗೆ ಇದ್ದ ಹಲವು ನಿರ್ಬಂಧಗಳನ್ನು ತೆಗೆದು, 'ಶಿಕ್ಷಕ ಸ್ನೇಹಿ' ವರ್ಗಾವಣೆ ನೀತಿ ರೂಪಿಸಲು ಸರ್ಕಾರ ಮುಂದಾಗಿದೆ. ಇದಕ್ಕಾಗಿ, ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ ತಿದ್ದುಪಡಿ ತರಲಿದೆ.

ತಿದ್ದುಪಡಿ ಮಸೂದೆಗೆ ಸೋಮವಾರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದ್ದು, ಇದೇ ಅಧಿವೇಶನದಲ್ಲಿ ಮಂಡನೆಯಾಗಲಿದೆ. ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಇನ್ನುಮುಂದೆ ಆ ನಿರ್ಬಂಧ ಇರುವುದಿಲ್ಲ. ಆದರೆ, ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷ ಮಾತ್ರ ಅವಕಾಶ ಇರುವುದಿಲ್ಲ. ಆದರೆ, ಒಮ್ಮೆ ವರ್ಗಾವಣೆಯಾದ ಬಳಿಕ ಮತ್ತೆ ಮೂರು ವರ್ಷ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

ಕಲ್ಯಾಣ ಕರ್ನಾಟಕದ ಜಿಲ್ಲೆಗಳು (377 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ಹೋಗಬಯಸುವವರಿಗೆ ವಿಶೇಷ ಆದ್ಯತೆ ಸಿಗಲಿದೆ. ಸಾರ್ವತ್ರಿಕ ವರ್ಗಾವಣೆ ಒಟ್ಟು ವೃಂದ ಬಲದ ಶೇ 11ರಷ್ಟು ಮಿತಿ ಇರುತ್ತದೆ. ವಿಶೇಷ ಆದ್ಯತೆಯಡಿ ವರ್ಗಾವಣೆ ಬಯಸುವವರಿಗೆ ಈ ನಿಯಮ ಅನ್ವಯವಾಗದು. ಉಳಿದೆಲ್ಲ ನಿಯಮಗಳು ಮುಂದುವರಿಯಲಿವೆ.

ಯಾವುದೇ ಒಂದು ಘಟಕ ಹಾಗೂ ವೃಂದದಲ್ಲಿ ಕನಿಷ್ಠ 10 ವರ್ಷ ಅಥವಾ ಎಲ್ಲ ವೃಂದಗಳೂ ಸೇರಿ 15 ವರ್ಷ ಕೆಲಸ ಮಾಡಿದ ಶಿಕ್ಷಕರನ್ನು ಶೇ 25ರಷ್ಟು ಮಿತಿಯ ಒಳಗೆ ಖಾಲಿ ಹುದ್ದೆಗಳಿರುವ ತಾಲ್ಲೂಕಿಗೆ ವರ್ಗಾವಣೆಗೆ ಅವಕಾಶ ಇರುತ್ತದೆ.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ತರೂರ್ –ಗೆಹಲೋತ್ ಸ್ಪರ್ಧೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಹಿರಿಯ ನಾಯಕ ಶಶಿ ತರೂರ್ ಅವರ ಸ್ಪರ್ಧೆಗೆ ಪಕ್ಷದ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸೋಮವಾರ ಹಸಿರು ನಿಶಾನೆ ತೋರಿದ್ದಾರೆ. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸಹ ಆಕಾಂಕ್ಷಿಯಾಗಿದ್ದು, ಚುನಾವಣಾ ಕಣ ರಂಗೇರುವ ನಿರೀಕ್ಷೆ ಇದೆ.


ಶಶಿ ತರೂರ್


ಅಶೋಕ್ ಗೆಹಲೋತ್

ರಾಹುಲ್ ಗಾಂಧಿ ಅವರನ್ನೇ ಮತ್ತೊಮ್ಮೆ ಅಧ್ಯಕ್ಷರನ್ನಾಗಿ ಆಯ್ಕೆಮಾಡಬೇಕೆಂದು ಪಕ್ಷದ ಕೆಲವು ಪ್ರಮುಖ ನಾಯಕರು ಒತ್ತಡ ಹೇರಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಶಶಿ ತರೂರ್ ಸೋಮವಾರ ಸೋನಿಯಾ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದಾಗ, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅನುಮತಿ ನೀಡಿದರು. ಗಾಂಧಿ ಕುಟುಂಬದ ಬೆಂಬಲಿತ ಅಭ್ಯರ್ಥಿ ತಮ್ಮ ಎದುರು ಕಣಕ್ಕಿಳಿದರೂ ತರೂರ್ ಅವರು ಸ್ಪರ್ಧೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಮೂಲಗಳು ಖಚಿತಪಡಿಸಿವೆ. 'ರಾಹುಲ್ ಗಾಂಧಿ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರೆ ಸ್ಪರ್ಧೆಯಿಂದ ಹಿಂದೆ ಸರಿಯುವೆ' ಎಂದು ತರೂರ್ ಹೇಳಿಕೊಂಡಿದ್ದಾರೆ.

ದೇವನಹಳ್ಳಿ, ಹೊಸೂರಿಗೆ ಮೆಮು ರೈಲು

ಬೆಂಗಳೂರು: ಹೊಸೂರು ಮತ್ತು ದೇವನಹಳ್ಳಿಗೆ ಹೊಸದಾಗಿ ಮೆಮು (ಎಲೆಕ್ಟ್ರಿಕ್) ರೈಲುಗಳ ಸಂಚಾರ ಆರಂಭಿಸಲಾಗಿದೆ.

ಯಶವಂತಪುರ–ಹೊಸೂರು ಮೆಮು ಎಕ್ಸ್‌ಪ್ರೆಸ್ ವಿಶೇಷ ರೈಲು (06591) ಯಶವಂತಪುರದಿಂದ ಬೆಳಿಗ್ಗೆ 6.10ಕ್ಕೆ ಹೊರಟು 7.50ಕ್ಕೆ ಹೊಸೂರು ತಲುಪುತ್ತದೆ. ಹೊಸೂರಿನಿಂದ (06592) 8.15ಕ್ಕೆ ಹೊರಟು 9.50ಕ್ಕೆ ಯಶವಂತಪುರ ತಲುಪುತ್ತದೆ. ಲೊಟ್ಟೆಗೊಲ್ಲಹಳ್ಳಿ, ಹೆಬ್ಬಾಳ, ಬಾಣಸವಾಡಿ, ಬೆಳಂದೂರು ರಸ್ತೆ, ಕಾರ್ಮೆಲರಂ, ಹೀಲಳಿಗೆ ಮತ್ತು ಆನೇಕಲ್ ಮಾರ್ಗದಲ್ಲಿ ಸಂಚರಿಸಲಿದೆ.

ಯಶವಂತಪುರ–ದೇವನಹಳ್ಳಿ ಮೆಮು ಎಕ್ಸ್‌ಪ್ರೆಸ್ ವಿಶೇಷ ರೈಲು (06593) ಯಶವಂತಪುರದಿಂದ 10ಕ್ಕೆ ಹೊರಟು 10.55ಕ್ಕೆ ದೇವನಹಳ್ಳಿ ತಲುಪುತ್ತದೆ. ದೇವನಹಳ್ಳಿಯಿಂದ (06594) 12.30ಕ್ಕೆ ಹೊರಟು ಯಶವಂತಪುರ, ಲೊಟ್ಟೆಗೊಲ್ಲಹಳ್ಳಿ, ಕೊಡಿಗೇಹಳ್ಳಿ, ಯಲಹಂಕ, ವಿಮಾನ ನಿಲ್ದಾಣದಲ್ಲಿ ರೈಲು ನಿಲುಗಡೆಯಾಗಲಿದೆ.



ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ ಜೆ.ಪಿ ನಗರದ ಸಿಂಧೂರ ಕನ್ವೆನ್ಷನ್ ಹಾಲ್‌ನಲ್ಲಿ ಕರಕುಶಲ ವಸ್ತು ಪ್ರದರ್ಶನವನ್ನು ಈಚೆಗೆ ಉದ್ಘಾಟಿಸಲಾಯಿತು. ನಿಗಮದ ಅಧ್ಯಕ್ಷ ಮಾರುತಿ ಅಷ್ಟಗಿ, ನವದೆಹಲಿ ಕರಕುಶಲ ನಿಗಮದ ಆಯುಕ್ತ ಶಾಂತ ಮನು, ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪಾ.ಡಿ. ಮೌದ್ಗಿಲ್ ಇದ್ದಾರೆ. 26ರ ವರೆಗೆ ಪ್ರದರ್ಶನ ನಡೆಯಲಿದೆ.

ಪುಸ್ತಕ ಖರೀದಿಗೆ ಸಮಿತಿ ರಚನೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಹಾಸ್ಟೆಲ್‌ಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಲಾಗಿದೆ.

ಶಿಕ್ಷಣ ತಜ್ಞರು, ಸಾಹಿತಿಗಳು, ಕರ್ನಾಟಕ ಪ್ರಕಾಶಕರ ಸಂಘದ ಪ್ರತಿನಿಧಿ ಒಳಗೊಂಡ ಸಮಿತಿ ರಚಿಸುವಂತೆ ಹಾಗೂ ಸಮಿತಿ ಶಿಫಾರಸು ಮಾಡಿದ ಪುಸ್ತಕಗಳನ್ನು ಖರೀದಿಸುವಂತೆ ಕರ್ನಾಟಕ ಪ್ರಕಾಶಕರ ಸಂಘ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು.

ಮನವಿ ಪುರಸ್ಕರಿಸಿರುವ ಸರ್ಕಾರ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 16 ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಿದೆ. ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಸಿ.ಎಂ, ಮುಖ್ಯ ಆಯುಕ್ತರ ಕಚೇರಿಯಿಂದ ಸೂಚನೆ • ವಲಯ ಎಂಜಿನಿಯರ್‌ಗಳಿಗೆ ಜವಾಬ್ದಾರಿ

ರಾಜಕಾಲುವೆ ಒತ್ತುವರಿ ತೆರವು ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿಯಿಂದ ಮಹದೇವಪುರ ವಲಯದಲ್ಲಿ ಮಳೆ ನೀರು ಹೊರ ವರ್ತುಲ ರಸ್ತೆ, ಬಡಾವಣೆ, ಐಟಿ ಕಂಪನಿಗಳಿಗೆ ನುಗ್ಗಿತ್ತು. ಈ ಸಂದರ್ಭದಲ್ಲಿ ಎಲ್ಲ ರೀತಿಯ ಒತ್ತುವರಿ ತೆರವು ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದರು. ಅಬ್ಬರದಿಂದ ಪ್ರಾರಂಭವಾಗಿದ್ದ ಒತ್ತುವರಿ ತೆರವು ಕಾರ್ಯಾಚರಣೆ ಅವರ ಸೂಚನೆ ಮೇರೆಗೆ ಇದೀಗ ಎಲ್ಲೆಡೆ ಸ್ಥಗಿತಗೊಂಡಿದೆ.

‘ರಾಜಕಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆ ಮೇಲ್ನೋಟಕ್ಕಷ್ಟೇ ಇರಬೇಕು ಎಂದು ಮುಖ್ಯಮಂತ್ರಿ ಕಚೇರಿಯಿಂದಲೇ ಸೂಚನೆ ಬಂದಿದೆ. ಇದನ್ನು ಪಾಲಿಸಲು ಮುಖ್ಯ ಆಯುಕ್ತರು, ವಲಯ ಆಯುಕ್ತರು ಮೌಖಿಕವಾಗಿ ಆದೇಶಿಸಿದ್ದಾರೆ. ಹೀಗಾಗಿಯೇ ಮುಖ್ಯ ಆಯುಕ್ತರು ಒತ್ತುವರಿ ತೆರವು ಕಾರ್ಯಾಚರಣೆ ಆರಂಭವಾದ ಎರಡು ದಿನಗಳ ನಂತರ ಎಲ್ಲೂ ಕಾಣಿಸಿಕೊಳ್ಳುತ್ತಿಲ್ಲ. ಕೆಳಮಟ್ಟದ ಅಧಿಕಾರಿಗಳನ್ನು ಮೇಲ್ನೋಟಕ್ಕೆ ಕೆಲಸ ಮಾಡುವಂತೆ ತೋರಿಸುತ್ತಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಮುಖ್ಯಮಂತ್ರಿ ಕಚೇರಿ ಹಾಗೂ ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.



ಕಾಡುಗೋಡಿಯ ವಿಜಯಲಕ್ಷ್ಮಿ ಕಾಲೊನಿಯಲ್ಲಿ ರಾಜಕಾಲುವೆಯ ಮೇಲಿದ್ದ ಶೆಡ್ ಅನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

‘ಒತ್ತುವರಿ ಸರ್ವೆ ನಡೆಸಲು ಕಂದಾಯ ಇಲಾಖೆ ಸರ್ವೆಯರ್‌ಗಳನ್ನು ಕಳುಹಿಸುತ್ತಿಲ್ಲ. ಸರ್ವೆಯರ್‌ಗಳ ಕೊರತೆ ಇದೆ ಎಂದು ಹೇಳುತ್ತಿದೆ. ಒತ್ತುವರಿ ಗುರುತಿಸದೆ ತೆರವು ಸಾಧ್ಯವಿಲ್ಲ. ಸ್ವಲ್ಪ ದಿನ ಈ ಮಾಹಿತಿಯನ್ನೇ ನೀಡಿ ತೆರವು ಕಾರ್ಯಾಚರಣೆಯನ್ನು ಅತಿ ಕಡಿಮೆ ಮಾಡಿ’ ಎಂಬ ಸೂಚನೆ ರವಾನೆಯಾಗಿದೆ ಎನ್ನಲಾಗಿದೆ.

ಬಿಬಿಎಂಪಿ ರಾಜಕಾಲುವೆ ವಿಭಾಗಕ್ಕೆ ಪ್ರತ್ಯೇಕವಾಗಿ ಮುಖ್ಯ ಎಂಜಿನಿಯರ್ ಇದ್ದಾರೆ. ಆದರೆ ಆ ವಿಭಾಗದಲ್ಲಿ ಯಾವುದೇ ಮಾಹಿತಿ ಲಭ್ಯವಾಗುತ್ತಿಲ್ಲ. ‘ಎಲ್ಲವನ್ನೂ ವಲಯ ಎಂಜಿನಿಯರ್‌ಗಳಿಗೆ ವಹಿಸಲಾಗಿದೆ’ ಎಂದು ಸಬೂಬು ನೀಡುತ್ತಿದ್ದಾರೆ.

ಐದು ಕಡೆ ತೆರವು: ಮಹದೇವಪುರ ವಲಯದಲ್ಲಿ ಐದು ಕಡೆ ರಾಜಕಾಲುವೆಗಳ ಒತ್ತುವರಿ ತೆರವು ಮಾಡಲಾಗಿದೆ ಎಂದು ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದ್ದಾರೆ. ಆದರೆ, ಕಳೆದ ವಾರ ತೆರವು ಕಾರ್ಯಾಚರಣೆ ಮಾಡುತ್ತಿದ್ದ ಸ್ಥಳಗಳಲ್ಲೇ ಸೋಮವಾರವೂ ಒಂದಷ್ಟು ಕೆಲಸ ಮಾಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಮಾರತಹಳ್ಳಿ ಪೊಲೀಸ್ ಠಾಣೆ, ಕಾಡುಬೀಸನಹಳ್ಳಿ ಜಲಮಂಡಳಿಯ ಎಸ್‌ಟಿಪಿ, ಗರುಡಾಚಾರ್ ಪಾಳ್ಯ ಕೆರೆಯ ಬಳಿಯ ಅಪಾರ್ಟ್‌ಮೆಂಟ್ ಗೋಡೆ, ಪುರ್ವ ಪಾರ್ಕ್ ರಿಡ್ಜ್ ಹಿಂಭಾಗ ರಾಜಕಾಲುವೆಯ ಮೇಲಿದ್ದ ಶೆಡ್ ತೆರವು ಮಾಡಲಾಗಿದೆ. ಗ್ರೀನ್ ವುಡ್ ರೆಸಿಡೆನ್ಸಿ ಆವರಣದಲ್ಲಿ ಸುಮಾರು 150 ಮೀಟರ್ ಉದ್ದದ ರಾಜಕಾಲುವೆಯ ಮೇಲೆ ಅಳವಡಿಸಿದ್ದ ಸ್ಲ್ಯಾಬ್ ತೆರವು ಕಾರ್ಯ ನಡೆಯುತ್ತಿದೆ. ಅಲ್ಲದೆ ಸಲಾರ್‌ಪುರಿಯ ಆವರಣದಲ್ಲಿ ಕಾಲುವೆ ಕಾಮಗಾರಿ ನಡೆಸಬೇಕಿದ್ದು, ಕಾಮಗಾರಿ ನಡೆಸಿದ ನಂತರ ಸಲಾರ್‌ಪುರಿಯ ಕಟ್ಟಡದ ಗೋಡೆಯನ್ನು ತೆರವುಗೊಳಿಸಲಾಗುತ್ತದೆ. ವಿಪ್ರೋ ಕ್ಯಾಂಪಸ್‌ನ ಒಳಭಾಗದಲ್ಲಿ ಸರ್ವೆ ಪ್ರಕಾರ ಕಾಲುವೆಯ ಅಗಲ 2.4 ಮೀ. ಇದ್ದು, ಕಾಲುವೆಯ ಮೇಲೆ ಏನನ್ನೂ ನಿರ್ಮಿಸಿಲ್ಲ. ಆದರೆ, ಕಾಲುವೆಯನ್ನು ಸ್ಲ್ಯಾಬ್‌ನಿಂದ ಮುಚ್ಚಲಾಗಿದ್ದು, ಪಾಲಿಕೆಯ ಮೇಲ್ವಿಚಾರಣೆಯಲ್ಲಿ ಅದನ್ನು ತೆರವುಗೊಳಿಸಲಾಗುತ್ತಿದೆ ಎಂದು ಕಬಾಡೆ ಹೇಳಿದ್ದಾರೆ.

‘ಪ್ರಜ್ಞಾವಂತ ಸಮುದಾಯ ರೂಪಿಸುವ ಜವಾಬ್ದಾರಿ ಸಾಹಿತ್ಯಕ್ಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಂಪರೆಯ ಬಗೆಗೆ ಗೌರವ, ಸಮಕಾಲೀನತೆಯ ಕುರಿತು ಎಚ್ಚರ ಮತ್ತು ಭವಿಷ್ಯದ ಬಗ್ಗೆ ಭರವಸೆ ಇದ್ದವರು ಶ್ರೇಷ್ಠ ಸಾಹಿತಿಯಾಗಲು ಸಾಧ್ಯ’ ಎಂದು ಸಾಹಿತಿ ಜಿ.ಎನ್. ರಂಗನಾಥ ರಾವ್ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಜನಶಕ್ತಿ ಕೇಂದ್ರ ಮತ್ತು ನರಹಳ್ಳಿ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋಜಿಸಿದ್ದ 2022ನೇ ಸಾಲಿನ ನರಹಳ್ಳಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಥೆಗಾರ, ವಿಮರ್ಶಕ ರಾಜಶೇಖರ ಹಳೆಮನೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ‘ಯಾವುದೇ ಒಂದು ಸಮಾಜದ ಅಭಿವೃದ್ಧಿಯಾಗಬೇಕಾದರೆ ಸಣ್ಣಪುಟ್ಟ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸ ಆಗಬೇಕು. ಪ್ರಜ್ಞಾವಂತ ಸಮುದಾಯವನ್ನು ರೂಪಿಸುವ ಜವಾಬ್ದಾರಿ ಸಾಹಿತ್ಯಕ್ಕಿದೆ’ ಎಂದರು.

‘ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ತಮ್ಮ ವ್ಯಕ್ತಿತ್ವದಂತೆ ಬರವಣಿಗೆಯಲ್ಲಿಯೂ ಸಾಮಾಜಿಕ ಸಂವೇದನೆ ಮತ್ತು ಮಾನವೀಯ ಅಂತಃಕರಣ ಕಾಪಾಡಿಕೊಂಡವರು. ಟ್ರಸ್ಟ್ ಕೂಡ ಅದೇ ಆಶಯ ಹೊಂದಿರುವ ಕಾರಣ ಅತ್ಯುತ್ತಮ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ. ಅವರಿಗೆ ಬಂದ ಪ್ರಶಸ್ತಿಗಳ ಮೊತ್ತವನ್ನು ಇಂತಹ ಸತ್ಕಾರ್ಯಕ್ಕೆ ಬಳಸುತ್ತಿರುವುದು ಶ್ಲಾಘನೀಯ’ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನರಹಳ್ಳಿ ಪ್ರತಿಷ್ಠಾನದ ಅಧ್ಯಕ್ಷ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಮಾಸ್ತಿಯವರ ರಾಮನವಮಿ ಕವನವನ್ನು ಉದಾಹರಿಸಿ, ಪುರಾಣೇತಿಹಾಸದ ಪಾತ್ರಗಳನ್ನು ತಮ್ಮ ದಿನನಿತ್ಯ ಕಾಣುವ ವ್ಯಕ್ತಿಗಳಲ್ಲಿ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವ ಪ್ರವೃತ್ತಿಯನ್ನು ವಿಶ್ಲೇಷಿಸಿದರು.

ವಿಮರ್ಶಕ ವೆಂಕಟಗಿರಿ ದಳವಾಯಿ ರಾಜಶೇಖರ ಮಾತನಾಡಿದರು. ಸಿ.ಕೆ. ರಾಮೇಗೌಡ, ನರಹಳ್ಳಿ ಬಾಲಸುಬ್ರಹ್ಮಣ್ಯ, ಮಲ್ಲಿಕಾ ಘಂಟಿ, ಬಿ.ಆರ್. ಲಕ್ಷ್ಮಣರಾವ್, ದುಂಡಿರಾಜ್, ಪಿ.ಚಂದ್ರಿಕಾ, ಟಿ.ಎನ್. ನಾಗರಾಜ ಶೆಟ್ಟಿ ಇದ್ದರು.



ನರಹಳ್ಳಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಥೆಗಾರ, ವಿಮರ್ಶಕ ರಾಜಶೇಖರ ಹಳೆಮನೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಧ್ಯಕ್ಷರಾಗಿ ಬೆಳ್ಳಿಗೌಡ ಆಯ್ಕೆ

ಬೆಂಗಳೂರು: ಬೆಂಗಳೂರು ಸೀಮಾ ಕಾರುಭಾರಿಗಳ ಸಂಘದ 36ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬೆಳ್ಳಿಗೌಡ ಆಯ್ಕೆಯಾಗಿದ್ದಾರೆ.

ಕಿರಣ್ ಕುಮಾರ್ ಎಮ್. ಮತ್ತು ರೂಪೇಶ್ ಕುಮಾರ್ ನಾರಾಯಣನ್(ಉಪಾಧ್ಯಕ್ಷರು), ಗಿರೀಶ್ ನಾರಾಯಣ್ (ಕಾರ್ಯದರ್ಶಿ), ಎಸ್. ಬಾಲಸುಬ್ರಮಣಿಯನ್ (ಖಜಾಂಚಿ), ಚಂದ್ರ ಆರ್., ಹರಿರಾವ್. ಆರ್., ಕಿರಣ್ ಎಸ್., ಕೃಷ್ಣಮೂರ್ತಿ ಆರ್., ಮಂಜುನಾಥ್ ಎಚ್.ವಿ., ಮೋಹನ್‌ಕುಮಾರ್ ಎಚ್.ವಿ., ರವಿ.ಬಿ.ಸಾಲುಂಕೆ, ಶ್ರೀನಾಥ್.ವಿ., ವ್ಯವಸ್ಥಾಪಕ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲ್ಯಾಪ್‌ಟಾಪ್ ವಿತರಣೆ ವಿಳಂಬ ವಿದ್ಯಾರ್ಥಿಗಳ ಆಕ್ರೋಶ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಲ್ಯಾಪ್‌ಟಾಪ್ ವಿತರಿಸಲು ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರಜಾಸತ್ತಾತ್ಮಕ ದಲಿತ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಘೋಷಣೆ ಕೂಗಿದ ವಿದ್ಯಾರ್ಥಿಗಳು, ಲ್ಯಾಪ್‌ಟಾಪ್ ಹಂಚಿಕೆ ಹಗರಣ ಕುರಿತು ತನಿಖೆ ನಡೆಸಬೇಕು. ಕುಲಪತಿ ಮತ್ತು ಕುಲಸಚಿವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದರು.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಬೇಕಾಗಿತ್ತು. ಶೈಕ್ಷಣಿಕ ವರ್ಷ 2020-21 ಸಾಲಿನ ಅವಧಿ ಕಳೆದರೂ ವಿದ್ಯಾರ್ಥಿಗಳಿಗೆ ಇದುವರೆಗೂ ಲ್ಯಾಪ್‌ಟಾಪ್ ವಿತರಿಸಿಲ್ಲ ಎಂದರು.

‘ಬಾಬಾ ಸಾಹೇಬ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಿದ್ದರೂ, ಸಂಶೋಧನಾ ಕೇಂದ್ರಕ್ಕೆ ಪ್ರಯತ್ನಿಸಿಲ್ಲ’ ಎಂದು ಒಕ್ಕೂಟದ ರಾಜ್ಯ ಪ್ರಧಾನ ಸಂಚಾಲಕ ವೇಣುಗೋಪಾಲ್ ಮೌರ್ಯ ದೂರಿದರು.

ಅಂತರರಾಷ್ಟ್ರೀಯ ಶಾಂತಿ ದಿನ ನಾಳೆ

ಬೆಂಗಳೂರು: ರೋಟರಿ ಕ್ಲಬ್ ಆಫ್ ಬೆಂಗಳೂರು ವತಿಯಿಂದ ಸೆಪ್ಟೆಂಬರ್ 21ರಂದು ಅಂತರರಾಷ್ಟ್ರೀಯ ಶಾಂತಿ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಒಂದು ವಾರದವರೆಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ವಿಶ್ವ ಆಹಾರ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿತಿ ಭಾರತೇಶ್, ಭಾರತೀಯ ವಿದೇಶಾಂಗ ಹಿರಿಯ ರಾಜತಾಂತ್ರಿಕ ಎನ್. ಪಾರ್ಥಸಾರಥಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಎಸ್.ವಿ. ಶ್ರೀಕಂಠಯ್ಯ



ಬೆಂಗಳೂರು: ಭೂವಿಜ್ಞಾನಿ ಎಸ್.ವಿ. ಶ್ರೀಕಂಠಯ್ಯ(87) ಅವರು ಭಾನುವಾರ ಬೆಳಿಗ್ಗೆ ವೈದೇಹಿ ಆಸ್ಪತ್ರೆಯಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಸಂಪಿಗೆಯವರಾದ ಶ್ರೀಕಂಠಯ್ಯ 1958ರಿಂದ 1993ರ ವರೆಗೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಕ್ಷೇತ್ರದಲ್ಲಿ ಖನಿಜ ಸಂಶೋಧನಾ ಕಾರ್ಯ ಮಾಡಿದ್ದರು. 1979ರಲ್ಲಿ ಅವರಿಗೆ ‘ನ್ಯಾಷನಲ್ ಮಿನರಲ್ ಪ್ರಶಸ್ತಿ’ ಲಭಿಸಿತ್ತು. ನಿವೃತ್ತಿಯ ನಂತರ ಭಾರತೀಯ ಭೂವೈಜ್ಞಾನಿಕ ಸೊಸೈಟಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅವರಿಗೆ ಪತ್ನಿ ಇದ್ದಾರೆ.

ರಾಜಕೀಯ ಲಾಭಕ್ಕೆ ನಾಯಕರ ಪೈಪೋಟಿ • ಹಳೆ ಮೈಸೂರು ಭಾಗದ ರಾಜಕಾರಣಿಗಳಿಗೆ ಚುನಾವಣಾ ಅಸ್ತ್ರ

ಹೆದ್ದಾರಿಯಲ್ಲಿ 'ರಾಜಕೀಯ ಸಮರ'

ಪ್ರಜಾವಾಣಿ ವಾರ್ತೆ

ಬೆಂಗಳೂರು–ಮೈಸೂರು **ಹೆದ್ದಾರಿ ಸವಾರಿ**



ಬೆಂಗಳೂರು: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಈಗ ರಾಜಕೀಯ ಸಮರಕ್ಕೆ ವೇದಿಕೆಯಾಗಿದೆ. ಹೆದ್ದಾರಿ ನಿರ್ಮಾಣದ ಶ್ರೇಯ ಪಡೆದುಕೊಳ್ಳಲು ಹಳೆ ಮೈಸೂರು ಭಾಗದ ರಾಜಕಾರಣಿಗಳ ನಡುವೆ ಭಾರೀ ಪೈಪೋಟಿಯೇ ಏರ್ಪಟ್ಟಿದೆ.

'ಯೋಜನೆಗೆ ಅನುಮೋದನೆ ನೀಡಿದ್ದು ನಾವೇ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ದಶಪಥಕ್ಕೆ ಅನುಮೋದನೆ ನೀಡಲಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಡಾ. ಎಚ್.ಸಿ.ಮಹದೇವಪ್ಪ ಹೇಳಿಕೊಳ್ಳುತ್ತಿದ್ದಾರೆ. ಆದರೆ, 'ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ಈ ಯೋಜನೆ ಕೇಂದ್ರ ಸರ್ಕಾರದ ಕೊಡುಗೆ' ಎಂದು ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಪ್ರತಿಪಾದಿಸುತ್ತಿದ್ದಾರೆ.

'ಭೂಸ್ವಾದೀನದ ವಿಚಾರದಲ್ಲಿ ರೈತರನ್ನು ಒಪ್ಪಿಸಿ ಯೋಜನೆಗೆ ಅನುವು ಮಾಡಿಕೊಟ್ಟಿದ್ದು ನಾವು. ಇದರಲ್ಲಿ ಬಿಜೆಪಿ ಪಾತ್ರ ಏನೂ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳುತ್ತಿದ್ದಾರೆ.

ಹಲವು ವರ್ಷಗಳಿಂದ ಪ್ರಸ್ತಾವದ ಹಂತದಲ್ಲಿದ್ದ ಯೋಜನೆಗೆ 2016ರಲ್ಲಿ ಅನುಮೋದನೆ ದೊರೆಯಿತು. ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತಕ್ಕೆ ತಲುಪಿದ ಬಳಿಕ 2019ರಿಂದ ಕಾಮಗಾರಿ ಆರಂಭವಾಗಿದೆ. ಅನುಮೋದನೆ ದೊರೆತಾಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಎಚ್.ಸಿ.ಮಹದೇವಪ್ಪ ಲೋಕೋಪಯೋಗಿ ಸಚಿವರಾಗಿದ್ದರು. ಕೇಂದ್ರದಲ್ಲಿ 2014ರಿಂದಲೇ ಬಿಜೆಪಿ ಅಧಿಕಾರದಲ್ಲಿದೆ. ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತಕ್ಕೆ ಬರುವ ಸಂದರ್ಭದಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದರು. ರಸ್ತೆ ಅಭಿವೃದ್ಧಿಯನ್ನು ಎನ್‌ಎಚ್‌ಎಐ(ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ) ನಿರ್ವಹಿಸುತ್ತಿದ್ದು, ಇದು ಕೇಂದ್ರ ಸರ್ಕಾರದ ಅಧೀನ ಸಂಸ್ಥೆ. ರಸ್ತೆಗೆ ಅಗತ್ಯ ಇರುವ ಭೂಸ್ವಾಧೀನ ಪ್ರಕ್ರಿಯೆ ನಡೆಸುವುದು ರಾಜ್ಯ ಸರ್ಕಾರದ ಜವಾಬ್ದಾರಿ.

ಹೆದ್ದಾರಿಗಾಗಿ ಸಂಸದರ ಸಮರ: ಇದೆಲ್ಲದರ ನಡುವೆ ಸಂಸದ ಪ್ರತಾಪ ಸಿಂಹ ಅವರು ಮಂಡ್ಯ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಆಗಾಗ ಪರಿಶೀಲನೆ ಮಾಡುತ್ತಿರುವುದು ಈ ಭಾಗದ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರನ್ನು ಕೆರಳುವಂತೆ ಮಾಡಿದೆ. ಇಡೀ ಹೆದ್ದಾರಿ ನಿರ್ಮಾಣಕ್ಕೆ ತಮ್ಮ ಶ್ರಮವೇ ಹೆಚ್ಚು ಎಂಬುದನ್ನು ತೋರಿಸಿಕೊಳ್ಳಲು ಪ್ರತಾಪ ಸಿಂಹ ಯತ್ನಿಸುತ್ತಿರುವುದು ಬೇರೆ ಪಕ್ಷಗಳ ನಾಯಕರ ಸಿಟ್ಟಿಗೆ ಕಾರಣವಾಗಿದೆ.

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಕಾಮಗಾರಿ ಪರಿಶೀಲನೆ ನಡೆಸಿದ ಕಾರಣ ಮಂಡ್ಯ ಸಂಸದೆ ಸುಮಲತಾ ಅವರು ಪ್ರತಾಪ ಸಿಂಹ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಸುಮಲತಾ ಅವರ ಟೀಕೆಗೆ ಪ್ರತಾಪ ಸಿಂಹ ಕೂಡ ತೀಕ್ಷ್ಣವಾಗಿಯೇ ಪ್ರತಿಕ್ರಿಯಿಸಿದ್ದರು.

ರಾಮನಗರ ಜಿಲ್ಲೆಗೂ ಪ್ರತಾಪ ಸಿಂಹ ಪದೇ ಪದೇ ಭೇಟಿ ನೀಡುತ್ತಿರುವುದು ಅಲ್ಲಿನ ಕಾಂಗ್ರೆಸ್, ಜೆಡಿಎಸ್ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ. ಒಂದು ತಿಂಗಳ ಅವಧಿಯಲ್ಲಿಯೇ ನಾಲ್ಕೈದು ಬಾರಿ ಹೆದ್ದಾರಿ ಪರಿಶೀಲನೆ ಮಾಡಿದ್ದಾರೆ.

'ಮೈಸೂರು–ಬೆಂಗಳೂರು ಹೆದ್ದಾರಿಗೆ ಭೇಟಿ ನೀಡುತ್ತಿದ್ದೇನೆ' ಎಂದು ಮೊದಲೇ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿ, ಭೇಟಿ ನೀಡಿದ ಬಳಿಕ ಫೋಟೊ, ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರತಾಪ ಸಿಂಹ ಹಂಚಿಕೊಳ್ಳುತ್ತಿರುವುದು ಜೆಡಿಎಸ್ ಮತ್ತು ಕಾಂಗ್ರೆಸ್ ನಾಯಕರ ಕಣ್ಣು ಕೆಂಪಾಗಿಸಿದೆ. ಪ್ರತಾಪ ಸಿಂಹ ಹಾಗೂ ಕುಮಾರಸ್ವಾಮಿ, ಡಿ.ಕೆ. ಸುರೇಶ್ ನಡುವೆ ಮಾತಿನ ಸಮರಕ್ಕೂ ಈ ಹೆದ್ದಾರಿ ದಾರಿ ಮಾಡಿಕೊಟ್ಟಿದೆ.

ಚುನಾವಣೆಗೆ ಹೊಸ ಅಸ್ತ್ರ: ಒಂದೇ ಒಂದು ಮಳೆ ಕಾಮಗಾರಿಯ ಗುಣಮಟ್ಟವನ್ನು ಬಯಲು ಮಾಡಿತು. ಈಗ ಬಿಜೆಪಿ ವಿರುದ್ಧ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಕಳಪೆ ಕಾಮಗಾರಿಯ ಆರೋಪ ಹೊರಿಸುತ್ತಿವೆ. ಕಾಮಗಾರಿ ಸಂಪೂರ್ಣ ಅವೈಜ್ಞಾನಿಕವಾಗಿದ್ದು, ಇದರಿಂದ ಸ್ಥಳೀಯರಿಗೆ ಆಗಿರುವ ತೊಂದರೆ ಬಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸದನದಲ್ಲಿ, ಮಾಧ್ಯಮಗಳ ಮುಂದೆಯೂ ಸಾಕಷ್ಟು ಬಾರಿ ಅಸಮಾಧಾನ ಹೊರಹಾಕಿದ್ದಾರೆ.

ಕಳಪೆ ಕಾಮಗಾರಿ ನಡೆದಿಲ್ಲ ಎಂದು ಪ್ರತಾಪ ಸಿಂಹ ಸಮರ್ಥನೆ ಮಾಡಿಕೊಳ್ಳುತ್ತಿದ್ದರೆ, ಕಾಮಗಾರಿಯಲ್ಲಿನ ಲೋಪಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ.

ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೂ ತಂದಿದ್ದಾರೆ. ಲೋಪವನ್ನು ಸರಿಪಡಿಸುವ ಭರವಸೆಯನ್ನು ಗಡ್ಕರಿ ಅವರು ನೀಡಿದ್ದಾರೆ.

ಮುಂಬರುವ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲಿ ಹಳೆ ಮೈಸೂರು ಭಾಗದ ರಾಜಕಾರಣಿಗಳಿಗೆ ಬೆಂಗಳೂರು–ಮೈಸೂರು ದಶಪಥ ಚುನಾವಣಾ ಅಸ್ತ್ರವಾಗುವ ಸಾಧ್ಯತೆಗಳಿವೆ.



ದಶಪಥವನ್ನು ಪ್ಲಾನಿಂಗ್ ಇಲ್ಲದೇ ನಿರ್ಮಿಸಲಾಗಿದೆ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು. ಹೆದ್ದಾರಿಯಲ್ಲಿ ನೀರು ನಿಲ್ಲುವುದನ್ನು ಮೊದಲು ತಪ್ಪಿಸಬೇಕು.
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



ಹೆದ್ದಾರಿಯಲ್ಲಿ ಫೋಟೊ ತೆಗೆಸಿಕೊಂಡು ರಾಜಕೀಯ ಮಾಡುವುದನ್ನು ಪ್ರತಾಪ ಸಿಂಹ ಬಿಡಬೇಕು. ಕಾಮಗಾರಿ ಗುಣಮಟ್ಟವನ್ನು ಒಂದೇ ಒಂದು ಮಳೆ ಬಯಲು ಮಾಡಿದೆ.
ಎಚ್.ಡಿ ಕುಮಾರಸ್ವಾಮಿ , ಶಾಸಕ



ಹೆದ್ದಾರಿ ಕಾಮಗಾರಿ ಗುಣಮಟ್ಟ ಉತ್ತಮವಾಗಿದೆ. ಮಳೆಯಿಂದ ಸ್ವಲ್ಪ ಅನಾನುಕೂಲ ಆಗಿದ್ದು, ಅಧಿಕಾರಿಗಳು ಲೋಪ ಸರಿಪಡಿಸುತ್ತಾರೆ.
ಸಿ.ಪಿ. ಯೋಗೇಶ್ವರ್
ವಿಧಾನ ಪರಿಷತ್ ಸದಸ್ಯ



ಹೆದ್ದಾರಿಯು ಮೈಸೂರಿಗೆ ಸಂಪರ್ಕ ಕಲ್ಪಿಸುತ್ತದೆ. ಯೋಜನೆ ತಂದವರು ನಾವು. ಮಂಡ್ಯ ಸಂಸದರು ತಂದಿದ್ದರೆ ಮಂಡ್ಯಕ್ಕೆ ಕೊನೆಯಾಗುತ್ತಿತ್ತು ಅಲ್ಲವೇ? ಇದು ಮೈಸೂರಿಗೆ ಮೋದಿ ಕೊಡುಗೆ
ಪ್ರತಾಪ ಸಿಂಹ, ಸಂಸದ



ಮೈಸೂರು ಸಂಸದರು ಮೈಸೂರು-ಕೊಡಗಿನಲ್ಲಿ ಏನು ಮಾಡಬೇಕೋ ಅದನ್ನು ಮಾಡಲಿ. ಅದನ್ನು ಬಿಟ್ಟು ಅನವಶ್ಯಕವಾಗಿ ಎಲ್ಲ ನನ್ನದೇ ಎಂದು ಬರುವುದು ಬೇಡ
ಡಿ.ಕೆ. ಸುರೇಶ್, ಸಂಸದ
ಬೆಂಗಳೂರು ಗ್ರಾಮಾಂತರ

ದಂಡ ವಿಧಿಸಿದ್ದ ಅಧಿಕಾರಿಗೆ ವರ್ಗಾವಣೆ ಶಿಕ್ಷೆ

ಮಂಡ್ಯ: ದಶಪಥ ಕಾಮಗಾರಿಗಾಗಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿದ ಆರೋಪಕ್ಕಾಗಿ ದಿಲೀಪ್ ಬಿಲ್ಡ್‌ಕಾನ್ ಕಂಪನಿಗೆ ₹ 102 ಕೋಟಿ ದಂಡ ವಿಧಿಸಿದ್ದ ಹಿರಿಯ ಭೂವಿಜ್ಞಾನಿಯೊಬ್ಬರು ಕಳೆದ ಎರಡು ವರ್ಷಗಳಿಂದಲೂ ವರ್ಗಾವಣೆ ಶಿಕ್ಷೆ ಅನುಭವಿಸುತ್ತಿದ್ದಾರೆ.

ಮಂಡ್ಯ ತಾಲ್ಲೂಕು ಕಾಳೇನಹಳ್ಳಿ ಬಳಿ ಡಿಬಿಎಲ್ ಕಂಪನಿ 2019 ಕಲ್ಲು ಗಣಿಗಾರಿಕೆ ನಡೆಸಿತ್ತು. ಕೇಂದ್ರದ ಪರಿಸರ ಅನುಮೋದನೆ ಪಡೆಯದೆ ಕಲ್ಲು ಗಣಿಗಾರಿಕೆ ನಡೆಸಿದ್ದ ಕಾರಣಕ್ಕೆ ಆಗಿನ ಹಿರಿಯ ಭೂವಿಜ್ಞಾನಿ ಟಿ.ವಿ.ಪುಷ್ಪಾ ಅವರು ಕಂಪನಿಗೆ ₹102 ಕೋಟಿ ದಂಡ ವಿಧಿಸಿದ್ದರು.

ಸರ್ಕಾರಕ್ಕೆ ರಾಜಧನವನ್ನೂ ವಂಚಿಸಿದ್ದ ಆರೋಪದಲ್ಲಿ ಡಿಬಿಎಲ್ ಹಿರಿಯ ಅಧಿಕಾರಿಗಳ ವಿರುದ್ಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ಕೂಡ ದಾಖಲಾಗಿತ್ತು. ಸದ್ಯ ಅಧಿಕಾರಿಗಳು ಜಾಮೀನು ಪಡೆದಿದ್ದಾರೆ.

ದಂಡ ವಿಧಿಸಿದ್ದ ಟಿ.ವಿ.ಪುಷ್ಪಾ ಅವರನ್ನು ಕೋವಿಡ್ ಸಂದರ್ಭದಲ್ಲಿ ವಿಜಯಪುರಕ್ಕೆ ವರ್ಗಾವಣೆ ಮಾಡಲಾಗಿತ್ತು. ನಂತರ ರಾಯಚೂರು ಸೇರಿ ಹಲವೆಡೆ ವರ್ಗಾವಣೆ ಮಾಡಲಾಗಿದೆ. ದಂಡ ವಿಧಿಸಿದ್ದ ಕಾರಣಕ್ಕೆ ಈಗಲೂ ಅವರು ವರ್ಗಾವಣೆ ಶಿಕ್ಷೆ ಅನುಭವಿಸುತ್ತಿದ್ದಾರೆ.

'ಡಿಬಿಎಲ್ ಕಂಪನಿ ₹300 ಕೋಟಿ ರಾಜಧನ ಪಾವತಿಸಬೇಕಾಗಿದೆ. ಆದರೆ, ಇಲ್ಲಿಯವರೆಗೆ ಕೇವಲ ₹ 28 ಕೋಟಿ ಪಾವತಿ ಮಾಡಿ ಉಳಿದಿದ್ದನ್ನು ವಂಚಿಸಿದೆ' ಎಂದು ಹೆಸರು ಹೇಳಲಿಚ್ಛಿಸದ ನಿವೃತ್ತ ಗಣಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.



ನಗರದ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಸುಳ್ಳು ಜಾತಿ ಪ್ರಮಾಣ ಪತ್ರಗಳ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು

ಸುಳ್ಳು ಜಾತಿ ಪ್ರಮಾಣಪತ್ರ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಹೆಸರಿನಲ್ಲಿ ಸುಳ್ಳು ಜಾತಿ ಪ್ರಮಾಣಪತ್ರ ಪಡೆದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಸುಳ್ಳು ಜಾತಿ ಪ್ರಮಾಣಪತ್ರಗಳ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಬೇಡ ಜಂಗಮರ ಹೆಸರಿನಲ್ಲಿ ವೀರಶೈವ ಜಂಗಮರು ಮೀಸಲಾತಿ ಕಬಳಿಸುತ್ತಿದ್ದಾರೆ ಎಂದು ಪ್ರತಿಭಟನಕಾರರು ದೂರಿದರು.

'ಸುಳ್ಳು ಜಾತಿ ಪ್ರಮಾಣಪತ್ರದ ಪ್ರಕರಣ ತ್ವರಿತ ಇತ್ಯರ್ಥಕ್ಕೆ ಪ್ರತಿ ಜಿಲ್ಲೆಯಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು. ಪ್ರತಿ ಜಿಲ್ಲೆಯಲ್ಲೂ ವಿಶೇಷ ವಕೀಲರನ್ನು ನೇಮಿಸಬೇಕು' ಎಂದು ಆಗ್ರಹಿಸಿದರು. 'ಶಾಲಾ–ಕಾಲೇಜಿಗೆ ಮಕ್ಕಳ ಸೇರ್ಪಡೆ ವೇಳೆ ಜಾತಿ ಪ್ರಮಾಣ ಪತ್ರವು ಸುಳ್ಳು ಎಂಬುದು ತಿಳಿದು ಬಂದರೆ ವಂಶವೃಕ್ಷ ತೆಗೆಸಿ ಪರಿಶೀಲಿಸಬೇಕು. ಬಳಿಕವೇ ಜಾತಿ ಪ್ರಮಾಣಪತ್ರ ಅಂಗೀಕರಿಸಬೇಕು' ಎಂದು ಕೋರಿದರು.

'ಸುಳ್ಳು ಜಾತಿ ಪ್ರಮಾಣಪತ್ರ ಪಡೆಯುತ್ತಿರುವುದರಿಂದ ಬೇಡಜಂಗಮ, ಬುಡ್ಗ ಜಂಗಮ, ಗೊಂಡ, ಜೇನು ಕುರುಬ, ಕಾಡು ಕುರುಬ, ತೋಕರ ಕೋಳಿ, ಡೋರ್ ಕೋಳಿ ಪಂಗಡಗಳಿಗೆ ಅನ್ಯಾಯ ಆಗುತ್ತಿದೆ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಚನ್ನದಾಸರ ಗೊಂಡ, ಕೊರವ, ಕೊರಮ, ಶಿಳ್ಳೇಕ್ಯಾತ, ನಾಯಕ, ವಾಲ್ಮೀಕಿ ಮುಂತಾದ 18 ಜಾತಿಗಳ ಹೆಸರಿನಲ್ಲಿ ಪಡೆದಿರುವ ಜಾತಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಡಾ.ಆರ್.ಮೋಹನ್ ರಾಜ್, ಎಂ.ವಿರೂಪಾಕ್ಷಿ, ಬಸವರಾಜ್ ಕೌತಾಳ್, ಪಾರ್ಥಸಾರಥಿ, ವೆಂಕಟಗಿರಿಯಯ್ಯ, ರಾಜು ಎಂ. ತಳವಾರು ಹಾಜರಿದ್ದರು.



ನಗರದಲ್ಲಿ ಸೋಮವಾರ ಆಮ್ ಆದ್ಮಿ ಪಕ್ಷದಿಂದ ಸಚಿವ ಎಸ್.ಟಿ.ಸೋಮಶೇಖರ್ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಸೋಮಶೇಖರ್ ಬಂಧನಕ್ಕೆ ಆಗ್ರಹ

ಬೆಂಗಳೂರು: 'ವಸತಿ ಯೋಜನೆ ಕಾಮಗಾರಿಯಲ್ಲಿ ನಡೆದಿದ್ದ ಅಕ್ರಮಕ್ಕೆ ಸಂಬಂಧಿಸಿದಂತೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ ಬಂಧಿಸಬೇಕು' ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟಿಸಿದರು.

'ಸೋಮಶೇಖರ್, ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ ಸೇರಿ ಒಟ್ಟು 9 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ₹ 29.5 ಕೋಟಿ ಲಂಚ ಪಡೆದಿರುವ ಪ್ರಕರಣ ಇದಾಗಿದೆ' ಎಂದು ಎಎಪಿ ಬೆಂಗಳೂರು ಅಧ್ಯಕ್ಷ ಮೋಹನ್ ದಾಸರಿ ಹೇಳಿದರು.

'ಲೋಕಾಯುಕ್ತ ನ್ಯಾಯಾಲಯದಲ್ಲಿ ದಾಖಲೆ ಸಹಿತ ದೂರು ದಾಖಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಚಿವ ಸೋಮಶೇಖರ್ ಅವರನ್ನು ವಜಾ ಮಾಡಬೇಕು. ನಿಷ್ಪಕ್ಷಪಾತ ತನಿಖೆಗೆ ಲೋಕಾಯುಕ್ತ ಪೊಲೀಸರಿಗೆ ಅವಕಾಶ ಮಾಡಿಕೊಡಬೇಕು' ಎಂದು ಆಗ್ರಹಿಸಿದರು.

ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ ಅಧ್ಯಕ್ಷ ಚನ್ನಪ್ಪಗೌಡ ನೆಲ್ಲೂರು ಮಾತನಾಡಿ, 'ಬಿಜೆಪಿ ಸರ್ಕಾರವು ಭ್ರಷ್ಟ ಜನಪ್ರತಿನಿಧಿಗಳು, ಭ್ರಷ್ಟ ಅಧಿಕಾರಿಗಳ ರಕ್ಷಣೆಗೆ ನಿಂತಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಅಧಿಕಾರದಲ್ಲಿ ಇರುವವರೆಗೂ ಜನರ ತೆರಿಗೆ ಹಣವು ಭ್ರಷ್ಟರ ಪಾಲಾಗುತ್ತಿರುತ್ತದೆ' ಎಂದು ಕಿಡಿಕಾರಿದರು.

ಪಕ್ಷದ ಮುಖಂಡರಾದ ವಿಜಯ್ ಶರ್ಮ, ಸಂಚಿತ್ ಸವ್ವಾನಿ, ಬಿ.ಟಿ. ನಾಗಣ್ಣ, ಜಗದೀಶ್ ವಿ. ಸದಂ, ದರ್ಶನ್ ಜೈನ್, ಸುರೇಶ್ ರಾಥೋಡ್, ಜಗದೀಶ್ ಚಂದ್ರ, ಕುಶಲಸ್ವಾಮಿ, ಉಷಾ ಮೋಹನ್, ಸುಹಾಸಿನಿ ಫಣಿರಾಜ್, ಡಾ.ಸತೀಶ್, ಶಶಿಕುಮಾರ್ ಆರಾಧ್ಯ, ಶ್ರೀಕಾಂತ್, ಗುರುಮೂರ್ತಿ, ಸುಮನ್ ಪ್ರಶಾಂತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮುಚ್ಚಿದ 800 ಸಹಕಾರ ಸಂಘಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತದ ಚುಕ್ಕಾಣಿ ಹಿಡಿದವರು ಪ್ರಾಮಾಣಿಕವಾಗಿ ನಡೆದುಕೊಳ್ಳದಿದ್ದರೆ ಸಹಕಾರ ಸಂಸ್ಥೆಗಳು ಸಂಕಷ್ಟ ಎದುರಿಸುತ್ತವೆ. ಪ್ರಸಕ್ತ ರಾಜ್ಯದಲ್ಲಿ 800ಕ್ಕೂ ಹೆಚ್ಚು ಸಹಕಾರ ಸಂಘಗಳು ಬಾಗಿಲು ಮುಚ್ಚಿವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸೋಮವಾರ ಹಮ್ಮಿಕೊಂಡಿದ್ದ ಸಹಕಾರ ಪ್ರಶಸ್ತಿ ಪ್ರದಾನ, ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸದ್ಯ 5,500ಕ್ಕೂ ಹೆಚ್ಚು ಸಹಕಾರ ಸಂಘಗಳಿವೆ. ಬಹುತೇಕ ಸಂಘಗಳು ಲಾಭದಲ್ಲಿ ನಡೆಯುತ್ತಿವೆ. ಕೆಲವು ಸಂಘಗಳಲ್ಲಿ ಹಗರಣಗಳು ನಡೆದಿವೆ. ಅಂತಹ 50 ಸಂಘಗಳನ್ನು ಪತ್ತೆ ಹಚ್ಚಲಾಗಿದೆ. ಸಾಲ ಪಡೆದವರು ಮರುಪಾವತಿಸದ, ಅಸಮರ್ಪಕ ಆಡಳಿತ ನಿರ್ವಹಣೆಯ ಕಾರಣ 800 ಸಂಘಗಳು ಆರ್ಥಿಕ ನಷ್ಟ ಅನುಭವಿಸಿವೆ. ಇಂತಹ ಸಮಸ್ಯೆಗಳಿಗೆ ಸಹಕಾರಿಗಳು ಆಂತರಿಕವಾಗಿ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೊರಗಿನ ಸಾಲ ಪಡೆಯದೇ, ಸ್ಥಳೀಯ ಸಂಪನ್ಮೂಲ ಬಳಸಿಕೊಂಡು ಸ್ವಾವಲಂಬನೆ ಸಾಧಿಸಲು ಸಹಕಾರ ಸಂಘಗಳು ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಸಹಕಾರ ಕ್ಷೇತ್ರ ಯಶಸ್ವಿಯಾಗಲು ಮಧ್ಯವರ್ತಿಗಳ ಹಾವಳಿ ತಪ್ಪಬೇಕು. ಸರ್ಕಾರಗಳೂ ಅನವಶ್ಯಕವಾಗಿ ಹಸ್ತಕ್ಷೇಪ ಮಾಡುವುದಿಲ್ಲ. ದೂರುಗಳು ಬಂದಾಗ, ಸಮಸ್ಯೆಗಳು ಎದುರಾದಾಗ ಸಾರ್ವಜನಿಕರ ಹಿತಾಸಕ್ತಿ ಸಂರಕ್ಷಿಸಲು ಸರ್ಕಾರ ಮಧ್ಯೆ ಪ್ರವೇಶಿಸುತ್ತದೆ. ಹಾಗಾಗಿ, ಆಡಳಿತ ಮಂಡಳಿ, ಅಧಿಕಾರಿಗಳು ಪಾರದರ್ಶಕವಾಗಿ ನಡೆದುಕೊಳ್ಳಬೇಕು. ಸಾಲ ವಸೂಲಾತಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಮಾಜಿ ಸಚಿವ ಎಸ್.ಎಸ್.ಪಾಟೀಲ, ಸಹಕಾರಿಗಳ ನಿಬಂಧಕ ಕ್ಯಾಪ್ಟನ್ ಕೆ.ರಾಜೇಂದ್ರಕುಮಾರ್, ನಿವೃತ್ತ ಅಧಿಕಾರಿ ಸಿ.ಎನ್.ಪರಶಿವಮೂರ್ತಿ, ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನಗೌಡ, ಉಪಾಧ್ಯಕ್ಷ ಪ್ರಸನ್ನಕುಮಾರ್, ನಿರ್ದೇಶಕರಾದ ಬಿ.ಎಚ್.ಕೃಷ್ಣಾರೆಡ್ಡಿ, ಕೆ. ಶಿವಲಿಂಗಪ್ಪ, ಪ್ರಭುದೇವ್, ಮಲ್ಲಿಕಾರ್ಜುನ ಹೊರಕೇರಿ, ನಾಗರಾಜ ದೇಶಪಾಂಡೆ, ಜಗದೀಶ ಕವಟಗಿಮಠ, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ.ಪಾಟೀಲ ಉಪಸ್ಥಿತರಿದ್ದರು.



ನಗರದಲ್ಲಿ ಸೋಮವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಸ್.ಎಸ್.ಪಾಟೀಲ, ನಿವೃತ್ತ ಅಧಿಕಾರಿ ಸಿ.ಎನ್. ಪರಶಿವಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ. ನಂಜನಗೌಡ, ನಿರ್ದೇಶಕ ಬಿ.ಎಚ್ ಕೃಷ್ಣಾರೆಡ್ಡಿ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ನಿರ್ದೇಶಕ ಕೆ. ಶಿವಲಿಂಗಪ್ಪ, ಪ್ರಭುದೇವ್, ಮಲ್ಲಿಕಾರ್ಜುನ ಹೊರಕೇರಿ, ನಾಗರಾಜ ದೇಶಪಾಂಡೆ, ಜಗದೀಶ ಕವಟಗಿಮಠ, ಜಿ.ಎನ್ ಪಾಟೀಲ ಇದ್ದರು –ಪ್ರಜಾವಾಣಿ ಚಿತ್ರ.

ಅಸಭ್ಯ ವರ್ತನೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆ ಜತೆಗೆ ಅಸಭ್ಯವಾಗಿ ವರ್ತಿಸಿದ್ದ ಮೈಸೂರಿನ ನಾಗರಾಜ್ (45) ಎಂಬ ಆರೋಪಿಯನ್ನು ಹೈಗ್ರೌಂಡ್ಸ್ ಪೊಲೀಸರು ಬಂಧಿಸಿದ್ದಾರೆ.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ಆರೋಪಿಗೆ ಮಹಿಳೆ ಪರಿಚಯವಾಗಿದ್ದರು. ಪರಿಚಯ ಸ್ನೇಹಕ್ಕೆ ತಿರುಗಿ ಪರಸ್ಪರ ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡಿದ್ದರು. ಇಬ್ಬರೂ ಫೋನ್‌ನಲ್ಲಿ ಮಾತನಾಡುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಯು ಮಹಿಳೆಗೆ ಕರೆ ಮಾಡಿ ಅಸಭ್ಯವಾಗಿ ಮಾತನಾಡಲು ಆರಂಭಿಸಿದ್ದ. ಆಕೆಯನ್ನು ವಸಂತನಗರಕ್ಕೆ ಕರೆಸಿಕೊಂಡು ಅಸಭ್ಯವಾಗಿ ವರ್ತಿಸಿದ್ದ. ಬಳಿಕ ಮಹಿಳೆ ದೂರು ನೀಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಪ್ರತಿಭಾ ಪುರಸ್ಕಾರ

ಯಲಹಂಕದ ದಿನಪತ್ರಿಕೆಗಳ ವಿತರಕರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪತ್ರಿಕಾ ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ವಿತರಕರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಸನ್ಮಾನಿಸಿದರು. ಇದೇ ವೇಳೆ ಶಾಸಕರನ್ನು ವಿತರಕರು ಸನ್ಮಾನಿಸಿದರು. ಸಂಘದ ಅಧ್ಯಕ್ಷ ಎಂ.ಸತೀಶ್, ಹೇಮಲತಾ ಚಿದಾನಂದ್, ದಿನಪತ್ರಿಕೆ ವಿತರಕರ ಸಂಘದ ಪದಾಧಿಕಾರಿಗಳಾದ ಶಂಕರ್, ವೈ.ಸಿ.ವೀರಭದ್ರ, ರವಿ, ಸುರೇಶ್, ಮಂಜುನಾಥ್, ಕುಮಾರ್, ನವೀನ್, ಮಹೇಂದ್ರ, ವೆಂಕಟೇಶ್ ಮೂರ್ತಿ, ಪ್ರದೀಪ್, ವೀರೇಶ್, ಶಶಿ, ನಾಗ, ಗುರುಕಿಶನ್, ಮುದ್ದುಕುಮಾರ್, ದೇವರಾಜ್, ಗುರುನಾಥ್, ಮುತ್ತುರಾಜ್, ಮಲ್ಲಿಕಾರ್ಜುನ, ಅಶೋಕ್, ಬಾಲಾಜಿ ಇದ್ದರು.

ನಗರದಲ್ಲಿ ಇಂದು

ರಕ್ತದಾನ ಶಿಬಿರ: ಉದ್ಘಾಟನೆ: ಡಾ.ಅರ್ಪಣಾ, ಅಪರ್ಣಾ, ಆಯೋಜನೆ: ಮೌಂಟ್ ಕಾರ್ಮೆಲ್ ಕಾಲೇಜ್, ವಸಂತನಗರ, ಬೆಳಿಗ್ಗೆ 9

ಭಾರತ್ ಜೋಡೊ ಯಾತ್ರೆ ಪೂರ್ವಭಾವಿ ಸಭೆ: ಅತಿಥಿಗಳು: ಪ್ರಕಾಶ್ ಕಮ್ಮರಡಿ, ಸುಧೀಂದ್ರ ಕುಲಕರ್ಣಿ, ಗಣೇಶ್ ದೇವಿ, ಕೆ. ಶರೀಫ, ನಾರಾಯಣ ಎ., ಆಯೋಜನೆ: ಸಮಾಜವಾದಿ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ,ಬೆಳಿಗ್ಗೆ 10

ಕರುನಾಡು ಹಿತ ರಕ್ಷಣಾ ಸಮಿತಿ ಸಂಸ್ಥಾಪನಾ ದಿನಾಚರಣೆ ಮತ್ತು ಪದಗ್ರಹಣ ಸಮಾವೇಶ: ಸಾನ್ನಿಧ್ಯ: ಸೇವಾಲಾಲ್ ಸರ್ದಾರ್ ಸ್ವಾಮೀಜಿ, ಪ್ರಸನ್ನಾನಂದ ಸ್ವಾಮೀಜಿ, ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ಸಿ.ಟಿ. ರವಿ, ಶಶಿಕುಮಾರ್ ವೈ., ಆಯೋಜನೆ: ಕರುನಾಡು ಹಿತರಕ್ಷಣಾ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–9: ಅಧ್ಯಕ್ಷತೆ: ಆರ್.ಶೇಷಶಾಸ್ತ್ರಿ, ರಾ.ನಂ.ಚಂದ್ರಶೇಖರ, ಬಿ.ವಿ.ರಾಜಾರಾಂ, ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಫುಡ್ ಅವಾರ್ಡ್ಸ್–2022: ಅತಿಥಿಗಳು: ಬಸವರಾಜ ಬೊಮ್ಮಾಯಿ, ಮಹೇಶ ಜೋಶಿ, ಪ್ರತಾಪ್ ರೆಡ್ಡಿ, ತುಷಾರ್ ಗಿರಿನಾಥ್, ಸಿಹಿಕಹಿ ಚಂದ್ರು, ಆಯೋಜನೆ: ಬೃಹತ್ ಬೆಂಗಳೂರು ಹೋಟೆಲುಗಳ ಸಂಘ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಸಂಜೆ 5

ಕಾರ್ಮಿಕ ಇಲಾಖೆಯ ನೂತನ ತಂತ್ರಾಂಶ, ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ವಿತರಣಾ ಯೋಜನೆ ಹಾಗೂ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣೆಗೆ ಚಾಲನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಅರಬೈಲ್ ಶಿವರಾಮ ಹೆಬ್ಬಾರ, ಬಿ. ಶ್ರೀರಾಮುಲು, ಅಧ್ಯಕ್ಷತೆ : ರಿಜ್ವಾನ್ ಅರ್ಷದ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 5

ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾಗಿ ಎಂಎನ್‌ಆರ್ ಪುನರಾಯ್ಕೆ


ರಾಜೇಂದ್ರ ಕುಮಾರ್

ಮಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾಗಿ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್ ಅವರು ಎರಡನೇ ಬಾರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ಸೋಮವಾರ ನಡೆದ ಮಹಾಮಂಡಳದ ಆಡಳಿತ ಮಂಡಳಿ ಸಭೆಯಲ್ಲಿ ಆಯ್ಕೆ ನಡೆಯಿತು.

ಮಂಗಳೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರಿ ಸಂಘದ ಪ್ರತಿನಿಧಿಯಾಗಿ ಸಹಕಾರ ಮಾರಾಟ ಮಹಾಮಂಡಳದ ನಿರ್ದೇಶಕ ಚುನಾವಣೆಗೆ ಸ್ಪರ್ಧಿಸಿ, ಅವಿರೋಧವಾಗಿ ಆಯ್ಕೆಯಾಗಿದ್ದರು. ಉಪಾಧ್ಯಕ್ಷರಾಗಿ ಶಿವಕುಮಾರಗೌಡ ಪಾಟೀಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 'ಮಹಾಮಂಡಳ ಅಧ್ಯಕ್ಷ ಹುದ್ದೆ ದೊರೆಯಲು ಸಿ.ಎಂ ಕಾರಣ' ಎಂದು ರಾಜೇಂದ್ರ ಕುಮಾರ್ ಕೃತಜ್ಞತೆ ಸಲ್ಲಿಸಿದ್ದಾರೆ.

ಅರಣ್ಯ ಸಿಬ್ಬಂದಿಗೆ ಗ್ರಾಮಸ್ಥರ ಥಳಿತ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಕಾಡಂಚಿನ ಗ್ರಾಮ ಬೂದನೂರಿಗೆ ಸಲಗವೊಂದು ಸೋಮವಾರ ಬೆಳಿಗ್ಗೆ ನುಗ್ಗಿದ್ದು, ಹಲವು ಮನೆಗಳಿಗೆ ಹಾನಿ ಮಾಡಿದೆ. ಅದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಥಳಿಸಿದ್ದಾರೆ. ಗನ್ ಅನ್ನು ಕೂಡ ಮುರಿದು ಹಾಕಿದ್ದಾರೆ.

ಈ ಸಂಬಂಧ ಎಚ್.ಡಿ.ಕೋಟೆ ಪೊಲೀಸ್ ಠಾಣೆಗೆ ಅರಣ್ಯ ಇಲಾಖೆ ದೂರು ನೀಡಿದೆ.


ಬೂದನೂರು ಗ್ರಾಮದಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡಿದ ಸಲಗ

ವಿಡಿಯೊ ವೈರಲ್: ಕಲ್ಲುಗಳನ್ನು ಆನೆಯತ್ತ ಎಸೆದು ಗ್ರಾಮದಿಂದ ಹೊರವಲಯಕ್ಕೆ ಅಟ್ಟಲು ಜನರು ಗುಂಪಾಗಿ ಸಾಗುತ್ತಿರುವ ವಿಡಿಯೊ ವೈರಲ್ ಆಗಿದೆ. ಜನರ ಕೂಗಾಟ ಮತ್ತು ಚೀರಾಟದಿಂದ ಸಲಗವು ಗಾಬರಿಯಾಗಿ ಬೀದಿಗಳಲ್ಲಿ ಸುತ್ತಾಡಿರುವ ದೃಶ್ಯವೂ ಸೆರೆಯಾಗಿದೆ.

ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಪಟಾಕಿ ಸಿಡಿಸಿ ಸಲಗವನ್ನು ಕಾಡಿಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಶಾರದಾ ಮಹೋತ್ಸವಕ್ಕೆ ಶತಮಾನದ ಸಂಭ್ರಮ

ಶಾರದೆ ಸೀರೆಗೆ ಮುಸ್ಲಿಮರ ಕಸೂತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ರಥಬೀದಿ ವೆಂಕಟರಮಣ ದೇವಸ್ಥಾನದ ಆಚಾರ್ಯ ಮಠದ ಶಾರದಾ ಮಹೋತ್ಸವಕ್ಕೆ ಶತಮಾನದ ಸಂಭ್ರಮ. ಶಾರದಾ ಮಾತೆ ಚಿನ್ನದ ಜರಿಯ ಬನಾರಸ್ ಸೀರೆಯಲ್ಲಿ ಕಂಗೊಳಿಸಲಿದ್ದಾಳೆ.

ಸಾರ್ವಜನಿಕ ಮಂಗಳೂರು ಶ್ರೀ ಶಾರದಾ ಮಹೋತ್ಸವ ಸಮಿತಿ ನೇತೃತ್ವದಲ್ಲಿ ಸೆ.26ರಿಂದ ಅಕ್ಟೋಬರ್ 5ರವರೆಗೆ ನವರಾತ್ರಿ ಉತ್ಸವ ಜರುಗಲಿದೆ. ಆಚಾರ್ಯ ಮಠದ ಆವರಣದಲ್ಲಿ ಪ್ರತಿಷ್ಠಾಪಿಸುವ ಶಾರದೆಗೆ ಬೆಳ್ಳಿ ಜರಿಯುಳ್ಳ ಕೈಮಗ್ಗದ ಬನಾರಸ್ ಸೀರೆ (ಅಂದಾಜು ₹ 2 ಲಕ್ಷ ಮೌಲ್ಯ) ತೊಡಿಸುವ ಪದ್ಧತಿ ನಡೆದುಕೊಂಡು ಬರುತ್ತಿದೆ.

1922ರಲ್ಲಿ ಪ್ರಾರಂಭವಾದ ಉತ್ಸವಕ್ಕೆ ಈ ಬಾರಿ 100 ವರ್ಷ ತುಂಬಿದ ಪ್ರಯುಕ್ತ ಸುಮಾರು ₹ 8 ಲಕ್ಷ ಮೌಲ್ಯದ ಬಂಗಾರದ ಝರಿಯ ಸೀರೆಯಿಂದ ಶಾರದ ವಿಗ್ರಹವನ್ನು ಅಲಂಕರಿಸಲು ಸಮಿತಿ ಮುಂದಾಗಿದೆ. ಈ ಬಾರಿಯೂ ಮಂಗಳೂರಿನ ಕುಲ್ಯಾಡಿಕಾರ್ ಸಿಲ್ಕ್ಸ್‌ನವರೇ ಈ ವೆಚ್ಚದ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ ಎಂದು ಶಾರದಾ ಮಹೋತ್ಸವ ಸಮಿತಿಯ ಮಾಧ್ಯಮ ಸಂಯೋಜಕ ಮಂಜು ನಿರೇಶ್ವಾಲ್ಯ ತಿಳಿಸಿದರು.

'ವಾರಾಣಸಿಯ ಜ್ಞಾನವಾಪಿ ಮಸೀದಿ ಸಮೀಪದ ನೇಕಾರರ ಮುಸ್ಲಿಂ ಕುಟುಂಬವೊಂದು ಈ ಸೀರೆಯನ್ನು ಸಿದ್ಧಪಡಿಸುತ್ತಿದೆ. ಈ ನೇಕಾರ ಕುಟುಂಬದ ಐದನೇ ತಲೆಮಾರಿನ ಸದಸ್ಯರು ಇದನ್ನು ತಯಾರಿಸುತ್ತಿದ್ದಾರೆ. ನೇಕಾರಿಕೆಯಲ್ಲಿ ಪರಿಣತಿ ಹೊಂದಿರುವ ಕಾರಣ, ಸೀರೆಯ ಕಸೂತಿಯನ್ನು ಪ್ರತಿವರ್ಷ ಇವರಿಂದಲೇ ಮಾಡಿಸಲಾಗುತ್ತದೆ' ಎಂದು ಅವರು ವಿವರಿಸಿದರು.

ಚಿನ್ನದ ವೀಣೆ: 'ಪ್ರತಿವರ್ಷ ನಕ್ಷತ್ರದ ಆಧಾರದ ಮೇಲೆ ಐದು ಅಥವಾ ಆರು ದಿನ ಮಾತ್ರ ದೇವಿಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿತ್ತು. ಈ ಬಾರಿ ನವರಾತ್ರಿಯ ಮೊದಲ ದಿನದಿಂದ 10 ದಿನಗಳವರೆಗೆ ಉತ್ಸವ ನಡೆಯಲಿದೆ. ನಿತ್ಯ ದೇವಿಯು ಒಂದೊಂದು ಅವತಾರ ಬಿಂಬಿಸುವ ಅಲಂಕಾರ ಮಾಡಲಾಗುತ್ತದೆ. ಅ. 5ರಂದು ವಿಶೇಷ ದೀಪಾಲಂಕಾರ ನಡೆಯಲಿದೆ. ಭಕ್ತರು ನೀಡಿದ ಸಮರ್ಪಣೆಯಲ್ಲಿ ಬಂಗಾರದ ವೀಣೆ, ನವಿಲು ಸೇರಿದಂತೆ ಸುಮಾರು ₹ 200 ಕೆ.ಜಿ ಚಿನ್ನದ ಸಾಮಗ್ರಿಗಳು, ರಜತ ಪೀಠ, ಪ್ರಭಾವಳಿ, ₹ 10 ಲಕ್ಷ ವೆಚ್ಚದಲ್ಲಿ ಮರದಿಂದ ತಯಾರಿಸಿದ ಹೊಸ ಮಂಟಪವನ್ನು ದೇವಿಗೆ ಅರ್ಪಿಸಲಾಗುವುದು' ಎಂದು ಶಾರದಾ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಬಾಲಕೃಷ್ಣ ಶೆಣೈ ತಿಳಿಸಿದರು.


ವಾರಾಣಸಿಯ ನೇಕಾರರು ಮಂಗಳೂರಿನ ಆಚಾರ್ಯ ಮಠದ ಶಾರದೆಗೆ ತೊಡಿಸುವ ಚಿನ್ನದ ಜರಿಯ ಸೀರೆಗೆ ಅಂತಿಮ ಸ್ಪರ್ಶ ನೀಡುತ್ತಿರುವುದು

ಶಿವಮೊಗ್ಗ ಆಸ್ಪತ್ರೆಯಲ್ಲಿ ಶರಣರಿಗೆ ಚಿಕಿತ್ಸೆ: ಕೋರ್ಟ್ ಅನುಮತಿ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಹೃದಯ ಸಂಬಂಧಿ ಕಾಯಿಲೆ ತಪಾಸಣೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲು ಜಿಲ್ಲಾ ನ್ಯಾಯಾಲಯ ಅನುಮತಿ ನೀಡಿದೆ.

ಜಿಲ್ಲಾ ಕಾರಾಗೃಹದ ಅಧೀಕ್ಷಕಿ ಮಹಾದೇವಿ ಎಂ.ಮರಕಟ್ಟಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಬಿ.ಕೆ.ಕೋಮಲಾ ಸೋಮವಾರ ಪ್ರಕಟಿಸಿದರು. ಆರೋಪಿಯನ್ನು ಮಂಗಳವಾರ ಶಿವಮೊಗ್ಗಕ್ಕೆ ಸ್ಥಳಾಂತರಿಸುವ ಸಾಧ್ಯತೆ ಇದೆ.

ಶಿರಸ್ತೇದಾರ ಆತ್ಮಹತ್ಯೆ

ಹಿರೇಕೆರೂರು(ಹಾವೇರಿ): ಪಟ್ಟಣದ ನ್ಯಾಯಾಲಯದಲ್ಲಿ ಶಿರಸ್ತೇದಾರರಾಗಿದ್ದ ಮಲ್ಲಿಕಾರ್ಜುನ ಭರಗಿ (42) ಹಿರೇಕೆರೂರಿನ ಸರ್ಕಾರಿ ನೌಕರರ ಭವನದ ಕೊಠಡಿಯಲ್ಲಿ ಭಾನುವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುಮಾರು 26 ಪುಟಗಳ 'ಡೆತ್ ನೋಟ್' ಪತ್ತೆಯಾಗಿದೆ.

ಅವರಿಗೆ ತಂದೆ, ತಾಯಿ, ಪತ್ನಿ, ಪುತ್ರಿ ಹಾಗೂ ಒಬ್ಬ ಪುತ್ರ ಇದ್ದಾರೆ.

'ವಕೀಲೆ ಹಸೀನಾ ಮೂಲಿಮನಿ ಅವರು ಪತಿಗೆ ನಿತ್ಯ ಫೋನ್, ಮೆಸೇಜ್ ಮಾಡಿ, ಫೋಟೊ ಕಳುಹಿಸಿ ಮಾನಸಿಕ ಹಿಂಸೆ ನೀಡುತ್ತಿದ್ದಳು. ವಕೀಲರಾದ ಜಿ.ವಿ.ಕುಲಕರ್ಣಿ, ಕೆ.ಬಿ.ಕುರಿಯವರು, ವಾಸೀಮ್ ಅವರು ನ್ಯಾಯಾಲಯದಲ್ಲಿ ಮಾನಸಿಕ ಕಿರುಕುಳ ನೀಡುತ್ತಿದ್ದರು' ಎಂದು ಮೃತರ ಪತ್ನಿ ಭಾರತಿ ದೂರಿನಲ್ಲಿ ತಿಳಿಸಿದ್ದಾರೆ. ನಾಲ್ವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ರಾಜಕಾಲುವೆಗಳ ಒತ್ತುವರಿ ಅರ್ಜಿ ವಿಚಾರಣೆ: ಹೈಕೋರ್ಟ್ ಸ್ಪಷ್ಟನೆ

‘ಪರ್ಯಾಯ ಪ್ರಾಧಿಕಾರ ಆದೇಶ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾಲುವೆ ಒತ್ತುವರಿ ಸೇರಿ ಹೈಕೋರ್ಟ್ ವಿಚಾರಣೆ ನಡೆಸುತ್ತಿರುವ ಅರ್ಜಿಗಳ ಕುರಿತು ಯಾವುದೇ ಪ್ರಾಧಿಕಾರವು ಪರ್ಯಾಯ ತನಿಖೆ ಅಥವಾ ಆದೇಶ ಮಾಡುವಂತಿಲ್ಲ. ಈ ಆದೇಶವು ಎಲ್ಲಾ ಪ್ರಾಧಿಕಾರಗಳಿಗೂ ಅನ್ವಯಿಸುತ್ತದೆ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ಕೋರಮಂಗಲದ ವಿಜಯನ್ ಮೆನನ್ ಸೇರಿ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠವು ಈ ಕುರಿತಂತೆ ವಿವರಿಸಿ, ‘ರಾಜಕಾಲುವೆ ನಿರ್ವಹಣೆಗೆ ಸಂಬಂಧಿಸಿದಂತೆ ಮಹಾಲೇಖಪಾಲರ (ಸಿಎಜಿ) ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮೂವರು ಅಧಿಕಾರಿಗಳ ಸಮಿತಿಯನ್ನು ಮಂಗಳವಾರದೊಳಗೆ (ಸೆ.20) ರಚಿಸಬೇಕು’ ಎಂದು ಬಿಬಿಎಂಪಿಗೆ ತಾಕೀತು ಮಾಡಿತು.



ನಗರದ ಸಾಕಷ್ಟು ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿವೆ. ಇವುಗಳಿಂದ ದ್ವಿಚಕ್ರ ವಾಹನ ಸವಾರರಿಗೆ ಅಪಾಯವಿದೆ. ಅವರಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಗುಂಡಿಮುಕ್ತ ರಸ್ತೆಗಳನ್ನು ಹೊಂದುವ ಹಕ್ಕು ನಾಗರಿಕರಿಗೆ ಇದೆ

ಅಲೋಕ್ ಆರಾಧೆ,
ಹಂಗಾಮಿ ಮುಖ್ಯ ನ್ಯಾಯಮೂರ್ತಿ

‘2021ರ ಸೆಪ್ಟೆಂಬರ್‌ನಲ್ಲೇ ಸಿಎಜಿ ವರದಿ ನೀಡಿದೆ. ಆ ವರದಿ ಆಧರಿಸಿ ಬಿಬಿಎಂಪಿ ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಮೂವರು ಸದಸ್ಯರ ಸಮಿತಿಯು ಸಿಎಜಿ ವರದಿಯ ಶಿಫಾರಸುಗಳ ಜಾರಿಗೆ ಕೈಗೊಂಡ ಕ್ರಮಗಳ ಬಗ್ಗೆ 15 ದಿನಗಳಿಗೊಮ್ಮೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು. ಈ ನಿರ್ದೇಶನ ಉಲ್ಲಂಘಿಸಿದರೆ ಗಂಭೀರವಾಗಿ ಪರಿಗಣಿಸಲಾಗುವುದು’ ಎಂದು ಎಚ್ಚರಿಕೆ ನೀಡಿತು.

‘ರಸ್ತೆ ಗುಂಡಿಗಳ ಕುರಿತಾದ ದೂರುಗಳನ್ನು ಪರಿಹರಿಸಿದ ನಂತರ ಪೋಟೋಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು. ದೂರು ಪರಿಹಾರ ವ್ಯವಸ್ಥೆಯ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು. ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯ ಅನುಪಾಲನಾ ವರದಿ ಮತ್ತು ಫೋಟೊಗಳನ್ನು ಮುಂದಿನ ವಿಚಾರಣೆ ವೇಳೆ ಸಲ್ಲಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠವು ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿ, ‘ನಗರದಲ್ಲಿ ಇದೇ 16ರ ವರೆಗೆ ಒಟ್ಟು 2,626 ಕಡೆ ರಾಜಕಾಲುವೆ ಒತ್ತುವರಿ ಗುರುತಿಸಲಾಗಿದೆ. ಅವುಗಳ ಪೈಕಿ 2,024 ಒತ್ತುವರಿ ತೆರವುಗೊಳಿಸಲಾಗಿದೆ. ಉಳಿದ 602 ಒತ್ತುವರಿಗಳ ತೆರವು ಕಾರ್ಯ ಪ್ರಗತಿಯಲ್ಲಿದೆ’ ಎಂದು ತಿಳಿಸಿದರು.

ಅಸಮಾಧಾನ: ‘ಮಳೆನೀರು ಪ್ರವಾಹದಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆ ಬಗೆಹರಿಸಲು ಕುಂದುಕೊರತೆ ಪರಿಹಾರ ಕೇಂದ್ರದ ವೆಬ್‌ಸೈಟ್ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ’ ಎಂದು ನ್ಯಾಯಪೀಠ ಇದೇ ವೇಳೆ ಅಸಮಾಧಾನ ವ್ಯಕ್ತಪಡಿಸಿದೆ.

‘602 ಗುಂಡಿಗಳು ಬಾಕಿ’

‘ಇದೇ 14ರವರೆಗೆ ನಗರದಾದ್ಯಂತ ಪ್ರಮುಖ ರಸ್ತೆಗಳ 2,010 ಗುಂಡಿಗಳನ್ನು ಮುಚ್ಚಲಾಗಿದ್ದು, ಇನ್ನೂ 221 ಗುಂಡಿಗಳನ್ನು ಭರ್ತಿ ಮಾಡಬೇಕಿದೆ. ಅವುಗಳನ್ನು ಮುಂದಿನ ಹತ್ತು ದಿನಗಳಲ್ಲಿ ಹಾಟ್‌ಮಿಕ್ಸ್ ಬಳಸಿ ಮುಚ್ಚಲಾಗುವುದು’ ಎಂದು ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

‘ಪ್ರಮುಖ ರಸ್ತೆಗಳ 427.12 ಕಿ.ಮೀ ರಸ್ತೆ ರಿಪೇರಿ ಮತ್ತು ಡಾಂಬರೀಕರಣ ಕಾರ್ಯಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಈ ಪ್ರಕ್ರಿಯೆ 2023ರ ಜನವರಿ 31ರೊಳಗೆ ಪೂರ್ಣಗೊಳ್ಳಲಿದೆ. ಪಾಲಿಕೆಯ ಎಂಟು ವಲಯಗಳ ವಾರ್ಡ್ ಮಟ್ಟದಲ್ಲಿ ಒಟ್ಟು 2,500 ಕಿ.ಮೀ ರಸ್ತೆಗಳ ಗುಂಡಿ ಮುಚ್ಚುವ, ರಸ್ತೆ ರಿಪೇರಿ ಮತ್ತು ಡಾಂಬರೀಕರಣ ಕಾರ್ಯವನ್ನು 2023ರ ಮಾರ್ಚ್ 31ರ ಒಳಗೆ ಪೂರ್ಣಗೊಳಿಸಲಾಗುವುದು’ ಎಂದು ವಿವರಿಸಿದರು.

ಸಾಹಿತ್ಯ ಅಕಾಡೆಮಿ ರಾಷ್ಟ್ರೀಯ ಕಾವ್ಯ ಕಮ್ಮಟ 22ರಿಂದ

ಮಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಸಹಯೋಗದಲ್ಲಿ ಸೆ.22ರಿಂದ ಮೂರು ದಿನಗಳ ಕಾಲ ರಾಷ್ಟ್ರ ಮಟ್ಟದ ಕಾವ್ಯ ಕಮ್ಮಟವನ್ನು ಎಡನೀರು ಮಠದಲ್ಲಿ ಹಮ್ಮಿಕೊಂಡಿದೆ.

ದೇಶದ ವಿವಿಧ ಭಾಗಗಳಿಂದ ಸುಮಾರು 60 ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದು, ಕವಿ ಡಾ. ವಸಂತಕುಮಾರ ಪೆರ್ಲ ಕಮ್ಮಟದ ನಿರ್ದೇಶಕರಾಗಿರುತ್ತಾರೆ.

ಸೆ. 22ರ ಬೆಳಿಗ್ಗೆ ಎಡನೀರು ಮಠದ ಸ್ವಾಮೀಜಿ ಸಚ್ಚಿದಾನಂದ ಭಾರತಿ ಅವರ ಸಾನ್ನಿಧ್ಯದಲ್ಲಿ ಕವಯಿತ್ರಿ ವಿಜಯಪುರದ ಸರಸ್ವತಿ ಚಿಮ್ಮಲಗಿ ಕಮ್ಮಟ ಉದ್ಘಾಟಿಸುವರು. ಕವಿ ಡಾ. ರಮಾನಂದ ಬನಾರಿ, ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಮುಖ್ಯ ಅತಿಥಿಗಳಾಗಿರುವರು.

ಅನುವಾದಕ ಪಿ.ಎನ್. ಮೂಡಿತ್ತಾಯ, ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್., ಅಕಾಡೆಮಿಯ ಸದಸ್ಯ ಸಂಚಾಲಕಿ ದೀಪ್ತಿ ಭದ್ರಾವತಿ ಮತ್ತು ಕೇಶವ ಬಂಗೇರ ಪಾಲ್ಗೊಳ್ಳುವರು.

ಹಿಜಾಬ್ ನಿಷೇಧ: ದುಷ್ಯಂತ್ ದವೆ ಅಭಿಪ್ರಾಯ

ಮುಸ್ಲಿಮರ ಮೂಲೆಗುಂಪು ಮಾಡುವ ಷಡ್ಯಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಳೆದ ಕೆಲವು ವರ್ಷಗಳಲ್ಲಿ ಇಸ್ಲಾಮಿಕ್ ಜಗತ್ತು ಆತ್ಮಹತ್ಯಾ ಬಾಂಬ್ ದಾಳಿಗಳ ಹಲವು ಘಟನೆಗಳಿಂದ ತತ್ತರಿಸಿದೆ. ಆದರೆ, 5 ಸಾವಿರ ವರ್ಷಗಳ ಸಮನ್ವಯ ಉದಾರವಾದದ ಇತಿಹಾಸ ಹೊಂದಿರುವ ನಮ್ಮ ದೇಶದಲ್ಲಿ ಪುಲ್ವಾಮಾದಲ್ಲಿ ಮಾತ್ರ ಆತ್ಮಹತ್ಯಾ ಬಾಂಬ್ ದಾಳಿ ನಡೆದಿದೆ. ಇದು ಅಲ್ಪಸಂಖ್ಯಾತರು ದೇಶದ ಮೇಲೆ ಇಟ್ಟಿರುವ ನಂಬಿಕೆಗೆ ಸಾಕ್ಷಿ’ ಎಂದು ಹಿಜಾಬ್ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಸೋಮವಾರ ಮುಂದುವರಿಸಿತು.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠದ ಎದುರು ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ, ‘ತರಗತಿಯಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವ ಮೂಲಕ ಸಂವಿಧಾನದ ಅಡಿಯಲ್ಲಿ ಆತ್ಮಸಾಕ್ಷಿಯ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಅಭ್ಯಾಸ ಮಾಡಲು ಅನುವು ಮಾಡಿಕೊಡಬೇಕು. ಈ ಮೂಲಕ ಸಮನ್ವಯ ಉದಾರವಾದದ ಸಂಸ್ಕೃತಿ ಸಂರಕ್ಷಿಸಲು ಅವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

‘ಹಿಜಾಬ್ ಧರಿಸಿರುವ ಮುಸ್ಲಿಂ ಯುವತಿಯರು ಯಾರ ಭಾವನೆಗಳನ್ನು ನೋಯಿಸುವುದಿಲ್ಲ ಹಾಗೂ ಹಿಜಾಬ್ ಅವರ ಗುರುತು’ ಎಂದು ಅವರು ಪ್ರತಿಪಾದಿಸಿದರು.

ದೇಶವು ಉದಾರವಾದದ ಸಂಪ್ರದಾಯದ ಮೇಲೆ ನಿರ್ಮಾಣವಾಗಿದೆ ಹಾಗೂ ವಿವಿಧತೆಯಲ್ಲಿ ಏಕತೆ ಇದೆ ಎಂದು ಅವರು ತಿಳಿಸಿದರು.

ಲವ್ ಜಿಹಾದ್ ವಿವಾದ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಿದ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಅವಕಾಶ ನಿರಾಕರಿಸುವುದು ಅಲ್ಪಸಂಖ್ಯಾತ ಸಮುದಾಯವನ್ನು ಮೂಲೆ ಗುಂಪು ಮಾಡುವ ಷಡ್ಯಂತ್ರವನ್ನು ಸೂಚಿಸುತ್ತದೆ ಎಂದು ಅವರು ವಾದ ಮಂಡಿಸಿದರು.

‘ಒಬ್ಬ ಹಿಂದೂ ಹುಡುಗಿ ಮುಸ್ಲಿಂ ಹುಡುಗಿಯನ್ನು ಹಿಜಾಬ್ ಧರಿಸುವುದು ಏಕೆಂದು ಪ್ರಶ್ನಿಸುವುದು ಹಾಗೂ ಮುಸ್ಲಿಂ ಹುಡುಗಿ ಧರ್ಮದ ಬಗ್ಗೆ ವಿವರಿಸುವುದು ಒಂದು ಸುಂದರ ಸಂಭಾಷಣೆ’ ಎಂದರು.

‘ಪಶ್ಚಿಮದ ರಾಷ್ಟ್ರಗಳು ಈಗಾಗಲೇ ಹಿಜಾಬ್‌ಗೆ ಅನುಮತಿ ನೀಡಿವೆ. ಅಮೆರಿಕದ ಸೇನೆಯಲ್ಲಿ ಟರ್ಬನ್ (ಪಗಡಿ) ಧರಿಸಲು ಅವಕಾಶ ನೀಡಲಾಗಿದೆ. ಸಿಖ್ ಧರ್ಮದವರು ಪಗಡಿ ಧರಿಸುವ ಬಗ್ಗೆ ವಿವಾದ ಇಲ್ಲದಿರುವಾಗ ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವುದು ಆಕ್ಷೇಪ ಏಕೆ’ ಎಂದು ಅವರು ಪ್ರಶ್ನಿಸಿದರು. ‘ಜಗತ್ತಿನಾದ್ಯಂತ ಮುಸ್ಲಿಂ ಮಹಿಳೆಯರು ಶತಮಾನಗಳಿಂದ ಹಿಜಾಬ್ ಧರಿಸುತ್ತಿದ್ದಾರೆ’ ಎಂದೂ ಹೇಳಿದರು.

ಮುಸ್ಲಿಂ ಮಹಿಳೆಯರಿಗೆ ಹಿಜಾಬ್ ಮುಖ್ಯವಾಗಿದೆ. ಅದು ಅವರ ನಂಬಿಕೆ ಎಂದು ಅವರು ಹೇಳಿದರು. ಹಿಜಾಬ್ ಧರಿಸುವುದರಿಂದ ದೇಶದ ಸಮಗ್ರತೆ ಹಾಗೂ ಏಕತೆಗೆ ಹೇಗೆ ಧಕ್ಕೆ ಬರುತ್ತದೆ ಎಂದು ಅವರು ಪ್ರಶ್ನಿಸಿದರು. ಕರ್ನಾಟಕ ಹೈಕೋರ್ಟ್ ಹಾಗೆ ಹೇಳಿಲ್ಲ ಮತ್ತು ಹಾಗೆಂದು ಯಾರೂ ಹೇಳುತ್ತಿಲ್ಲ ಎಂದು ನ್ಯಾಯಪೀಠ ಪ್ರತಿಕ್ರಿಯಿಸಿತು.

ಬಳಿಕ ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ವೈದ್ಯನನ್ನು ಕೊಂದ ಪ್ರಿಯತಮೆ

ಖಾಸಗಿ ಕ್ಷಣಗಳ ವಿಡಿಯೊ ವೈರಲ್ ಮಾಡಿದ್ದಕ್ಕೆ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕ್ಷಣದ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಿಗೆ ಹಾಕಿದ್ದಕ್ಕೆ ಆಕ್ರೋಶಗೊಂಡ ಪ್ರಿಯತಮೆ ತನ್ನ ಮೂವರು ಸ್ನೇಹಿತರ ಜೊತೆಗೂಡಿ ಪ್ರಿಯಕರನ್ನೇ ಕೊಲೆ ಮಾಡಿರುವ ಘಟನೆ ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಮೈಕೋಲೇಔಟ್‌ನಲ್ಲಿ ನಡೆದಿದೆ.

ವಿಕಾಸ್ ಕೊಲೆಯಾದ ಪ್ರಿಯಕರ.

ಪ್ರತಿಭಾ (25) ಮತ್ತು ಆಕೆಯ ಸ್ನೇಹಿತರಾದ ಸುಶೀಲ್ (25), ಗೌತಮ್ (27) ಬಂಧಿತರು. ಮತ್ತೊಬ್ಬ ಆರೋಪಿ ಸೂರ್ಯ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಿಕಾಸ್ ಚೆನ್ನೈನಲ್ಲಿ ವೈದ್ಯರಾಗಿದ್ದರು. ಈ ವೇಳೆ ಪ್ರತಿಭಾ ಪರಿಚಯವಾಗಿದ್ದಳು. ಇಬ್ಬರೂ ಪ್ರೀತಿಸುತ್ತಿದ್ದರು. ಎರಡು ಕುಟುಂಬದವರೂ ಮದುವೆಗೆ ಸಮ್ಮತಿ ನೀಡಿದ್ದರು. ಈ ನಡುವೆ ಉನ್ನತ ಶಿಕ್ಷಣಕ್ಕೆ ವಿಕಾಸ್ ಚೆನ್ನೈನಿಂದ ನಗರಕ್ಕೆ ಬಂದಿದ್ದರು. ಪ್ರತಿಭಾ ಜತೆಗೆ ವಿಕಾಸ್ ಖಾಸಗಿಯಾಗಿ ಕಳೆದಿದ್ದ ಕ್ಷಣಗಳನ್ನು ವಿಡಿಯೊ ಮಾಡಿಕೊಂಡಿದ್ದ. ನಕಲಿ ಖಾತೆ ತೆಗೆದು ಸಾಮಾಜಿಕ ಜಾಲತಾಣಕ್ಕೆ ಆ ವಿಡಿಯೊ ಹರಿಯಬಿಟ್ಟಿದ್ದ. ಇದೇ ವಿಷಯದಲ್ಲಿ ಇಬ್ಬರ ನಡುವೆ ಗಲಾಟೆ ನಡೆದಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತನ್ನ ಮರ್ಯಾದೆ ಹೋಯಿತು ಎಂದು ಕುಪಿತಗೊಂಡಿದ್ದ ಪ್ರತಿಭಾ ವಿಡಿಯೊ ವಿಷಯವನ್ನು ಸ್ನೇಹಿತರಿಗೂ ತಿಳಿಸಿದ್ದಳು. ತನ್ನ ಮೂವರು ಸ್ನೇಹಿತರೊಂದಿಗೆ ಕೊಲೆಗೆ ಸಂಚು ರೂಪಿಸಿ ಮೈಕೋ ಲೇಔಟ್ ಮನೆಗೆ ಕರೆಸಿಕೊಂಡು ಹಲ್ಲೆ ನಡೆಸಿ ಕೊಲೆ ಮಾಡಿದ್ದರು’ ಎಂದು ಮೂಲಗಳು ಹೇಳಿವೆ.

‘ವಿಚಾರಣೆ ವೇಳೆ ಆರೋಪಿಗಳು ವಿಡಿಯೊ ವೈರಲ್ ಮಾಡಿದಕ್ಕೆ ಕೊಲೆ ಮಾಡಿರುವುದಾಗಿ ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಪ್ರಿಯಕರನೊಂದಿಗೆ ಮದುವೆ ನಿಶ್ಚಯವಾಗಿದ್ದ ಯುವತಿಯಿಂದ ಹತ್ಯೆ
- ವಿಡಿಯೊದಿಂದ ಮಾನ ಹೋಯಿತು ಎಂದು ಕೋಪಗೊಂಡಿದ್ದ ಯುವತಿ
- ಸ್ನೇಹಿತರೊಂದಿಗೆ ಸೇರಿ ಕೊಲೆಗೆ ಸಂಚು



ಕೊಲೆಯಾದ ವೈದ್ಯ ವಿಕಾಸ್



ಪ್ರತಿಭಾ



ಗೌತಮ್



ಸುಶೀಲ್

ಮೊಬೈಲ್ ಬಳಸದಂತೆ ತಾಯಿ ತಾಕೀತು: ಮಗಳು ನೇಣಿಗೆ ಶರಣು

ಮಾಲೂರು: ತಾಲ್ಲೂಕಿನ ಮಲ್ಲನಹಳ್ಳಿಯಲ್ಲಿ ಮೊಬೈಲ್ ಬಳಸದಂತೆ ತಾಯಿ ಹೇಳಿದ ಬುದ್ಧಿ ಮಾತಿನಿಂದ ಮನನೊಂದ ಯುವತಿಯೊಬ್ಬಳು ಭಾನುವಾರ ರಾತ್ರಿ ನೇಣಿಗೆ ಶರಣಾಗಿದ್ದಾಳೆ.

ಮಾನಸ (18) ಆತ್ಮಹತ್ಯೆ ಮಾಡಿಕೊಂಡ ಯುವತಿ. ಕೂಲಿ ಕೆಲಸ ಮಾಡುತ್ತಿದ್ದ ಮಾನಸ ಮೊಬೈಲ್ ಹೆಚ್ಚಾಗಿ ಬಳಸುತ್ತಿದ್ದರು. ಮೊಬೈಲ್ ಬಳಸದಂತೆ ತಾಯಿ ಮಂಜುಳಮ್ಮ ಬುದ್ಧಿಮಾತು ಹೇಳಿದ್ದರು. ಇದರಿಂದ ಮನನೊಂದ ಯುವತಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೆಕ್ಸಿಕೊದಲ್ಲಿ ಭೂಕಂಪನ

ಮೆಕ್ಸಿಕೊ ಸಿಟಿ (ಎಪಿ): ಮೆಕ್ಸಿಕೊದ ಪೆಸಿಫಿಕ್ ಕರಾವಳಿಯ ಮಿಶೋಕನ್ ರಾಜ್ಯದಲ್ಲಿ ಸೋಮವಾರ ಸ್ಥಳೀಯ ಕಾಲಮಾನ ಮಧ್ಯಾಹ್ನ 1.05 ಗಂಟೆಗೆ ಭೂಕಂಪನ ಸಂಭವಿಸಿದೆ.

ಭೂಕಂಪನದ ತೀವ್ರತೆ ರಿಕ್ಟರ್ ಮಾಪನದಲ್ಲಿ 7.6 ದಾಖಲಾಗಿದೆ ಎಂದು ಯುಎಸ್ ಜಿಯೋಲಾಜಿಕಲ್ ಸರ್ವೆ ತಿಳಿಸಿದೆ. ಸದ್ಯ ಯಾವುದೇ ಸಾವು–ನೋವು ವರದಿಯಾಗಿಲ್ಲ.

ರಾಜ್ಯ ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳ ಒಕ್ಕೂಟದಿಂದ ಪ್ರತಿಭಟನೆ

ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಖಾಲಿಯಿರುವ ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ, ರಾಜ್ಯ ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳ ಒಕ್ಕೂಟದ ನೇತೃತ್ವದಲ್ಲಿ ನೂರಾರು ಪದವೀಧರರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

‘ಲಂಚ ತೆಗೆದುಕೊಳ್ಳಿ ಕೆಲಸ ಕೊಡಿ’ ಎಂದು ಕವರ್‌ನಲ್ಲಿ ಬರೆದು ವಿಭಿನ್ನವಾಗಿ ಪ್ರತಿಭಟಿಸಿದರು.

ರಾಜ್ಯದಲ್ಲಿ 2.5 ಲಕ್ಷಕ್ಕೂ ಹೆಚ್ಚಿನ ಉದ್ಯೋಗಗಳು ಖಾಲಿಯಿದ್ದರೂ ಸರ್ಕಾರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿಲ್ಲ. ಸರ್ಕಾರವು ಸಂಪೂರ್ಣ ವಿಫಲವಾಗಿದೆ ಎಂದು ಪ್ರತಿಭಟನಕಾರರು ದೂರಿದರು.

ನಡೆದಿರುವ ಹಲವು ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದೆ. ಅಕ್ರಮಗಳ ವಿರುದ್ಧ ಸರ್ಕಾರವು ಕ್ರಮ ಕೈಗೊಳ್ಳದ ಕಾರಣಕ್ಕೆ ಪದವೀಧರರು ಉದ್ಯೋಗದಿಂದ ವಂಚಿತರಾಗುವ ಸ್ಥಿತಿಯಿದೆ ಎಂದು ಅಳಲು ತೋಡಿಕೊಂಡರು.



ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಖಾಲಿ ಇರುವ 2.5 ಲಕ್ಷಕ್ಕೂ ಹೆಚ್ಚಿನ ಸರ್ಕಾರಿ ಉದ್ಯೋಗವನ್ನು ಭರ್ತಿ ಮಾಡುವಲ್ಲಿ ವಿಫಲವಾಗಿದ್ದು, ಈಗಾಗಲೇ ನಡೆದಿರುವ ಭರ್ತಿ ಪ್ರಕ್ರಿಯೆಗಳಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ಬೆಳಕಿಗೆ ಬಂದಿರುವುದನ್ನು ವಿರೋಧಿಸಿ 'ಕರ್ನಾಟಕ ರಾಜ್ಯ ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳ ಒಕ್ಕೂಟ'ದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಕೆಪಿಎಸ್‌ಸಿ, ಕೆಎಸ್‌ಪಿ, ಕೆಇಎ ನಡೆಸುವ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ಅಧಿಸೂಚನೆಯ ಜತೆಗೆ ಪ್ರಕಟಿಸಬೇಕು. ಯುಪಿಎಸ್‌ಸಿ ಮಾದರಿಯಲ್ಲಿ ವಾರ್ಷಿಕ ವೇಳಾಪಟ್ಟಿ ಪ್ರಕಟಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪಿಎಸ್‌ಐ ನೇಮಕಾತಿ ಅಕ್ರಮ ತನಿಖೆ ಶೀಘ್ರವೇ ಪೂರ್ಣಗೊಳಿಸಿ, 545 ಹುದ್ದೆಗಳಿಗೆ ಮರು ಪರೀಕ್ಷೆ ನಡೆಸಬೇಕು. ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಯ ಅರ್ಹತಾ ವಯೋಮಿತಿ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಕೆಪಿಟಿಸಿಎಲ್ ಪರೀಕ್ಷೆಯ ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ರಾಜಸ್ತಾನ ಮಾದರಿಯಲ್ಲಿ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಭವ್ಯಾ ನರಸಿಂಹಮೂರ್ತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ಪದವೀಧರರು ಪಾಲ್ಗೊಂಡಿದ್ದರು.

ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರ ನಡುವೆ ವಾಕ್ಸಮರ

ಕೆರೆ ಒತ್ತುವರಿ: ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಕೆರೆಗಳ ಒತ್ತುವರಿ ವಿಷಯ ವಿಧಾನಸಭೆಯಲ್ಲಿ ಸೋಮವಾರ ಕೋಲಾಹಲಕ್ಕೆ ಕಾರಣವಾಯಿತು. 'ಬೆಂಗಳೂರಿನ ಕೆರೆಗಳನ್ನು ಮುಚ್ಚಿದ್ದು ಯಾರು' ಎಂಬ ಪ್ರಶ್ನೆಯನ್ನೇ ಮುಂದಿಟ್ಟುಕೊಂಡು ಆಡಳಿತಾರೂಢ ಬಿಜೆಪಿ ಮತ್ತು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ತೀವ್ರ ವಾಕ್ಸಮರ ನಡೆಸಿದರು.

ಅತಿವೃಷ್ಟಿ ಮತ್ತು ಪ್ರವಾಹದ ಕುರಿತು ನಡೆದ ಚರ್ಚೆಗೆ ಉತ್ತರ ನೀಡಿದ ಕಂದಾಯ ಸಚಿವ ಆರ್. ಅಶೋಕ ಕೆರೆ ಒತ್ತುವರಿ ಬಗ್ಗೆ ಪ್ರಸ್ತಾಪಿಸಿದರು. 'ಬೆಂಗಳೂರಿನಲ್ಲಿ ಈ ಬಾರಿ ಮಾತ್ರ ಪ್ರವಾಹ ಬಂದಿಲ್ಲ. ಹಿಂದೆಯೂ ಹಲವು ಬಾರಿ ಇದೇ ಸಮಸ್ಯೆ ಆಗಿತ್ತು. ಇದು ಮಾನವ ನಿರ್ಮಿತ ಸಮಸ್ಯೆ. ಹಿಂದೆ ಆಡಳಿತ ನಡೆಸಿದವರಿಗೆ ದೂರದೃಷ್ಟಿ ಇದ್ದಿದ್ದರೆ ಈ ಸಮಸ್ಯೆ ಆಗುತ್ತಿರಲಿಲ್ಲ' ಎಂದರು.

ಆಗ ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಕೆ.ಜೆ. ಜಾರ್ಜ್, 'ನಾನು ಕೆರೆ ಕಬಳಿಸಿದ್ದೇನೆ ಎಂದು ನಿಮ್ಮ ಪಕ್ಷದವರು ಟ್ರೋಲ್ ಮಾಡುತ್ತಿದ್ದಾರೆ. ನನ್ನ ಕಾಲದಲ್ಲಿ ಯಾವ ಕೆರೆ ಮುಚ್ಚಿದ್ದೇನೆ ತೋರಿಸಿ? ನಾನು ಕಾನೂನುಬಾಹಿರ ಕೆಲಸ ಮಾಡಿದ್ದರೆ ಕ್ರಮ ಜರುಗಿಸಿ' ಎಂದು ಸವಾಲು ಹಾಕಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿ, 'ಯಾರು ಕೆರೆ ಕಬಳಿಸಿದ್ದಾರೆ ಎಂಬುದರ ತನಿಖೆ ಮಾಡಲಾಗುವುದು. ಕೆರೆಗಳ ಜಮೀನು ಮತ್ತು ನಿರ್ಬಂಧಿತ ವಲಯದಲ್ಲಿ (ಬಫರ್ ಝೋನ್) ಅತಿಕ್ರಮಣ, ಕಟ್ಟಡ ನಿರ್ಮಾಣ ನಿಷೇಧಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ 2007ರಲ್ಲಿ ಆದೇಶ ಹೊರಡಿಸಿತ್ತು. ಆ ಬಳಿಕವೂ ಹಲವು ಕೆರೆಗಳ ಅತಿಕ್ರಮಣ ನಡೆದಿದೆ. ಇದಕ್ಕೆ ಹೊಣೆ ಯಾರು ಎಂಬುದರ ಬಗ್ಗೆಯೂ ತನಿಖೆ ನಡೆಸಲಾಗುವುದು. ಕೆರೆಗಳ ಕಣ್ಮರೆಗೆ ಕಾರಣವಾಗಿರುವವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

ಕೆರೆ ಸ್ವರೂಪ ಅಳಿಸಲು ಯತ್ನ: 'ಮೂಲ ಸ್ವರೂಪ ಕಳೆದುಕೊಂಡ ಕೆರೆಗಳನ್ನು ದಾಖಲೆಗಳಿಂದ ಅಳಿಸಿ ಹಾಕುವ ಪ್ರಯತ್ನ 2018ರಲ್ಲಿ ನಡೆದಿತ್ತು. ಭೂ ಕಂದಾಯ ಕಾಯ್ದೆಯ ಸೆಕ್ಷನ್-–68ರ ಅಡಿಯಲ್ಲಿ ಆ ರೀತಿಯ ತೀರ್ಮಾನ ಕೈಗೊಳ್ಳಲು ಅವಕಾಶ ಇಲ್ಲ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅಭಿಪ್ರಾಯ ನೀಡಿದ್ದರು. ಅದನ್ನು ಬದಿಗೊತ್ತಿ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಜನರಿಂದ ವಿರೋಧ ವ್ಯಕ್ತವಾದ ಕಾರಣದಿಂದ ಸರ್ಕಾರ ಆ ತೀರ್ಮಾನವನ್ನು ಅನುಷ್ಠಾನಕ್ಕೆ ತಂದಿರಲಿಲ್ಲ' ಎಂದು ಮುಖ್ಯಮಂತ್ರಿ ಹೇಳಿದರು.

ಅಲ್ಲಗಳೆದ ಸಿದ್ದರಾಮಯ್ಯ: 'ನಮ್ಮ ಅವಧಿಯಲ್ಲಿ ಆ ರೀತಿಯ ತೀರ್ಮಾನ ಕೈಗೊಂಡಿರಲಿಲ್ಲ. ಮೂಲ ಸ್ವರೂಪ ಕಳೆದುಕೊಂಡ ಕೆರೆಗಳನ್ನು ಪಟ್ಟಿಯಿಂದ ಕೈಬಿಡುವ ನಿರ್ಧಾರ ಮಾಡಿದ್ದೆವು. ಆದರೆ, ಅದನ್ನು ಅನುಷ್ಠಾನಕ್ಕೆ ತರಲಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಬೆಂಬಲಕ್ಕೆ ನಿಂತ ಜಾರ್ಜ್, 'ಆಗ ಕಂದಾಯ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪ ಕ್ಷೇತ್ರದಲ್ಲಿ ಉಂಟಾದ ಸಮಸ್ಯೆ ಕಾರಣದಿಂದ ಈ ಪ್ರಸ್ತಾವ ಸಂಪುಟದ ಮುಂದೆ ಬಂದಿತ್ತು' ಎಂದರು.

'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಏಕೆ ಮುಟ್ಟಿಕೊಳ್ಳುತ್ತೀರಿ? ಕೆರೆಗಳನ್ನು ನುಂಗುವುದೇ ನಿಮ್ಮ ಉದ್ದೇಶವಾಗಿತ್ತು ಎಂಬುದು ಸಾಬೀತಾಗಿದೆ' ಎಂದು ಬೊಮ್ಮಾಯಿ ಏರಿದ ಧ್ವನಿಯಲ್ಲಿ ಹೇಳಿದರು.

'ಹಳೆಯ ವಿಷಯ ಪ್ರಸ್ತಾಪಿಸಿ ದಿಕ್ಕು ತಪ್ಪಿಸಬೇಡಿ. ಸುಭಾಶ್ ನಗರದ ಕೆರೆಯಲ್ಲಿ ಬಸ್ ನಿಲ್ದಾಣವಿದೆ. ಅದನ್ನು ಮತ್ತೆ ಕೆರೆಯನ್ನಾಗಿ ಮಾಡಲು ಸಾಧ್ಯವೆ' ಎಂದು ಸಿದ್ದರಾಮಯ್ಯ ಕೇಳಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ವಾಕ್ಸಮರಕ್ಕೆ ಇಳಿದರು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಕಲಾಪವನ್ನು ಮಧ್ಯಾಹ್ನದ ಭೋಜನ ವಿರಾಮಕ್ಕೆ ಮುಂದೂಡಿದರು.



ವಿಧಾನಸಭೆಯಲ್ಲಿ ಸೋಮವಾರ ಕೆರೆ ಒತ್ತುವರಿ ಕುರಿತ ಚರ್ಚೆಯಲ್ಲಿ ಪರಸ್ಪರ ವಾಕ್ಸಮರದಲ್ಲಿ ನಿರತರಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ. ಪೀಠದಲ್ಲಿ ಕುಳಿತು ಚರ್ಚೆ ವೀಕ್ಷಿಸುತ್ತಿರುವ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ

42 ಕೆರೆಗಳ ಪಟ್ಟಿ ನೀಡಿದ ಅಶೋಕ

ನಗರದಲ್ಲಿ 1977ರಿಂದ ಈವರೆಗೆ 42 ಕೆರೆಗಳು ಒತ್ತುವರಿಯಾಗಿವೆ ಎಂದು ಕಂದಾಯ ಸಚಿವ ಆರ್. ಅಶೋಕ ಸದನದಲ್ಲೇ ಪಟ್ಟಿ ಓದಿದರು.

ಬಿಡಿಎ 22 ಕೆರೆಗಳನ್ನು ಒತ್ತುವರಿ ಮಾಡಿದೆ. ಬಿಡಿಎ ಅನುಮೋದಿತ ಬಡಾವಣೆಯಲ್ಲಿ ಒಂದು ಕೆರೆ ಮುಚ್ಚಲಾಗಿದೆ. ಬಿಬಿಎಂಪಿ ಐದು ಕೆರೆಗಳನ್ನು ಮುಚ್ಚಿದೆ. ಖಾಸಗಿ ಒತ್ತುವರಿದಾರರು ಏಳು ಕೆರೆಗಳನ್ನು ಅತಿಕ್ರಮಣ ಮಾಡಿದ್ದಾರೆ. ಬಿಡಿಎ ಕೆರೆಗಳನ್ನು ಮುಚ್ಚಿ ನಿರ್ಮಿಸಿದ ಬಡಾವಣೆಗಳಲ್ಲಿ ಅಂದಾಜು ₹ 11,640 ಕೋಟಿ ಮೌಲ್ಯದ ನಿವೇಶನಗಳನ್ನು ಮಾರಾಟ ಮಾಡಿದೆ ಎಂದರು.

ನಾವು ಶಕ್ತಿಯುತವಾದಷ್ಟೂ ವಿರೋಧಿಗಳು ಹೆಚ್ಚು. ದುರ್ಬಲವಾದಷ್ಟೂ ವಿರೋಧಿಗಳು ಕಡಿಮೆ.

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

'ಸೊಳ್ಳೆ ಕಾಟಕ್ಕೆ ಕೆರೆ ಮುಚ್ಚಿದ್ದರಂತೆ'

'ಸೊಳ್ಳೆ ಕಾಟದ ಕಾರಣಕ್ಕಾಗಿ ಕೆರೆಗಳನ್ನು ಮುಚ್ಚಿರಬಹುದು' ಎಂದು ಕಾಂಗ್ರೆಸ್ ಶಾಸಕ ಕೆ.ಜೆ. ಜಾರ್ಜ್ ವಿಧಾನಸಭೆಯಲ್ಲೇ ಹೇಳಿದ್ದರು. ಈ ವಿಷಯವನ್ನು ಮುಂದಿಟ್ಟುಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಅವರನ್ನು 'ಟ್ರೋಲ್' ಮಾಡಲಾಗುತ್ತಿದೆ. ಸೋಮವಾರ ಸದನದಲ್ಲಿ ಈ ಕುರಿತು ಪ್ರಸ್ತಾಪಿಸಿದ ಅವರು, ತೀವ್ರ ಬೇಸರ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

'ಆರೋಗ್ಯ ವಿವಿ ಶೀಘ್ರ ಅರ್ಚಕರಹಳ್ಳಿಗೆ'

ಬೆಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವನ್ನು 2–3 ತಿಂಗಳ ಒಳಗಾಗಿ ರಾಮನಗರದ ಅರ್ಚಕರಹಳ್ಳಿಗೆ ಸ್ಥಳಾಂತರಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನಸಭೆಯಲ್ಲಿ ಅವರು ಬಿಜೆಪಿಯ ಅ. ದೇವೇಗೌಡ ಪ್ರಶ್ನೆಗೆ ಈ ಮಾಹಿತಿ ನೀಡಿದರು. 'ಈ ವಿಶ್ವ ವಿದ್ಯಾಲಯಕ್ಕೆ 2007ರಲ್ಲಿ ರಾಜ್ಯ ಸರ್ಕಾರ 216 ಎಕರೆ ಜಮೀನು ಸ್ವಾಧೀಪಡಿಸಿಕೊಂಡಿದ್ದು, ಅದರಲ್ಲಿ 71 ಎಕರೆಯನ್ನು ವಿ.ವಿಗೆ, ಉಳಿದ 145 ಎಕರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗಿದೆ .ಈ ಬಜೆಟ್‌ನಲ್ಲಿ ₹ 600 ಕೋಟಿ ಅನುದಾನ ಮೀಸಲಿಡಲಾಗಿದೆ' ಎಂದರು.

ಎರಡು ಮಸೂದೆಗಳಿಗೆ ಪರಿಷತ್ ಅಂಗೀಕಾರ

ಬೆಂಗಳೂರು: ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ ವಿಧಾನ ಪರಿಷತ್‌ನಲ್ಲಿ ಧ್ವನಿಮತದ ಮೂಲಕ ಸೋಮವಾರ ಅಂಗೀಕಾರಗೊಂಡಿದೆ

ಮಸೂದೆಗಳನ್ನು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಂಡಿಸಿದರು. ಠೇವಣಿದಾರರ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟು, ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಕಾಯ್ದೆಯ ತಿದ್ದುಪಡಿಗೆ ಪ್ರಸ್ತಾಪಿಸಲಾಗಿದೆ.ಬಗರ್ ಹುಕುಂ ಅರ್ಜಿ ಹಾಕಲು ಮತ್ತೊಂದು ಅವಕಾಶ ಕಲ್ಪಿಸಲು ಜನರು, ಜನಪ್ರತಿನಿಧಿಗಳಿಂದ ಮನವಿ ಬಂದಿತ್ತು. .ಹೀಗಾಗಿ, ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಸೀಮಿತವಾಗಿ ತಿದ್ದುಪಡಿಗೆ ಮಸೂದೆ ಮಂಡಿಸಲಾಗಿದೆ ಎಂದರು.

ಕಾವೇರಿ ನದಿಗೆ ರಾಜಕಾಲುವೆ ಸಂಪರ್ಕಕ್ಕೆ 'ಮಾಸ್ಟರ್ ಪ್ಲಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜಕಾಲುವೆಗಳಲ್ಲಿ ಮಳೆ ನೀರು ಮಾತ್ರ ಹರಿಯುವಂತೆ ಮಾಡಿ ಅವುಗಳನ್ನು ಪಿನಾಕಿನಿ ನದಿಗೂ ಆ ಮೂಲಕ ಕಾವೇರಿ ನದಿಗೆ ಸಂಪರ್ಕ ಕಲ್ಪಿಸಲು 'ಮಾಸ್ಟರ್ ಪ್ಲಾನ್' ರೂಪಿಸಲಾಗುವುದು. ಅಲ್ಲದೇ, ಮಳೆ, ಪ್ರವಾಹ ಮತ್ತು ರಾಜಕಾಲುವೆಗಳ ನಿರಂತರ ನಿರ್ವಹಣೆಗಾಗಿ ಕಾರ್ಯಪಡೆ ರಚಿಸಲಾಗುವುದಐ-ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಬೆಂಗಳೂರಿನಲ್ಲಿ ಇತ್ತೀಚೆಗೆ ಸುರಿದ ಮಳೆ ಮತ್ತು ಪ್ರವಾಹದ ಬಗ್ಗೆ ವಿಧಾನಸಭೆಯಲ್ಲಿ ಸೋಮವಾರ ಸುದೀರ್ಘ ಉತ್ತರ ನೀಡಿದ ಅವರು, ನಗರದ ಜನಸಂಖ್ಯೆ, ಹೊಸ ಪ್ರದೇಶಗಳಿಂದಾಗಿ ರಾಜಕಾಲುವೆಗಳ ಮೇಲೆ ಅಧಿಕ ಒತ್ತಡ ಉಂಟಾಗಿದೆ ಎಂದರು.

ರಾಜಕಾಲುವೆಗಳ ಮೇಲೆ ಒತ್ತಡ ಕಡಿಮೆ ಮಾಡಿ, ಒತ್ತುವರಿಗಳನ್ನು ತೆರವು ಮಾಡಲು ಹೊಸ ವ್ಯವಸ್ಥೆಯ ಅಗತ್ಯವಿದೆ. ಇದಕ್ಕಾಗಿ ಅಧ್ಯಯನ ನಡೆಸಿ ಬಿಬಿಎಂಪಿ, ಬಿಡಿಎ ಮತ್ತು ಬಿಎಂಆರ್‌ಡಿಯನ್ನು ಸೇರಿಸಿ ಮಾಸ್ಟರ್ ಪ್ಲಾನ್ ರೂಪಿಸಲಾಗುವುದು. ಈವರೆಗೂ ಇದಕ್ಕೆ ಆದ್ಯತೆ ನೀಡಿರಲಿಲ್ಲ. ಇನ್ನು ಮುಂದೆ ಇದು ನಗರದ ಆದ್ಯತೆಯ ವಿಷಯವಾಗಲಿದೆ. 400 ಕಿ.ಮೀನಷ್ಟು ರಾಜಕಾಲುವೆ ಈ ವ್ಯಾಪ್ತಿಗೆ ಒಳಪಡಲಿದೆ ಎಂದು ಬೊಮ್ಮಾಯಿ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 2,626 ಒತ್ತುವರಿಗಳನ್ನು ಗುರುತಿಸಲಾಗಿದೆ. 2016ರವರೆಗೆ 428 ಒತ್ತುವರಿ ತೆರವು ಮಾಡಲಾಗಿದೆ. 2018 ರ ಬಳಿಕ 1,502 ಒತ್ತುವರಿ ತೆರವು ಮಾಡಿದ್ದೇವೆ. ಇನ್ನೂ 602 ಒತ್ತುವರಿ ತೆರವು ಬಾಕಿ ಉಳಿದಿದೆ. 2020 ರಲ್ಲಿ ಕೋವಿಡ್ ಕಾರಣ ತೆರವು ಕಾರ್ಯಕ್ಕೆ ತಡೆ ನೀಡಬೇಕು ಎಂದು ಕೆಲವರು ಹೈಕೋರ್ಟ್ ಮೆಟ್ಟಿಲು ಹತ್ತಿದ್ದರು. ಹೈಕೋರ್ಟ್ ತಡೆ ನೀಡಿತ್ತು. ಈಗ ತಡೆಯನ್ನು ತೆರವುಗೊಳಿಸಲಾಗಿದೆ ಎಂದು ಅವರು ಹೇಳಿದರು.

ನಗರದ ಪ್ರವಾಹ ನಿರ್ವಹಣೆಗೆ ಕಳೆದ ವರ್ಷ ₹1,600 ಕೋಟಿ ನೀಡಿದ್ದೇವೆ. ಇತ್ತೀಚೆಗೆ ರಾಜಕಾಲುವೆ ನಿರ್ವಹಣೆಗೆ ₹300 ಕೋಟಿ ನೀಡಲಾಗಿದೆ. ರಸ್ತೆ ಅಭಿವೃದ್ಧಿಗೂ ₹300 ಕೋಟಿ ನೀಡಲಾಗಿದೆ. ಇನ್ನು ಮುಂದೆ ಮಳೆ, ಪ್ರವಾಹ ಮತ್ತು ರಾಜಕಾಲುವೆಗಳ ನಿರ್ವಹಣೆಗೆ ಕಾರ್ಯಪಡೆ ರಚಿಸಲಾಗುವುದು. ಈ ಕಾರ್ಯಕ್ಕೆ ಪ್ರತಿ ವರ್ಷ ಬಜೆಟ್‌ನಲ್ಲಿ ಹಣ ನಿಗದಿ ಮಾಡಲಾಗುವುದು. ಇದು ನಿರಂತರ ಪ್ರಕ್ರಿಯೆ ಆಗಲಿದೆ ಎಂದು ಬೊಮ್ಮಾಯಿ ವಿವರಿಸಿದರು.

ನಗರದ ಎಲ್ಲಾ ಕೆರೆಗಳಿಗೆ ಸ್ಲೂಯಿಸ್ ಗೇಟ್ ಅಳವಡಿಸಲು ಮತ್ತು ತ್ಯಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಅವರು ಹೇಳಿದರು.

'ಐಟಿಯಿಂದ ಖ್ಯಾತಿ, ಜನರ ಶ್ರಮವೂ ಇದೆ'

'ಐಟಿ–ಬಿಟಿಯಿಂದ ಬೆಂಗಳೂರು ನಗರಕ್ಕೆ ದೊಡ್ಡ ಹೆಸರು ಬಂದಿದೆ. ಭಾರತ ಎಂದರೆ ಬೆಂಗಳೂರು ಎಂಬ ಮಟ್ಟಕ್ಕೆ ನಗರ ಬೆಳೆದಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

'ಬಹುತೇಕ ಐಟಿ ಕಂಪನಿಗಳು ಸ್ವಂತ ಕಟ್ಟಡ ಹೊಂದಿಲ್ಲ. ಐಟಿ ಪಾರ್ಕ್‌ಗಳಲ್ಲಿ ಕಂಪನಿಗಳು ನಡೆಯುತ್ತಿವೆ. ಈ ಪಾರ್ಕ್‌ಗಳಲ್ಲಿ ರಾಜಕಾಲುವೆಗಳು ಒತ್ತುವರಿ ಆಗಿವೆ. ಹಲವು ಕಡೆ ಮುಚ್ಚಿಹೋಗಿವೆ. ಈ ಕಂಪನಿಗಳ ಜತೆ ಐಟಿ–ಬಿಟಿ ಸಚಿವರು ಮಾತುಕತೆ ನಡೆಸಿದ್ದಾರೆ. ಅವರಿಗೆ ತೊಂದರೆ ಆಗದಂತೆ ತೆರವು ಮಾಡಲಾಗುವುದು' ಎಂದು ತಿಳಿಸಿದರು.

ಸೆಂಚುರಿ ವಿರುದ್ಧ ಕ್ರಮ: ರಾಜಕಾಲುವೆ ಒತ್ತುವರಿ ಮಾಡಿರುವ ಸೆಂಚುರಿ ರಿಯಾಲಿಟಿ ಕಂಪನಿ ವಿರುದ್ಧ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುವುದಾಗಿ ಬೊಮ್ಮಾಯಿ ಹೇಳಿದರು.



ವಿಧಾನ ಮಂಡಲದಲ್ಲಿ

ಬ್ರ್ಯಾಂಡ್ ಬೆಂಗಳೂರಿಗೆ ಆಟೊ, ಬಸ್, ಟ್ಯಾಕ್ಸಿ ಚಾಲಕರು, ಪೌರಕಾರ್ಮಿಕರು ಮತ್ತು ಜನಸಾಮಾನ್ಯರ ಕೊಡುಗೆಯೂ ಇದೆ. ಈ ಬ್ರ್ಯಾಂಡ್ ನಿರ್ಮಾಣ ಯಾವುದೇ ಒಬ್ಬ ವ್ಯಕ್ತಿಯಿಂದ ಆಗಿದ್ದಲ್ಲ

ಆರ್.ಅಶೋಕ, ಕಂದಾಯ ಸಚಿವ

'ಒತ್ತುವರಿಯಾಗಿದ್ದು ಇಷ್ಟು ವರ್ಷ ಗೊತ್ತಿರಲಿಲ್ಲವೇ?'

ಪ್ರಭಾವಿಗಳ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ?: ವಿರೋಧ ಪಕ್ಷಗಳ ಸದಸ್ಯರ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ 2626 ಜಾಗಗಳು ಒತ್ತುವರಿಯಾಗಿವೆ ಎಂದು ಗುರುತಿಸಲಾಗಿದೆ. ಇಷ್ಟು ವರ್ಷ ಈ ವಿಷಯ ಗೊತ್ತಿರಲಿಲ್ಲವೇ? 5–6 ವರ್ಷಗಳ ಹಿಂದೆಯೇ ಗುರುತಿಸಿದ್ದರೂ ತೆರವುಗೊಳಿಸಲು ಹಿಂದೇಟು ಹಾಕಿದ್ದು ಏಕೆ' ಎಂದು ವಿಧಾನ ಪರಿಷತ್ ಸದಸ್ಯ, ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಪ್ರಶ್ನಿಸಿದರು.

ಸೋಮವಾರ ವಿಧಾನ ಪರಿಷತ್‌ನಲ್ಲಿ ನಿಯಮ 68ರ ಅಡಿಯಲ್ಲಿ ಅತಿವೃಷ್ಟಿ ಕುರಿತು ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, 'ಮನೆಗಳನ್ನು ನಿರ್ಮಿಸಲು ಲೈಸನ್ಸ್ ನೀಡಿದ್ದು ಯಾರು? ಸರ್ಕಾರಿ ಜಾಗ, ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವ ಪ್ರಭಾವಿಗಳ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ. ಪಾಪಿ ಪರದೇಶಿಗಳ ಮನೆಗಳನ್ನು ಮಾತ್ರ ಒಡೆದು ಹಾಕಿದ್ದೀರಿ ಹೊರತು ಪ್ರಭಾವಿಗಳದ್ದಲ್ಲ' ಎಂದು ವಾಗ್ದಾಳಿ ನಡೆಸಿದರು.

'ನಿಯಮಗಳನ್ನು ಪಾಲಿಸದ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಅಧಿಕಾರಿಗಳಿಗೂ ನಾಚಿಕೆಯಾಗಬೇಕು. ರಾಜಕಾರಣ ಮಾಡುವುದಾದರೆ ರಾಜೀನಾಮೆ ನೀಡಿ ಎಂಎಲ್‌ಎಗಳಾಗಿ' ಎಂದು ಕಿಡಿಕಾರಿದರು.

'ಕೆರೆ ಮತ್ತು ರಾಜಕಾಲುವೆಗಳು ಒತ್ತುವರಿಯಾಗಿವೆ ಎಂದು ಸಿಎಜಿ ವರದಿಯಲ್ಲೂ ಉಲ್ಲೇಖವಾಗಿದೆ. ಬಾಗಮಾನೆ ಟೆಕ್ ಪಾರ್ಕ್, ಕೊಲಂಬಿಯಾ ಏಷ್ಯಾ ಆಸ್ಪತ್ರೆ, ದಿವ್ಯಾ ಸ್ಕೂಲ್, ನಲಪಾಡ್, ಗೋಪಾಲನ್ ಸೇರಿದಂತೆ ಹಲವು ಪ್ರಮುಖ ಕಂಪನಿಗಳೇ ಒತ್ತುವರಿ ಮಾಡಿಕೊಂಡಿವೆ' ಎಂದು ವಿವರಿಸಿದರು.

'ಬೆಂಗಳೂರು ನಗರದಲ್ಲಿ 1452ಕ್ಕೂ ಹೆಚ್ಚು ಕೆರೆಗಳಿದ್ದವು. ಇವುಗಳಲ್ಲಿ 35 ಟಿಎಂಸಿ ನೀರು ಸಂಗ್ರಹವಾಗುತ್ತಿತ್ತು. ಈ ಅಪಾರ ಪ್ರಮಾಣದ ನೀರಿನಿಂದ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಬಹುದಿತ್ತು. ಆದರೆ, ಈಗ 215 ಕೆರೆಗಳು ಮಾತ್ರ ಉಳಿದುಕೊಂಡಿದ್ದು, 2.5ಟಿಎಂಸಿ ನೀರಷ್ಟೆ ಸಂಗ್ರಹವಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ ಮಳೆ ನೀರು ಎಲ್ಲಿಗೆ ಹೋಗಬೇಕು' ಎಂದು ಪ್ರಶ್ನಿಸಿದರು.

ಜೆಡಿಎಸ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ ಮಾತನಾಡಿ, 'ರಾಜ್ಯದಲ್ಲಿ ಸಂಭವಿಸಿರುವ ಪ್ರವಾಹ ಪರಿಸ್ಥಿತಿಯನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು. ಇದರಿಂದ ಮಾತ್ರ ರಾಜ್ಯಕ್ಕೆ ಹೆಚ್ಚಿನ ನೆರವು ದೊರೆಯಲಿದೆ' ಎಂದರು.

'ಕೆಲಸ ಮಾಡದ ಬಿಬಿಎಂಪಿ'

'ಬಿಬಿಎಂಪಿ ಕೆಲಸ ಮಾಡುತ್ತಿಲ್ಲ. ಹೊರವಲಯದ ಕಂಪನಿಗಳು ಇರುವ ಪ್ರದೇಶಕ್ಕೆ ಪ್ರತ್ಯೇಕ ಪಾಲಿಕೆ ಸ್ಥಾಪಿಸಿ ಎಂದು ಮನವಿ ಮಾಡಿರುವುದೇ ಇದಕ್ಕೆ ಸಾಕ್ಷಿ. ಬೆಂಗಳೂರು ನಗರದಲ್ಲಿನ ಗುಂಡಿಗಳಿರುವ ರಸ್ತೆಗಳು ದುರಸ್ತಿಯಾಗಬೇಕಾದರೆ ದೇಶದ ಪ್ರಧಾನಿಯೇ ಬರಬೇಕೇ?' ಎಂದು ಕಾಂಗ್ರೆಸ್ ಸದಸ್ಯ ನಾಗರಾಜ್ ಅವರು, ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಟ್ರ್ಯಾಕ್ಟರ್, ಬೋಟ್‌ಗಳಲ್ಲಿ ಜನ ಸಂಚರಿಸಬೇಕಾದ ಪರಿಸ್ಥಿತಿ ತಲುಪಿದೆ. ಹೀಗಾದರೆ ಬೆಂಗಳೂರು ಬ್ರ್ಯಾಂಡ್ ಪರಿಸ್ಥಿತಿ ಏನು? ಬಿಬಿಎಂಪಿ ತೆರಿಗೆ ಸಂಗ್ರಹಕ್ಕೆ ಮಾತ್ರ ಸೀಮಿತವಾಗಬಾರದು' ಎಂದರು.

'ಪರ್ಯಾಯ ತಂತ್ರಜ್ಞಾನ ಅಳವಡಿಸಿ'

'ದೊಡ್ಡ ಕಂಪನಿಗಳು ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸಿಲ್ಲ. ಕಟ್ಟಡಗಳ ಯೋಜನೆಗೆ ಅನುಮೋದನೆ ನೀಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿಯ ಎಚ್.ಎಸ್. ಗೋಪಿನಾಥ್ ಒತ್ತಾಯಿಸಿದರು.

'ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗದಂತೆ ಪರ್ಯಾಯ ಯೋಜನೆಗಳ ಬಗ್ಗೆ ಯೋಚಿಸಬೇಕು. ಎಚ್‌ಎಸ್‌ಆರ್ ಬಡಾವಣೆಯಲ್ಲಿ ರಸ್ತೆ ಕೆಳಗೆ ಕಾಲುವೆ ಮಾಡುವ ಮೂಲಕ ಸರಾಗವಾಗಿ ನೀರು ಹರಿಯುವ ವ್ಯವಸ್ಥೆ ಮಾಡಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಸಹ ಈ ಯೋಜನೆಗೆ ಬಳಸಿಕೊಳ್ಳಬೇಕು' ಎಂದು ವಿವರಿಸಿದರು.

ಡಿಸೆಂಬರ್ ಅಂತ್ಯದೊಳಗೆ 'ನಮ್ಮ ಕ್ಲಿನಿಕ್'

ಬೆಂಗಳೂರು: 'ಡಿಸೆಂಬರ್ ಅಂತ್ಯದೊಳಗೆ ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲಿ 438 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಸಿ.ಎನ್.ಮಂಜೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 'ಬೆಂಗಳೂರಿನಲ್ಲಿ 243, ಇತರ ಜಿಲ್ಲೆಗಳಲ್ಲಿ 195 'ನಮ್ಮ ಕ್ಲಿನಿಕ್'ಗಳನ್ನು ಒಟ್ಟು ₹ 155.77 ಕೋಟಿ ವೆಚ್ಚದಲ್ಲಿ ಆರಂಭಿಸಲಾಗುವುದು' ಎಂದರು.

'ಗ್ರಾಮೀಣ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. 107 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳ ಕೊರತೆ ಇದ್ದು, ಶೀಘ್ರವೇ ಸ್ಥಾಪಿಸಲಾಗುವುದು. ನಗರ ಪ್ರದೇಶದ ಕೊಳೆಗೇರಿಗಳು ಹಾಗೂ ದುರ್ಬಲ ವರ್ಗದವರು ವಾಸಿಸುವ ಸ್ಥಳಗಳಲ್ಲಿ ಪ್ರಾಥಮಿಕ ಚಿಕಿತ್ಸೆಗೆ ಸೌಲಭ್ಯ ಒದಗಿಸಲು 'ನಮ್ಮ ಕ್ಲಿನಿಕ್' ಆರಂಭಿಸಲಾಗುವುದು. ಈ ಕ್ಲಿನಿಕ್‌ಗಳಲ್ಲಿ 12 ಸೇವೆಗಳನ್ನು ಒದಗಿಸಲಾಗುತ್ತದೆ' ಎಂದರು.

ಕಾಂಗ್ರೆಸ್ಸಿನ ಅಬ್ದುಲ್ ಜಬ್ಬಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 'ಚಿಕಿತ್ಸಾ ವ್ಯವಸ್ಥೆಗೆ ಸಂಬಂಧಿತ ದೂರು ಇತ್ಯರ್ಥಪಡಿಸಲು ಹೊಸ ವ್ಯವಸ್ಥೆ ರೂಪಿಸಲಾಗಿದೆ. ಈವರೆಗೆ 895 ದೂರುಗಳ ಪೈಕಿ 686 ದೂರು ಇತ್ಯರ್ಥಪಡಿಸಲಾಗಿದೆ' ಎಂದರು.

'ಪ್ಲಾಸ್ಟಿಕ್ ನಿಷೇಧ: ಕಟ್ಟುನಿಟ್ಟಾಗಿ ಜಾರಿ'

ಬೆಂಗಳೂರು: 'ಪ್ಲಾಸ್ಟಿಕ್ ನಿಷೇಧವನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ' ಎಂದು ಪರಿಸರ ಸಚಿವ ಆನಂದ್ ಸಿಂಗ್ ಪರವಾಗಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಪಿ.ಎಂ.ಮುನಿರಾಜು ಗೌಡ ಮತ್ತು ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್ ಪ್ರಶ್ನೆಗೆ ಉತ್ತರಿಸಿದ ಅವರು 'ರಾಜ್ಯದಲ್ಲಿ ನಿತ್ಯ 830.36 ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಬೆಂಗಳೂರಿನಲ್ಲಿ ಮಾತ್ರ 317.42 ಟನ್ ಉತ್ಪಾದನೆಯಾಗುತ್ತಿದೆ' ಎಂದು ಹೇಳಿದರು.

'ಏಕಬಳಕೆ ಪ್ಲಾಸ್ಟಿಕ್ ವಸ್ತುಗಳ ಬಳಕೆ, ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಣೆ, ಮಾರಾಟ ಮತ್ತು ವಿತರಣೆಯನ್ನು ರಾಜ್ಯದಾದ್ಯಂತ ಈಗಾಗಲೇ ನಿಷೇಧಿಸಲಾಗಿದೆ. 100 ಮೈಕ್ರಾನ್‌ಗಿಂತಲೂ ಕಡಿಮೆ ದಪ್ಪದ ಪ್ಲಾಸ್ಟಿಕ್ ಬಳಸುವವರ ಮೇಲೆ ಕಠಿಣ ಕ್ರಮ ಜರುಗಿಸಲಾಗುತ್ತಿದೆ. ಈವರೆಗೂ 9 ಸಾವಿರ ದಾಳಿಗಳು ನಡೆದಿದೆ. ಹಂತ ಹಂತವಾಗಿ ದಂಡದ ಪ್ರಮಾಣ ಹೆಚ್ಚಿಸಲಾಗುತ್ತಿದ್ದು, ₹ 4.33 ಕೋಟಿ ದಂಡ ವಸೂಲಿ ಮಾಡಲಾಗಿದೆ' ಎಂದರು.

ರಾಜ್ಯ ಸರ್ಕಾರದಿಂದ ಇಂಗ್ಲಿಷ್‌ನಲ್ಲಿ ಗುರುತಿನ ಚೀಟಿ ಕೋರಿದ ಕಸಾಪ ಅಧ್ಯಕ್ಷ ಮಹೇಶ ಜೋಶಿ

'ರಾಜತಾಂತ್ರಿಕ' ಪಾಸ್‌ಪೋರ್ಟ್‌ಗೆ ಮನವಿ!

• ರಾಜೇಶ್ ರೈ ಚಟ್ಲ



ಮಹೇಶ ಜೋಶಿ

ಬೆಂಗಳೂರು: ರಾಜ್ಯ ಸಚಿವ ದರ್ಜೆಗೆ ಸಮನಾದ ಸ್ಥಾನಮಾನ ನೀಡಿದ ಬೆನ್ನಲ್ಲೆ, ಇಂಗ್ಲಿಷ್ ಭಾಷೆಯಲ್ಲಿ 'ಗುರುತಿನ ಚೀಟಿ' ಮತ್ತು ಡಿಪ್ಲೊಮ್ಯಾಟಿಕ್ (ರಾಜತಾಂತ್ರಿಕ) ಪಾಸ್‌ಪೋರ್ಟ್ ನೀಡುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಅವರಿಗೆ ಈ ಎರಡೂ ಮನವಿಗಳನ್ನು ಜೋಶಿ ಸಲ್ಲಿಸಿದ್ದಾರೆ. ಅವರು ಈ ಮನವಿಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಟಿಪ್ಪಣಿ ಸಹಿತ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ರವಾನಿಸಿದ್ದು, ಇದೀಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅನುಮೋದನೆಗೆ ಮಂಡಿಸಲಾಗಿದೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

'ಕನ್ನಡ ನಾಡು– ನುಡಿಗೆ 108 ವರ್ಷಗಳಿಂದ ಅನುಪಮ ಸೇವೆ ಸಲ್ಲಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ ಎಲ್ಲ ಕನ್ನಡಿಗರ ಏಕಮಾತ್ರ ಸಂಸ್ಥೆ. ಇಂಥ ಘನ ಸಂಸ್ಥೆಯ ಅಧ್ಯಕ್ಷನಾದ ನನಗೆ ಸರ್ಕಾರ ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಿದೆ. ಕನ್ನಡ ಸಾಹಿತ್ಯ ಪರಿಷತ್ ಹಾಗೂ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ಪರಿಷತ್ತಿನ ಅಧ್ಯಕ್ಷರಾದ ನನಗೆ ಕನ್ನಡಪರ ಚಟುವಟಿಕೆಗಾಗಿ ಬೇರೆ ಬೇರೆ ರಾಜ್ಯ, ವಿದೇಶಗಳಿಗೆ ಹೋಗುವ ಸಂದರ್ಭಗಳಲ್ಲಿ ವೀಸಾ ಮತ್ತಿತರ ದಾಖಲೆಗಳಿಗಾಗಿ ಗುರುತಿನ ಚೀಟಿ ಅವಶ್ಯವಾಗಿದೆ. ಹೀಗಾಗಿ, 2026ರ ನ. 26ರವರೆಗೆ ಮಾನ್ಯತೆ ಕಾರ್ಡ್ ಒದಗಿಸಬೇಕು' ಎಂದು ಮನವಿಯಲ್ಲಿ ಕೋರಿರುವ ಜೋಶಿ, ಇಂಗ್ಲಿಷ್‌ನಲ್ಲಿ ಗುರುತಿನ ಚೀಟಿ ಹೇಗಿರಬೇಕೆಂದು ನಮೂನೆಯನ್ನು ಲಗತ್ತಿಸಿದ್ದಾರೆ.

ಮತ್ತೊಂದು ಮನವಿಯಲ್ಲಿ ಜೋಶಿ, 'ಬಹರೇನ್ ಕನ್ನಡ ಸಂಘದ ನೂತನ ಕನ್ನಡ ಭವನದ ಉದ್ಘಾಟನಾ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸಲು, ಅಧಿಕೃತವಾಗಿ ಪ್ರಯಾಣ ಮಾಡಲು 'ರಾಜತಾಂತ್ರಿಕ ಪಾಸ್‌ಪೋರ್ಟ್'ನ ಸೌಲಭ್ಯ ಇರುತ್ತದೆ. ಈ ಪಾಸ್‌ಪೋರ್ಟ್ ಪಡೆಯಲು ಸಲ್ಲಿಸಲಾಗುವ ದಾಖಲೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಸಹಿ ಮಾಡುವಂತೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಮನವಿಯಲ್ಲಿ ಕೋರಿದ್ದಾರೆ.

'ಜೋಶಿ ಅವರ ಎರಡೂ ಮನವಿಗಳನ್ನು ಪರಿಗಣಿಸಲು ಕಾನೂನಿನಲ್ಲಿ ಅವಕಾಶ ಇಲ್ಲ. ಸರ್ಕಾರದ ನೌಕರರಿಗೆ ಮಾತ್ರ ಗುರುತಿನ ಚೀಟಿ ನೀಡಲಾಗುತ್ತದೆ. ಅಲ್ಲದೆ, ರಾಜತಾಂತ್ರಿಕ ಪಾಸ್‌ಪೋರ್ಟ್ ಸೌಲಭ್ಯ ಪಡೆಯಲು ಪ್ರತ್ಯೇಕ ಮಾನದಂಡಗಳಿವೆ' ಎಂದು ಡಿಪಿಎಆರ್ ಕಾರ್ಯಕಾರಿ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಏನಿದು 'ರಾಜತಾಂತ್ರಿಕ ಪಾಸ್‌ಪೋರ್ಟ್'

ದೇಶವನ್ನು ವಿದೇಶದಲ್ಲಿ ಪ್ರತಿನಿಧಿಸುವ ಅಥವಾ ಸರ್ಕಾರಿ ಕೆಲಸಕ್ಕಾಗಿ ವಿದೇಶ ಪ್ರವಾಸ ಮಾಡುವ ಉನ್ನತ ಶ್ರೇಣಿಯ ಸರ್ಕಾರಿ ಅಧಿಕಾರಿಗಳಿಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ನೀಡಲಾಗುತ್ತದೆ. ವ್ಯಾಪಾರ ಉದ್ದೇಶಗಳಿಗಾಗಿ ಅಥವಾ ರಜೆಗಾಗಿ ಪ್ರಯಾಣಿಸುವ ಸ್ಥಳೀಯ ನಾಗರಿಕರು ಈ ಪಾಸ್‌ಪೋರ್ಟ್ ಪಡೆಯಲು ಅರ್ಹರಲ್ಲ. ಭಾರತೀಯ ವಿದೇಶಾಂಗ ಸೇವಾ ವಿಭಾಗದಲ್ಲಿ ಕೆಲಸ ಮಾಡುವ ಭಾರತೀಯರು ವಿದೇಶಿ ಪ್ರವಾಸಗಳಿಗೆ ಪಾಸ್‌ಪೋರ್ಟ್ ಪಡೆಯಲು ಅರ್ಹರು. ಅಲ್ಲದೆ, ಭಾರತೀಯ ವಿದೇಶಾಂಗ ಸೇವೆ ಮತ್ತು ವಿದೇಶಾಂಗ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಕುಟುಂಬ ಸದಸ್ಯರು ಶಿಕ್ಷಣ, ರಜೆ ಮತ್ತು ವ್ಯಾಪಾರ ಉದ್ದೇಶಗಳಿಗಾಗಿ ವಿದೇಶಕ್ಕೆ ಪ್ರಯಾಣಿಸಲು ಕೂಡಾ ಈ ಪಾಸ್‌ಪೋರ್ಟ್ ಪಡೆಯಬಹುದು.

ಸಂಪುಟ ಸ್ಥಾನಮಾನ ಕೊಡಿ– ಪ್ರಧಾನ ಗುರುದತ್ತ ಮನವಿ

'ಮಹೇಶ ಜೋಶಿ ಅವರಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಿ ಹೊರಡಿಸಿರುವ ಸರ್ಕಾರಿ ಆದೇಶವನ್ನು ಪರಿಷ್ಕರಿಸಿ 'ಕನ್ನಡ ರಾಯಭಾರಿ' ಶೀರ್ಷಿಕೆಯೊಂದಿಗೆ ಸಂಪುಟ ಸಚಿವ ದರ್ಜೆಯ ಸ್ಥಾನಮಾನ ಮತ್ತು ಸವಲತ್ತುಗಳನ್ನು ಶೀಘ್ರವಾಗಿ ನೀಡಬೇಕು' ಎಂದು ಕುವೆಂಪು ಭಾಷಾ ಭಾರತಿಯ ಮಾಜಿ ಅಧ್ಯಕ್ಷ ಪ್ರಧಾನ ಗುರುದತ್ತ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಮೂರು ಪುಟಗಳ ಪತ್ರದಲ್ಲಿ ಜೋಶಿಯವರ ಸಾಧನೆಗಳನ್ನು ವಿವರಿಸಿರುವ ಅವರು, 'ಎಚ್.ಡಿ.ದೇವೇಗೌಡರು ಹಾಗೂ ನಿಮ್ಮ ಸಚಿವ ಸಂಪುಟದ ಕೆಲವು ಸಚಿವರು ಕೂಡಾ ಸಂಪುಟ ಸಚಿವ ಸ್ಥಾನಮಾನ ನೀಡುವಂತೆ ಶಿಫಾರಸು ಮಾಡಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ' ಎಂದೂ ಕೋರಿದ್ದಾರೆ.



ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರೊಂದಿಗೆ ಮಾತುಕತೆಯಲ್ಲಿ ನಿರತರಾಗಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ

ದೇವೇಗೌಡರ ಆರೋಗ್ಯ ವಿಚಾರಿಸಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಮನೆಗೆ ಸೋಮವಾರ ಭೇಟಿ ನೀಡಿದ್ದು, ಆರೋಗ್ಯ ವಿಚಾರಿಸಿದರು.

ವಿಧಾನಸಭೆಯ ಕಲಾಪ ಅಂತ್ಯಗೊಳ್ಳುತ್ತಿದ್ದಂತೆ ಪದ್ಮನಾಭನಗರದಲ್ಲಿರುವ ದೇವೇಗೌಡರ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ ನೀಡಿದ್ದರು. ಶಾಸಕರಾದ ಆರ್.ವಿ. ದೇಶಪಾಂಡೆ, ಜಮೀರ್ ಅಹಮ್ಮದ್ ಖಾನ್, ಬೈರತಿ ಸುರೇಶ್ ಜತೆಗಿದ್ದರು.

ಗೌಡರ ಭೇಟಿ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಈ ಭೇಟಿಯಲ್ಲಿ ರಾಜಕೀಯ ವಿಚಾರ ಏನೂ ಇಲ್ಲ. ದೇವೇಗೌಡರು ರಾಜ್ಯದ ಹಿರಿಯ ರಾಜಕಾರಣಿ. ಅವರ ಆರೋಗ್ಯ ವಿಚಾರಿಸುವುದಕ್ಕಾಗಿ ಭೇಟಿ ನೀಡಿದ್ದೆ' ಎಂದರು.

ಆರು ವರ್ಷಗಳ ಹಿಂದೆ ಸಿದ್ದರಾಮಯ್ಯ ಅವರು ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿದ್ದರು. ಆ ಬಳಿಕ ಇದು ಮೊದಲನೇ ಭೇಟಿ. ಕಂದಾಯ ಸಚಿವ ಆರ್.ಅಶೋಕ ಅವರು ದೇವೇಗೌಡರ ಮನೆಗೆ ಭಾನುವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದರು.

39 ವರ್ಷದ ಆಸ್ತಿ ದಾಖಲೆ ಕೇಳಿದ ಇ.ಡಿ.

ಹಣ ಅಕ್ರಮ ವರ್ಗಾವಣೆಯ 2ನೇ ಪ್ರಕರಣ • ಡಿ ಕೆ. ಶಿವಕುಮಾರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆಯ 2ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸುಮಾರು 6 ಗಂಟೆಗಳ ಕಾಲ ಸೋಮವಾರ ವಿಚಾರಣೆ ನಡೆಸಿದರು. ಕಳೆದ 39 ವರ್ಷಗಳ ಆಸ್ತಿ ದಾಖಲೆಗಳು ಮತ್ತು ಬ್ಯಾಂಕ್ ವ್ಯವಹಾರಗಳ ವಿವರವನ್ನು ಇ.ಡಿ. ಅಧಿಕಾರಿಗಳು ಕೇಳಿದ್ದಾರೆ.

ಆದಾಯ ತೆರಿಗೆ (ಐ.ಟಿ) ಅಧಿಕಾರಿಗಳು ಶಿವಕುಮಾರ್ ಮತ್ತು ಅವರ ನಿಕಟವರ್ತಿಗಳಿಗೆ ಸೇರಿದ 87 ಸ್ಥಳಗಳ ಮೇಲೆ 2017ರ ಆಗಸ್ಟ್ 2ರಂದು ದಾಳಿ ಮಾಡಿ, ಶೋಧ ನಡೆಸಿದ್ದರು.

₹ 374 ಕೋಟಿ ಮೌಲ್ಯದ ಅಘೋಷಿತ ಆಸ್ತಿ ಹೊಂದಿರುವ ಆರೋಪದಡಿ ಆರ್ಥಿಕ ಅಪರಾಧಗಳ ನ್ಯಾಯಾಲಯದಲ್ಲಿ ಶಿವಕುಮಾರ್ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಮೂರು ಪ್ರಕರಣ ದಾಖಲಿಸಲಾಗಿತ್ತು. ಐ.ಟಿ ವರದಿ ಆಧರಿಸಿ ಪ್ರತ್ಯೇಕ ಪ್ರಕರಣ ದಾಖಲಿಸಿದ್ದ ಜಾರಿ ನಿರ್ದೇಶನಾಲಯ, 2019ರ ಸೆಪ್ಟೆಂಬರ್ 3ರಂದು ಅವರನ್ನು ಬಂಧಿಸಿತ್ತು.

ಅಕ್ರಮ ಆಸ್ತಿ ಹೊಂದಿದ ಆರೋಪದಡಿ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆ ನಡೆಸುವಂತೆ ಐ.ಟಿ, ಇ.ಡಿ ಅಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ರಾಜ್ಯ ಸರ್ಕಾರ 2019ರ ಅಕ್ಟೋಬರ್‌ನಲ್ಲಿ ಸಿಬಿಐ ತನಿಖೆಗೆ ಸಮ್ಮತಿ ನೀಡಿತ್ತು.

ಶಿವಕುಮಾರ್ 2013ರ ಏ.1ರಿಂದ 2018ರ ಏಪ್ರಿಲ್ 30ರ ಅವಧಿಯಲ್ಲಿ ಅಕ್ರಮ ಆಸ್ತಿ ಸಂಪಾದಿಸಿರುವ ಆರೋಪದ ಮೇಲೆ 2020ರ ಮಾರ್ಚ್‌ನಲ್ಲಿ ಸಿಬಿಐ ಪ್ರಾಥಮಿಕ ವಿಚಾರಣೆ ಆರಂಭಿಸಿತ್ತು. ₹ 74.93 ಕೋಟಿ ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿತ್ತು.

ತನಿಖೆಯ ಅವಧಿಗೂ ಮೊದಲು ಶಿವಕುಮಾರ್ ಕುಟುಂಬ ₹ 33.92 ಕೋಟಿ ಆಸ್ತಿ ಹೊಂದಿತ್ತು. ಐದು ವರ್ಷಗಳ ಅವಧಿಯಲ್ಲಿ ಅವರ ಕುಟುಂಬ ₹ 166.79 ಕೋಟಿಯನ್ನು ವರಮಾನ ಮತ್ತು ಇತರ ರೂಪದಲ್ಲಿ ಪಡೆದಿದೆ. ಇದೇ ಅವಧಿಯಲ್ಲಿ ₹ 113.12 ಕೋಟಿ ವೆಚ್ಚ ಮಾಡಲಾಗಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿತ್ತು. ಬಳಿಕ ಸಿಬಿಐ ಹಲವೆಡೆ ದಾಳಿ ಮಾಡಿ, ಶೋಧ ನಡೆಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಅಧಿಕಾರಿಗಳು ಶಿವಕುಮಾರ್ ಅವರಿಗೆ ಕಳೆದ ವಾರ ಸಮನ್ಸ್ ನೀಡಿದ್ದರು. ಸೋಮವಾರ ಮಧ್ಯಾಹ್ನ 12 ಗಂಟೆಯ ವೇಳೆಗೆ ಶಿವಕುಮಾರ್ ಅವರು ಜಾರಿನಿರ್ದೇಶನಾಲಯ ಕಚೇರಿಗೆ ಬಂದರು.

'ಯಾವ ವಿಷಯಕ್ಕೆ ಸಮನ್ಸ್ ನೀಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ' ಎಂದು ಶಿವಕುಮಾರ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಬಳಿಕ ಸುಮಾರು 2 ಗಂಟೆಗಳ ಕಾಲ ಅಧಿಕಾರಿಗಳು ವಿಚಾರಣೆ ನಡೆಸಿದರು. ಭೋಜನ ವಿರಾಮದ ಬಳಿಕ ಸಂಜೆಯವರೆಗೆ ವಿಚಾರಣೆ ಮುಂದುವರಿಸಿದರು.

ಅಕ್ರಮ ಆಸ್ತಿ ಹೊಂದಿರುವುದು, ಕೆಲವು ವ್ಯಕ್ತಿಗಳು ಮತ್ತು ಕಂಪನಿಗಳ ಜತೆ ಸಂಶಯಾಸ್ಪದ ರೀತಿಯಲ್ಲಿ ಹಣದ ವಹಿವಾಟು ನಡೆಸಿರುವುದು ಸೇರಿದಂತೆ ಹಲವು ವಿಷಯಗಳ ಕುರಿತು ಅಧಿಕಾರಿಗಳು ಪ್ರಶ್ನೆಗಳನ್ನು ಕೇಳಿದರು ಎಂದು ಮೂಲಗಳು ತಿಳಿಸಿವೆ.

'ರಾಜಕೀಯ ಸೇಡಿಗೆ ಹೆದರಲ್ಲ'

'ನನಗೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಸಂಪೂರ್ಣ ನಂಬಿಕೆ ಇದೆ. ಒಂದಲ್ಲ ಒಂದು ದಿನ ನಾನು ನಿರಪರಾಧಿ ಎಂದು ಸಾಬೀತಾಗುತ್ತದೆ. ರಾಜಕೀಯ ಸೇಡು, ಕಿರುಕುಳಕ್ಕೆ ಹೆದರುವವನು ನಾನಲ್ಲ' ಎಂದು ಡಿ.ಕೆ. ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ವಿಚಾರಣೆ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆಸ್ತಿ, ಬ್ಯಾಂಕ್ ಖಾತೆಯ ದಾಖಲೆಗಳನ್ನು ನೀಡುವಂತೆ ಕೇಳಿದ್ದಾರೆ. 39 ವರ್ಷಗಳ ಆಸ್ತಿ ವಿವರದ ಬಗ್ಗೆ ಹೇಳಲು ಕಂಪ್ಯೂಟರ್ ಮಿದುಳು ನನ್ನದಲ್ಲ. ಲೆಕ್ಕಪರಿಶೋಧಕರು ಈ ಬಗ್ಗೆ ವಿವರ ನೀಡಲಿದ್ದಾರೆ. ಈ ದಾಖಲೆಗಳನ್ನು ನೀಡಲು ಕಾಲಾವಕಾಶ ಕೇಳಿದ್ದೇನೆ' ಎಂದರು.

ಆಹಾರ: ದೂರೇ ಲಂಚದ ಮೂಲ

ಒಂದನೇ ಪುಟದಿಂದ

ಅವರಿಂದ ಒಂದಷ್ಟು ಮಾಹಿತಿ ಪಡೆದ ನಂತರ ಆರೋಪ ಪ್ರಕರಣದ ಸ್ವರೂಪ, ಕೈಗೊಳ್ಳುವ ಕ್ರಮಗಳು, ಕಾನೂನು ಸಮಸ್ಯೆಗಳನ್ನು ಮನವರಿಕೆ ಮಾಡುತ್ತಾರೆ. ನಂತರ ನೇರವಾಗಿ ಹಣಕ್ಕೆ ಬೇಡಿಕೆ ಇಡುತ್ತಾರೆ. ನ್ಯಾಯಬೆಲೆ ಅಂಗಡಿಗಳ ಪರವಾನಗಿ ರದ್ದಾಗುವ ಭೀತಿಯಿಂದ ಮಾಲೀಕರು, ಅಮಾನತಾಗುವ ಹೆದರಿಕೆಯಿಂದ ಅಧಿಕಾರಿಗಳು, ಸಿಬ್ಬಂದಿ ಅವರು ಹೇಳಿದ ಖಾತೆಗೆ ಹಣ ಜಮೆ ಮಾಡುತ್ತಿದ್ದಾರೆ ಎಂಬ ಬಗ್ಗೆ ದೂರುಗಳು ಇಲಾಖೆಗೆ ಸಲ್ಲಿಕೆಯಾಗಿವೆ.

ಪಡಿತರ ಸೋರಿಕೆ ತಡೆಯಲು ಮಾಹಿತಿ ನೀಡುವ ಸಾರ್ವಜನಿಕರಿಗೆ ನಗದು ಬಹುಮಾನ ಯೋಜನೆ ಜಾರಿಗೆ ಬಂದ ನಂತರ ಸಹಾಯವಾಣಿಗೆ ಸಾಕಷ್ಟು ದೂರುಗಳು ಬರುತ್ತಿವೆ. ಅನರ್ಹ ಪಡಿತರ ಕಾರ್ಡ್ ಬಗ್ಗೆ ಮಾಹಿತಿ ನೀಡಿದರೆ ₹ 400, ಅಕ್ರಮ ಸಾಗಣೆ ಹಾಗೂ ಮಾರಾಟದ ಮಾಹಿತಿ ನೀಡಿದವರಿಗೆ ವಶಪಡಿಸಿಕೊಳ್ಳುವ ದಾಸ್ತಾನು ಮೌಲ್ಯದ ಶೇ 5ರಷ್ಟು ನಗದು ಬಹುಮಾನ ನೀಡಲಾಗುತ್ತಿದೆ. ಇದರಿಂದ ಉತ್ತೇಜಿತರಾದ ಸಾರ್ವಜನಿಕರು ಅಧಿಕ ಸಂಖ್ಯೆಯಲ್ಲಿ ಸಹಾಯವಾಣಿಗೆ ಕರೆ ಮಾಡುತ್ತಿದ್ದಾರೆ.

ರಾಜ್ಯದಲ್ಲಿ 1.26 ಕೋಟಿ ಕುಟುಂಬಗಳಿಗೆ ಪ್ರತಿ ತಿಂಗಳು ಗರಿಷ್ಠ 30 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಅಂತ್ಯೋದಯ ಯೋಜನೆ ಅಡಿ 7,69,570 ಕುಟುಂಬಗಳಿಗೆ ತಲಾ 35 ಕೆ.ಜಿ. ಅಕ್ಕಿ ಉಚಿತವಾಗಿ ನೀಡಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳೂ ಸೇರಿದಂತೆ 20 ಸಾವಿರ ಪಡಿತರ ವಿತರಣಾ ಕೇಂದ್ರಗಳಿವೆ.

ಅಕ್ರಮ ತಡೆಗೆ ಹಲವು ಕ್ರಮ: ಪಡಿತರ ಅಕ್ಕಿ ದುರ್ಬಳಕೆ, ಕಾಳಸಂತೆಯಲ್ಲಿ ಮಾರಾಟ, ಅಕ್ರಮ ಸಾಗಣೆ ತಡೆಗೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಸರ್ಕಾರ ಎಷ್ಟೇ ಕಠಿಣ ಕ್ರಮ ಕೈಗೊಂಡರೂ ದೂರುಗಳು ಕಡಿಮೆಯಾಗಿಲ್ಲ. ಅಕ್ರಮ ತಡೆಗೆ ಹಲವು ಹಂತಗಳಲ್ಲಿ ಕುಂದುಕೊರತೆ ನಿವಾರಣಾ ಸಮಿತಿಗಳಿದ್ದರೂ, ಅಕ್ರಮಗಳಿಗೆ ಕಡಿವಾಣ ಸಾಧ್ಯವಾಗಿಲ್ಲ ಎಂಬುದು ಗ್ರಾಹಕರ ಅಳಲು.

ಹಲೋ ನಾನು ಪಡಿತರ ಸಹಾಯವಾಣಿ...

ಸಹಾಯವಾಣಿ: ಹಾಗಲ್ಲ ಬಿಡಿ. ಅನುಭವಿಸಿ. ಫೋನ್ ಇಡ್ತೀನಿ.
ಮಾಲೀಕ: ಹಾಗೆ ಮಾಡಬೇಡಿ ಸಾರ್, ₹ 20 ಸಾವಿರ ತೆಗೆದುಕೊಳ್ಳಿ.
ಸಹಾಯವಾಣಿ: ಇನ್ನೈದು ಹಾಕಿ ಕೊಡಿ, ನಾವು ಮೇಲಿನವರಿಗೂ ನೋಡಿಕೊಳ್ಳಬೇಕು. ಬರೆದುಕೊಳ್ಳಿ ಫೋನ್‌ಪೇ ನಂಬರ್.
ಮಾಲೀಕ: ಆಯ್ತು ಸಾರ್, ಹಾಕುವೆ.
ಹೀಗೆ ಸಹಾಯವಾಣಿಯಿಂದ ಕರೆ ಮಾಡುವ ಸಿಬ್ಬಂದಿ, ತಮ್ಮ ಪತ್ನಿಯರು, ಸಂಬಂಧಿಗಳು, ಆಪ್ತ ಸ್ನೇಹಿತರ ಮೊಬೈಲ್ ನಂಬರ್ ನೀಡಿ, ಫೋನ್‌ಪೇ, ಗೂಪಲ್ ಪೇ, ಪೇಟಿಎಂ ಮೂಲಕ ಹಣ ಪಡೆಯುತ್ತಿದ್ದಾರೆ. ದಿನಕ್ಕೆ ನೂರಾರು ಕರೆಗಳು ಬಂದರೂ ದಾಖಲಾಗುವ ಪ್ರಕರಣಗಳ ಸಂಖ್ಯೆ ಅತ್ಯಂತ ಕಡಿಮೆ.

ವರ್ಷ	ಕರೆಗಳು	ದಾಖಲಾದ ದೂರು	ಬಾಕಿ
2016-17	1,05,918	87	00
2017-18	1,12,176	128	00
2018-19	47,716	44	00
2019-20	48642	62	00
2020-21	40051	414	3
2021-22	54,389	185	22
2022-23	21,385	81	61
ಒಟ್ಟು	4,30277	1,001	86

'ವಿದ್ಯುತ್ ನಿಗಮಗಳ ಸಾಲದ ಮೊತ್ತ ₹ 38,973 ಕೋಟಿ'

ಬೆಂಗಳೂರು: 'ಕೆಪಿಟಿಸಿಎಲ್ ಸೇರಿದಂತೆ ವಿವಿಧ ವಿದ್ಯುತ್ ಪ್ರಸರಣ ನಿಗಮಗಳು 2002ರಿಂದ ಈವರೆಗೂ ₹ 38,973 ಕೋಟಿ ಸಾಲ ಮಾಡಿದ್ದು, ಅದು 2040ರ ವೇಳೆಗೆ ತೀರುವುದಿದೆ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಅವರು, 'ಕೆಪಿಟಿಸಿಎಲ್ ₹ 9,590.99 ಕೋಟಿ, ಬೆಸ್ಕಾಂ ₹ 13,613.23 ಕೋಟಿ, ಚೆಸ್ಕಾಂ ₹ 3,536 ಕೋಟಿ, ಮೆಸ್ಕಾಂ ₹ 1,282 ಕೋಟಿ, ಹೆಸ್ಕಾಂ ₹ 7,480 ಕೋಟಿ, ಜೆಸ್ಕಾಂ ₹ 3,472 ಕೋಟಿ ಸಾಲ ಪಡೆದಿವೆ. ಅವುಗಳಿಗೆ ಬಡ್ಡಿ ಮತ್ತು ಅಸಲು ಪಾವತಿ ಪ್ರಕ್ರಿಯೆ ನಿರಂತರವಾಗಿ ಮುಂದುವರೆದಿದೆ. ವಿದ್ಯುತ್ ವಿತರಣಾ ವ್ಯವಸ್ಥೆಗಾಗಿ ಎಸ್ಕಾಂಗಳು ರಚನೆಯಾದ ಬಳಿಕ ಸಾಲ ಮಾಡಿಯೇ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗುತ್ತಿದೆ' ಎಂದರು.

ಸದನದಲ್ಲಿ ಕೇಳಿಸಿದ್ದು...

₹1700 ಕೋಟಿ ಮೊತ್ತದ ಕಾಮಗಾರಿ ಮಾಡದೆಯೇ ಬಿಲ್ ಮಾಡಿದ್ದಕ್ಕೆ ಸುಪ್ರೀಂ ಕೋರ್ಟ್‌ವರೆಗೂ ಹೋಗಿ ಪ್ರಕರಣ ದಾಖಲಿಸಿದ್ದೇನೆ.
ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಒತ್ತುವರಿ ತೆರವಿಗೆ ಸರ್ಕಾರ ₹3,400 ಕೋಟಿ ಖರ್ಚು ಮಾಡಿದ್ದರೂ ಪ್ರವಾಹ ಸೃಷ್ಟಿಯಾಗಿದೆ. ಹಾಗಿದ್ದರೆ ಈ ಹಣ ಎಲ್ಲಿಗೆ ಹೋಯಿತು?
ಎಸ್.ಎಲ್. ಭೋಜೇಗೌಡ, ಜೆಡಿಎಸ್ ಸದಸ್ಯ

ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಶೋ ನೀಡಲು ನಾಲ್ಕೈದು ಕಾಂಪೌಂಡ್‌ಗಳನ್ನು ಮಾತ್ರ ತೆರವುಗೊಳಿಸಲಾಗಿದೆ. ಪ್ರಭಾವಿಗಳಿಗೆ ಮಣೆ ಹಾಕುವುದನ್ನು ನಿಲ್ಲಿಸಿ.
ನಾಗರಾಜ್, ಕಾಂಗ್ರೆಸ್ ಸದಸ್ಯ

ಸಚಿವ ಆರ್. ಅಶೋಕ ಮಾಹಿತಿ • ಕೇಂದ್ರದಿಂದ ₹ 1,646.05 ಕೋಟಿ ನೆರವು ಕೋರಿಕೆ

ಅತಿವೃಷ್ಟಿ: ₹12,319 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸುರಿದ ಅತಿವೃಷ್ಟಿ ಮತ್ತು ಪ್ರವಾಹದಿಂದ ಜುಲೈ 12ರಿಂದ ಈವರೆಗೆ ₹ 12,319.30 ಕೋಟಿಯಷ್ಟು ನಷ್ಟ ಸಂಭವಿಸಿದೆ ಎಂದು ಕಂದಾಯ ಸಚಿವ ಆರ್. ಅಶೋಕ ಸೋಮವಾರ ವಿಧಾನಸಭೆಯಲ್ಲಿ ತಿಳಿಸಿದರು.


ಅತಿವೃಷ್ಟಿ ಮತ್ತು ಪ್ರವಾಹದ ಕುರಿತು ಸದನದಲ್ಲಿ ನಡೆದಿದ್ದ ಚರ್ಚೆಗೆ ಉತ್ತರಿಸಿದ ಅವರು, 'ಈವರೆಗೆ 134 ಮಂದಿ ಮೃತಪಟ್ಟಿದ್ದಾರೆ. ಬೆಳೆಹಾನಿ, ಜಾನುವಾರುಗಳ ಸಾವು, ಮನೆ ಕುಸಿತ ಸೇರಿ ₹ 7,381.45 ಕೋಟಿ ನಷ್ಟವಾಗಿದೆ. ರಸ್ತೆ, ಸೇತುವೆಗಳಿಗೆ ಆಗಿರುವ ಹಾನಿ, ಕೆರೆಗಳು ಒಡೆದಿರುವುದು, ಶಾಲೆ, ಅಂಗನವಾಡಿಗಳು, ಸರ್ಕಾರಿ ಕಚೇರಿಗಳ ಕಟ್ಟಡ ಕುಸಿತ ಸೇರಿದಂತೆ ಮೂಲಸೌಕರ್ಯಗಳಿಗೆ ₹ 4,662.84 ಕೋಟಿ ನಷ್ಟವಾಗಿದೆ' ಎಂದರು.

ಕೇಂದ್ರ ಸರ್ಕಾರದಿಂದ ₹ 1,646.05 ಕೋಟಿ ನೆರವು ಕೋರಲಾಗಿದೆ. ಮಳೆಯಿಂದ ತೊಂದರೆಗೊಳಗಾದ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ವಿತರಣೆ ಸೇರಿದಂತೆ ಪರಿಸ್ಥಿತಿ ನಿರ್ವಹಣೆಗೆ ಈವರೆಗೆ ₹ 645.14 ಕೋಟಿ ವೆಚ್ಚ ಮಾಡಲಾಗಿದೆ. ರಾಜ್ಯ ಸರ್ಕಾರ ಅತ್ಯಂತ ಯಶಸ್ವಿಯಾಗಿ ಪರಿಸ್ಥಿತಿ ನಿರ್ವಹಣೆ ಮಾಡಿದೆ ಎಂದು ಹೇಳಿದರು.

ರಾಜ್ಯದ ಎಲ್ಲ 227 ತಾಲ್ಲೂಕುಗಳಲ್ಲೂ ಈ ಬಾರಿ ವಾಡಿಕೆಗಿಂತ ಹೆಚ್ಚಿನ ಮಳೆ ಬಿದ್ದಿದೆ. ಕೆಲವು ಭಾಗಗಳಲ್ಲಿ 50 ವರ್ಷಗಳಲ್ಲೇ ಅತ್ಯಧಿಕ ಮಳೆಯಾಗಿದೆ. ಬಹುತೇಕ ಜಲಾಶಯಗಳು ಭರ್ತಿಯಾಗುವ ಹಂತ ತಲುಪಿವೆ. ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ದಾಖಲಾದಂತೆ ತಮಿಳುನಾಡಿಗೆ ಈ ಬಾರಿ 224 ಟಿಎಂಸಿ ಅಡಿ ನೀರನ್ನು ಬಿಡಲಾಗಿದೆ. ಇದು 1974ರಿಂದ ಈವರೆಗಿನ ದಾಖಲೆಯ ಪ್ರಮಾಣದ ಹರಿವು ಎಂದು ಅಂಕಿಅಂಶ ನೀಡಿದರು.

'ಅತ್ಯಂತ ಸಮರ್ಥವಾಗಿ ಪರಿಸ್ಥಿತಿ ನಿಭಾಯಿಸಿದ್ದೇವೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಗಿಂತ ಹೆಚ್ಚಿನ ಮೊತ್ತದ ಪರಿಹಾರ ನೀಡಲಾಗಿದೆ. ಬೆಳೆಹಾನಿ ಕುರಿತು ಸಮೀಕ್ಷೆ ಮುಂದುವರಿದಿದೆ. ಅತಿವೃಷ್ಟಿ ಮತ್ತು ಪ್ರವಾಹ ಪರಿಸ್ಥಿತಿ ಎದುರಿಸುವಲ್ಲಿ ಲೋಪವಿಲ್ಲದಂತೆ ಸರ್ಕಾರ ಕೆಲಸ ಮಾಡಿದೆ. ಯಾವುದೇ ನ್ಯೂನತೆಗಳಿದ್ದರೂ ಸರಿಪಡಿಸಿಕೊಳ್ಳಲಾಗುವುದು' ಎಂದು ಹೇಳಿದರು.

ಅಂತರ್ಜಲ: ನಾಲ್ಕು ಮೀಟರ್‌ನಷ್ಟು ಏರಿಕೆ



ಹೆಚ್ಚಿನ ಮಳೆ ಸುರಿದಿದ್ದರಿಂದಾಗಿ ಎಲ್ಲ ಜಿಲ್ಲೆಗಳಲ್ಲೂ ಅಂತರ್ಜಲದ ಪ್ರಮಾಣ ನಾಲ್ಕು ಮೀಟರ್‌ನಷ್ಟು ಏರಿಕೆಯಾಗಿದೆ ಎಂದು ಸಚಿವ ಅಶೋಕ ಹೇಳಿದರು. ಬಯಲುಸೀಮೆಯ ಜಿಲ್ಲೆಗಳಲ್ಲಿ ಈ ವರ್ಷ ಹೆಚ್ಚಿನ ಮಳೆಯಾಗಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಒಟ್ಟು 3,639 ಕೆರೆಗಳ ಪೈಕಿ 2,835 (ಶೇ 77) ಕೆರೆಗಳು ಭರ್ತಿಯಾಗಿವೆ ಎಂದರು.

ಮಳೆಹಾನಿ ವಿವರ	
ಕೃಷಿ ಬೆಳೆಹಾನಿ	8,91,187 ಹೆಕ್ಟೇರ್
ತೋಟಗಾರಿಕಾ ಬೆಳೆಹಾನಿ	1,03,254 ಹೆಕ್ಟೇರ್
ಬಹುವಾರ್ಷಿಕ ಬೆಳೆಹಾನಿ	12,014 ಹೆಕ್ಟೇರ್
ಮೆಕ್ಕಲು ಮತ್ತು ಕೃಷಿ ಜಮೀನು ಹಾನಿ	185 ಹೆಕ್ಟೇರ್
ರೇಷ್ಮೆ ಕೃಷಿ ಹಾನಿ	38 ಹೆಕ್ಟೇರ್
ಜಾನುವಾರುಗಳ ಸಾವು	1,289
ಮನೆ ಕುಸಿತ	45,465
ರಸ್ತೆಗಳ ಹಾನಿ	27,649 ಕಿ.ಮೀ.
ಸೇತುವೆ, ಕಾಲುವೆಗಳ ಹಾನಿ	2,325
ಸಣ್ಣ ನೀರಾವರಿ ಕೆರೆಗಳು	870
ಸಣ್ಣ ಕೆರೆ ಕಟ್ಟೆಗಳು	774
ಸರ್ಕಾರಿ ಕಟ್ಟಡಗಳು	14,347
ಕುಡಿಯು ನೀರು ಸರಬರಾಜು ಮತ್ತು ಶೌಚಾಲಯ	15
ಕುಡಿಯುವ ನೀರು ಸೌಲಭ್ಯ	160

ಸುದ್ದಿ 2 ನಿಮಿಷ

30 ತಾಲ್ಲೂಕುಗಳಲ್ಲಿ ಆಡಳಿತ ಸೌಧ ನಿರ್ಮಾಣಕ್ಕೆ ಒಪ್ಪಿಗೆ: ಅಶೋಕ

ಬೆಂಗಳೂರು: ರಾಜ್ಯದ 30 ತಾಲ್ಲೂಕುಗಳಲ್ಲಿ ಹೊಸದಾಗಿ ತಾಲ್ಲೂಕು ಆಡಳಿತ ಸೌಧ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಪ್ಪಿಗೆ ನೀಡಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.



ವಿಧಾನಸಭೆಯಲ್ಲಿ ಜೆಡಿಎಸ್‌ನ ನಾಗನಗೌಡ ಕಂದಕೂರ ಅವರ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, 'ತಾಲ್ಲೂಕುಗಳ ಸಂಖ್ಯೆ 177ರಿಂದ 227ಕ್ಕೆ ಏರಿಕೆಯಾಗಿದೆ. ಎಲ್ಲ ತಾಲ್ಲೂಕುಗಳಲ್ಲೂ ಒಂದೇ ವರ್ಷದಲ್ಲಿ ಆಡಳಿತ ಸೌಧ ನಿರ್ಮಾಣ ಕಷ್ಟ' ಎಂದರು.

'ಈ ಆರ್ಥಿಕ ವರ್ಷದಲ್ಲಿ 30 ತಾಲ್ಲೂಕುಗಳಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅನುಮತಿ ದೊರಕಿದೆ. ಆದ್ಯತೆಯ ಅನುಸಾರ ಮಂಜೂರು ಮಾಡಲಾಗುವುದು' ಎಂದರು.

ಗುರುಮಠಕಲ್ ತಾಲ್ಲೂಕಿಗೆ ಹೊಸ ಆಡಳಿತ ಸೌಧ ಮಂಜೂರು ಮಾಡುವಂತೆ ಶಾಸಕರು ಮನವಿ ಮಾಡಿದರು.

11,133 ಪೌರ ಕಾರ್ಮಿಕರ ಸೇವೆ ಕಾಯಂ

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ದೀರ್ಘಕಾಲದಿಂದ ಕಾರ್ಯ ನಿರ್ವಹಿಸುತ್ತಿರುವ 11,133 ಪೌರ ಕಾರ್ಮಿಕರ ಸೇವೆ ಕಾಯಂ ಮಾಡುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 3,673, ಇತರ ಮಹಾನಗರ ಪಾಲಿಕೆಗಳ 1,927 ಮತ್ತು ಉಳಿದ ನಗರ ಸ್ಥಳೀಯ ಸಂಸ್ಥೆಗಳ 5,533 ಪೌರ ಕಾರ್ಮಿಕರ ಸೇವೆ ಕಾಯಂ ಆಗಲಿದೆ.

ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ಈ ಎಲ್ಲರ ಸೇವೆಯನ್ನು ಕಾಯಂಗೊಳಿಸುವ ತೀರ್ಮಾನ ಕೈಗೊಳ್ಳಲಿದೆ. ಇವರಿಗೆ ₹ 17,000– ₹28,980 ವೇತನ ಶ್ರೇಣಿ ನಿಗದಿಪಡಿಸಲಾಗಿದೆ.

'ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪೌರ ಕಾರ್ಮಿಕರ ಸೇವೆ ಕಾಯಂ ಮಾಡಲಾಗಿದೆ. ಸೇವೆ ಕಾಯಂಗೆ ಆಗ್ರಹಿಸಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರು ಹಲವು ದಿನಗಳಿಂದ ಹೋರಾಟ ನಡೆಸುತ್ತಿದ್ದರು. ಅವರ ಹೋರಾಟಕ್ಕೆ ಸ್ಪಂದಿಸಿರುವ ಸರ್ಕಾರವು ಈ ನಿರ್ಧಾರ ಕೈಗೊಂಡಿದೆ' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಡಿಸೆಂಬರ್‌ನಿಂದ ಶಾಲೆಗಳಲ್ಲಿ ಭಗವದ್ಗೀತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಪಠ್ಯಕ್ರಮದಲ್ಲಿ ಡಿಸೆಂಬರ್‌ನಿಂದ ನೈತಿಕ ಶಿಕ್ಷಣ ಸೇರಿಸಲಾಗುತ್ತಿದ್ದು, ಅದರ ಭಾಗವಾಗಿ ಭಗವದ್ಗೀತೆಯನ್ನು ಸೇರ್ಪಡೆ ಮಾಡಲಾಗುತ್ತದೆ' ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಎಂ.ಕೆ.ಪ್ರಾಣೇಶ್ ಮತ್ತು ಎನ್. ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪ್ರಸ್ತುತ ಶಾಲಾ ಪಠ್ಯಪುಸ್ತಕದಲ್ಲಿ ಭಗವದ್ಗೀತೆಯನ್ನು ಪ್ರತ್ಯೇಕವಾಗಿ ಬೋಧಿಸುವ ವಿಚಾರ ಸರ್ಕಾರದ ಮುಂದೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಪ್ರಾಣೇಶ್, 'ಈ ಹಿಂದೆ ಇದೇ ಪ್ರಶ್ನೆ ಕೇಳಿದಾಗ ಭಗವದ್ಗೀತೆ ಬೋಧನೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಪಠ್ಯದಲ್ಲಿ ಭಗವದ್ಗೀತೆಯನ್ನು ಅಳವಡಿಸಲು ತಜ್ಞರ ಸಮಿತಿ ರಚಿಸುತ್ತೇವೆ. ಪಠ್ಯ ರೂಪಿಸಲು ಸಮಿತಿ ರಚಿಸುತ್ತೇವೆ ಎಂದಿದ್ದೀರಿ. ಆದರೆ, ಈಗ ಲಿಖಿತ ಉತ್ತರದಲ್ಲಿ ಆ ಪ್ರಸ್ತಾವ ಇಲ್ಲ ಎಂದು ಹೇಳಿದ್ದೀರಿ. ಭಗವದ್ಗೀತೆ ಬೋಧನೆಗೆ ಯಾರ ವಿರೋಧ ಇಲ್ಲ. ಆದರೂ, ಏಕೆ ಈ ರೀತಿಯ ಉತ್ತರ? ಭಗವದ್ಗೀತೆ ಅಳವಡಿಸಲು ಸರ್ಕಾರಕ್ಕೆ ಮುಜುಗರ ಇದೆಯೇ' ಎಂದು ಪ್ರಶ್ನಿಸಿದರು.

ಆಗ ಸ್ಪಷ್ಟನೆ ನೀಡಿದ ಸಚಿವರು, 'ಪ್ರಸ್ತುತ ಶಾಲಾ ಪಠ್ಯದಲ್ಲಿ ಭಗವದ್ಗೀತೆ ಬೋಧಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದಿದ್ದೇನೆ. ನೈತಿಕ ಶಿಕ್ಷಣದಲ್ಲಿ ಭಗವದ್ಗೀತೆ ಅಳವಡಿಸಲು ಸಮಿತಿ ರಚಿಸಿದ್ದೇವೆ. ಶಿಫಾರಸು ಆಧರಿಸಿ ಪಠ್ಯಕ್ರಮದಲ್ಲಿ ಭಗವದ್ಗೀತೆ ಸೇರಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.

'ಬಾಬಾಬುಡನ್ ಗಿರಿ ಕುರಿತು ಶಾಲಾ ಪಠ್ಯಕ್ರಮದಲ್ಲಿ ಪ್ರಸ್ತಾಪವಾಗಿದೆ. ಅದನ್ನು ಇನಾಂ ದತ್ತಾತ್ರೇಯ ಪೀಠ ಎಂದು ಪರಿಷ್ಕರಿಸಬೇಕು' ಎಂದು ಪ್ರಾಣೇಶ್ ಆಗ್ರಹಿಸಿದಾಗ, 'ಪಠ್ಯಕ್ರಮದಲ್ಲಿ ಕಂಡು ಬಂದಿದ್ದ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ತಪ್ಪುಗಳನ್ನು ಸರಿಪಡಿಸುತ್ತೇವೆ' ಎಂದು ಸಚಿವರು ಹೇಳಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಜಾನಪದ ವಿವಿ ವರ್ಗಾಯಿಸಿ'

ಬೆಂಗಳೂರು: 'ಹಾವೇರಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯವನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾಯಿಸಬೇಕು' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸಲಹೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರದ ವೇಳೆ, 'ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವನಾಗಿದ್ದಾಗ ಕರ್ನಾಟಕದ ಮಧ್ಯಭಾಗದಲ್ಲಿ ಜಾನಪದ ವಿಶ್ವವಿದ್ಯಾಲಯ ಇರಬೇಕೆಂದು ಹಾವೇರಿಯಲ್ಲಿ ಆರಂಭಿಸಿದ್ದೆ. ವಿಶ್ವವಿದ್ಯಾಲಯ ಆರಂಭವಾದರೆ ಉನ್ನತ ಶಿಕ್ಷಣ ಇಲಾಖೆಯಲ್ಲಿಯೇ ಇರಬೇಕು ಎನ್ನುವುದು ಕೆಲವರ ತಲೆಯಲ್ಲಿದೆ. ಹೀಗಾಗಿ, ಆದೇಶ ಕೊಡುವಾಗ ಉನ್ನತ ಶಿಕ್ಷಣ ಇಲಾಖೆಯಲ್ಲಿರಲಿ ಎಂದು ಸೇರಿಸಲಾಯಿತು. ಈಗ ಜಾನಪದ ವಿಶ್ವವಿದ್ಯಾಲಯ ಚಟುವಟಿಕೆ ಕುಂಠಿತಗೊಂಡಿದೆ' ಎಂದರು.

'ಜನಪದ ಕಲಾವಿದರು, ಕವಿಗಳು, ಸಾಹಿತಿಗಳು ಎಲ್ಲ ಕೆಳವರ್ಗದಿಂದ ಬಂದಿರುವವರು. ಕನ್ನಡ ಮತ್ತು ಸಂಸ್ಕೃತಿ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು ಚರ್ಚಿಸಿ, ಸಂಸ್ಕೃತಿ ಇಲಾಖೆಗೆ ಜಾನಪದ ವಿಶ್ವವಿದ್ಯಾಲಯವನ್ನು ವರ್ಗಾಯಿಸಬೇಕು. ಆಗ ಮಾತ್ರ ಅಲ್ಲಿ ಚಟುವಟಿಕೆ ನಡೆಯಲು ಸಾಧ್ಯ' ಎಂದರು.

'ಜಾಗ ಕೊಟ್ಟಿದ್ದೇವೆ, ಹಣ ಕೊಟ್ಟಿದ್ದೇವೆ, ಕಟ್ಟಡ ಕಟ್ಟಿದ್ದೇವೆ ಅಲ್ಲಿಗೆ ವ್ಯವಸ್ಥಿತವಾಗಿ ನಿಂತು ಹೋಗಿದೆ. ಅಲ್ಲಿಗೆ ಅರ್ಹ ಜನಪದ ತಜ್ಞರನ್ನು ನೇಮಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ನಾನು ಕೂಡ ಈ ವಿಶ್ವವಿದ್ಯಾಲಯಕ್ಕೆ ಹೋಗಿಬಂದಿದ್ದೇನೆ. ಆದ್ದರಿಂದ, ಈಗಿನ ಸಚಿವರು ಅಲ್ಲಿಗೆ ಹೋಗಿ ಪರಿಶೀಲಿಸಬೇಕು' ಎಂದೂ ಹೇಳಿದರು.



ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಘೋಷಣಾ ಫಲಕ ಹಿಡಿದು ಪ್ರತಿಭಟನೆ ನಡೆಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.42	12,317	13,222
ಹಾರಂಗಿ	2,859	2,857.84	1,663	1,350
ಕಬಿನಿ	2284.00	2,282.94	4,575	1,500
ಹೇಮಾವತಿ	2,922	2,921.97	5,965	4,900
ಲಿಂಗನಮಕ್ಕಿ	1,819	1,816	7,145	7,006
ಸೂಪಾ (ಮೀ)	564	553.85	5,107	883
ಮಾಣಿ	595	590	1,174	-
ತುಂಗಭದ್ರಾ	1,633	1,633	18,211	17,681
ಮಲಪ್ರಭಾ	2079.5	2,079.50	1,794	1,794
ಘಟಪ್ರಭಾ	2175	2,174.50	8,919	8,919
ಭದ್ರಾ	186	184	5,673	4,770
ಆಲಮಟ್ಟಿ (ಮೀ)	519.6	519.43	1,28,275	1,20,451
ನಾರಾಯಣಪುರ (ಮೀ)	492.25	491.37	1,10,000	84,680

* ನೆಲಮಟ್ಟದಿಂದ

ಭ್ರಷ್ಟಾಚಾರ: 'ಕೈ'–'ಕಮಲ' ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇ 40ರ ಲಂಚದ ಪ್ರಕರಣದ ಮೇಲಿನ ಚರ್ಚೆ ವಿಧಾನಸಭೆಯಲ್ಲಿ ಸೋಮವಾರ ವಿರೋಧ ಪಕ್ಷ ಕಾಂಗ್ರೆಸ್ ಮತ್ತು ಆಡಳಿತ ಪಕ್ಷ ಬಿಜೆಪಿ ಮಧ್ಯೆ ವಾಕ್ಸಮರಕ್ಕೆ ತಿರುಗಿದ್ದು, ಘೋಷಣಾ ಫಲಕ ಪ್ರದರ್ಶಿಸಿ ಆರೋಪ–ಪ್ರತ್ಯಾರೋಪಕ್ಕೆ ಆಸ್ಪದವಾಯಿತು.

ಮಳೆ ಮತ್ತು ಪ್ರವಾಹದ ಬಗ್ಗೆ ಕಂದಾಯ ಸಚಿವ ಆರ್.ಅಶೋಕ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸುದೀರ್ಘ ಉತ್ತರದ ಬಳಿಕ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ತಮ್ಮ ಯಾವುದೇ ಪ್ರಶ್ನೆಗಳಿಗೂ ಸರ್ಕಾರ ತೃಪ್ತಿಕರ ಉತ್ತರ ನೀಡಲಿಲ್ಲ ಎಂದು ತಕರಾರು ಎತ್ತಿದರು. ಕಾಂಗ್ರೆಸ್‌ನ ಇತರ ಸದಸ್ಯರೂ ಧ್ವನಿಗೂಡಿಸಿದರು.

ಆಗ ಕಾಂಗ್ರೆಸ್ ಸದಸ್ಯರು ಶೇ 40 ಕಮಿಷನ್ ಸರ್ಕಾರ ಮತ್ತು ಇತರ ಆರೋಪಗಳನ್ನು ಉಲ್ಲೇಖಿಸಿ ಬರೆದ ಫಲಕ ಪ್ರದರ್ಶಿಸಿ ಘೋಷಣೆ ಕೂಗುತ್ತಾ ಸಭಾಧ್ಯಕ್ಷರ ಪೀಠದ ಮುಂದೆ ಬಂದು ನಿಂತರು. ಪ್ರತಿಯಾಗಿ ಬಿಜೆಪಿ ಸದಸ್ಯರೂ ಕಾಂಗ್ರೆಸ್ ಅವಧಿಯಲ್ಲಿ ನಡೆಯಿತೆನ್ನಲಾದ ಹಗರಣಗಳ ಮಾಹಿತಿ ಒಳಗೊಂಡ ಫಲಕ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು.

ಹಲವು ಸಚಿವರೂ ಫಲಕ ಹಿಡಿದು ನಿಂತಿದ್ದರು. ಧಿಕ್ಕಾರ... ಶೇಮ್... ಇತ್ಯಾದಿ ಘೋಷಣೆಗಳು ತಾರಕಕ್ಕೇರಿತು. 'ಬಿಜೆಪಿ ಸರ್ಕಾರ ಭ್ರಷ್ಟ ಸರ್ಕಾರ. ರಾಜ್ಯದ ಜನತೆ ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ' ಎಂದು ಸಿದ್ದರಾಮಯ್ಯ ಏರಿದ ಧ್ವನಿಯಲ್ಲಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಕಾಂಗ್ರೆಸ್ ಪಕ್ಷ ವಿಚ್ಛಿದ್ರಕಾರಿ ವಿರೋಧ ಪಕ್ಷವಾಗಿದೆ' ಕಿಡಿಕಾರಿದರು.

'ನಿಮ್ಮದು ಶೇ 40 ಕಮಿಷನ್ ಸರ್ಕಾರ, ಅತ್ಯಂತ ಭ್ರಷ್ಟ ಆಡಳಿತ' ಎಂದು ಸಿದ್ದರಾಮಯ್ಯ ಹರಿಹಾಯ್ದರು. ತಿರುಗೇಟು ನೀಡಿದ ಬೊಮ್ಮಾಯಿ, 'ನಿಮ್ಮದು ಶೇ 100 ಕಮಿಷನ್ ಸರ್ಕಾರವಾಗಿತ್ತು. ಎಲ್ಲವನ್ನೂ ತನಿಖೆ ಮಾಡಿಸುತ್ತೇನೆ. ಇದು ರಾಜಕಾಲುವೆ ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರ ಸ್ಯಾಂಪಲ್ ಮಾತ್ರ' ಎಂದು ಕಡತ ಪ್ರದರ್ಶಿಸಿದರು.

ಸಚಿವರಾದ ಗೋವಿಂದ ಕಾರಜೋಳ, ಆರಗ ಜ್ಞಾನೇಂದ್ರ, ಆರ್. ಅಶೋಕ, ಸಿ.ಸಿ.ಪಾಟೀಲ, ವಿ.ಸುನಿಲ್‌ಕುಮಾರ್, ಬಿ.ಸಿ. ಪಾಟೀಲ, ಪ್ರಭು ಚವ್ಹಾಣ, ಮುರುಗೇಶ ನಿರಾಣಿ, ಎಸ್.ಟಿ.ಸೋಮಶೇಖರ್, ಮುನಿರತ್ನ ಅವರು ಫಲಕ ಹಿಡಿದು ನಿಂತರು.

ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, 'ಸದನದಲ್ಲಿ ಹೀಗೆ ಫಲಕ ಪ್ರದರ್ಶಿಸಬಾರದು' ಎಂದರು. ಗದ್ದಲದ ನಡುವೆ ಎರಡು ಮಸೂದೆಗಳು ಅವರು ಮಂಡಿಸಿ, ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಸೋಮಶೇಖರ್ ರಾಜೀನಾಮೆಗೆ ಎಚ್‌ಡಿಕೆ ಆಗ್ರಹ

ಬೆಂಗಳೂರು: ಬಿಡಿಎ ವಸತಿ ಯೋಜನೆ ಕಾಮಗಾರಿಯ ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದಡಿ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿರುವುದರಿಂದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ರಾಜೀನಾಮೆ ನೀಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೋಮವಾರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸೋಮಶೇಖರ್ ಅವರು ಬಿಡಿಎ ಅಧ್ಯಕ್ಷರಾಗಿದ್ದಾಗ ಗುತ್ತಿಗೆಯಲ್ಲಿ ಅಕ್ರಮ ಎಸಗಿರುವ ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಈಗ ಅವರು ಮಂತ್ರಿಯಾಗಿದ್ದಾರೆ. ಸಚಿವರಾಗಿದ್ದರೆ ಸತ್ಯ ಮರೆಮಾಚುವ ಅಪಾಯವಿದೆ. ಆದ್ದರಿಂದ ರಾಜೀನಾಮೆ ನೀಡುವುದು ಸೂಕ್ತ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯ ವಿಚಾರಣೆ ಕುರಿತ ಪ್ರಶ್ನೆಗೆ 'ನಾನು ಭ್ರಷ್ಟಾಚಾರ ಮಾಡಿಲ್ಲ ಎಂದು ಅವರು ಹೇಳಿದ್ದಾರೆ. ಇ.ಡಿ ಅಧಿಕಾರಿಗಳಿಗೆ ಉತ್ತರಿಸುವ ಸಾಮರ್ಥ್ಯ ಅವರಿಗೆ ಇದೆ' ಎಂದು ಹೇಳಿದರು.

ಎಎಪಿ ಪ್ರತಿಭಟನೆ

ಎಫ್‌ಐಆರ್‌ನಲ್ಲಿ ಆರೋಪಿ ಎಂದು ಹೆಸರಿಸಿರುವುದರಿಂದ ಸೋಮಶೇಖರ್ ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಸದಸ್ಯರು ನಗರದಲ್ಲಿ ಸೋಮವಾರ ಪ್ರತಿಭಟಿಸಿದರು.

ಸಂಕ್ಷಿಪ್ತ ಸುದ್ದಿ

ಆರೋಪಿಗಳ ₹ 46.22 ಕೋಟಿ ಆಸ್ತಿ ಜಪ್ತಿ ಮಾಡಿದ ಇ.ಡಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಶಿಕ್ಷಕರ ನೇಮಕಾತಿ ಹಗರಣದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಮಾಜಿ ಸಚಿವ ಪಾರ್ಥ ಚಟರ್ಜಿ ಮತ್ತು ಅವರ ಆಪ್ತೆ ಅರ್ಪಿತಾ ಮುಖರ್ಜಿ ಅವರಿಗೆ ಸೇರಿದ ₹ 46.22 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ತಿಳಿಸಿದೆ.

ಕೋಲ್ಕತ್ತದಲ್ಲಿರುವ ಭಾರಿ ಬೆಲೆಬಾಳುವ ಭೂಮಿ, ತೋಟದ ಮನೆ, ಫ್ಲಾಟ್ ಸೇರಿದಂತೆ ₹ 40.33 ಕೋಟಿ ಮೊತ್ತದ 40 ಸ್ಥಿರ ಆಸ್ತಿ ಹಾಗೂ 35 ಬ್ಯಾಂಕ್ ಖಾತೆಗಳಲ್ಲಿದ್ದ ₹ 7.89 ಕೋಟಿಯನ್ನು ಜಪ್ತಿ ಮಾಡಲಾಗಿದೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಪಂಜಾಬ್: ಇದೇ 22ಕ್ಕೆ ವಿಶ್ವಾಸಮತ

ಚಂಡೀಗಡ(ಪಿಟಿಐ): ಪಂಜಾಬ್ ಸರ್ಕಾರವನ್ನು ಉರುಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಎಎಪಿ ಆರೋಪಿಸಿದ ಬೆನ್ನಲ್ಲೇ, ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ವಿಶ್ವಾಸ ಮತ ಸಾಬೀತುಪಡಿಸಲು ಇದೇ 22ರಂದು ವಿಶೇಷ ವಿಧಾನಸಭಾ ಅಧಿವೇಶನ ಕರೆದಿದ್ದಾರೆ.

ಪಂಜಾಬಿನ ಆಡಳಿತಾರೂಢ ಎಎಪಿಯ ಶಾಸಕರಿಗೆ ತಲಾ ₹ 25 ಕೋಟಿಯ ಆಮಿಷವೊಡ್ಡಿ ತನ್ನತ್ತ ಸೆಳೆದುಕೊಳ್ಳಲು ಬಿಜೆಪಿ ಪ್ರಯತ್ನಿಸಿದೆ ಎಂದು ಎಎಪಿ ಆರೋಪಿಸಿತ್ತು.

ಲೋಕಪಾಲಕ್ಕೆ ಈ ವರ್ಷ 1,719 ದೂರು

ನವದೆಹಲಿ (ಪಿಟಿಐ): ಭ್ರಷ್ಟಾಚಾರಕ್ಕೆ ಸಂಬಂಧಿಸಿದ 1,719 ದೂರುಗಳು ಈ ವರ್ಷ ಇದುವರೆಗೆ ಲೋಕಪಾಲದಲ್ಲಿ ದಾಖಲಾಗಿದ್ದು, ಇವುಗಳಲ್ಲಿ 136 ಪ್ರಕರಣಗಳನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

2022–23ರ ಸಾಲಿನಲ್ಲಿ (2022 ಆಗಸ್ಟ್ 21ರ ವರೆಗೆ) ಒಟ್ಟು ದೂರುಗಳ ಪೈಕಿ 134 ದೂರುಗಳು ಮಾತ್ರ ನಿಗದಿತ ನಮೂನೆಯಲ್ಲಿ ಸಲ್ಲಿಕೆಯಾಗಿವೆ. ಉಳಿದ 1,585 ದೂರುಗಳು ನಿಗದಿತ ನಮೂನೆಯಲ್ಲಿ ಸಲ್ಲಿಕೆಯಾಗಿಲ್ಲ ಎಂದು ಆರ್‌ಟಿಐ ಅಡಿ ಕಚೇರಿ ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್‌ನಲ್ಲಿ ಬಿಎಸ್‌ವೈ ಪರ ವಕೀಲರ ವಾದ

ಕಾನೂನು ಮರೆತು ಅನುಮತಿ

ಪ್ರಜಾವಾಣಿ ವಾರ್ತೆ



ನವದೆಹಲಿ: ತಮ್ಮ ವಿರುದ್ಧದ ಭ್ರಷ್ಟಾಚಾರ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಪೂರ್ವಾನುಮತಿ ಇಲ್ಲದಿದ್ದರೂ ತನಿಖೆ ನಡೆಸಲು ಆದೇಶಿಸಿ ಕರ್ನಾಟಕ ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿದೆ ಎಂದು ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠದ ಎದುರು ಯಡಿಯೂರಪ್ಪ ಪರವಾಗಿ ಹಿರಿಯ ವಕೀಲರಾದ ಮುಕುಲ್ ರೋಹಟಗಿ, ಸಿದ್ಧಾರ್ಥ ಲೂತ್ರಾ ಹಾಗೂ ಸಿದ್ಧಾರ್ಥ ದವೆ ವಾದ ಮಂಡಿಸಿದರು. 'ವಿಚಾರಣೆಗೆ ಅನುಮತಿ ನೀಡಲು ಕಾನೂನಿನ ಪ್ರಕಾರ ಸಕ್ಷಮ ಪ್ರಾಧಿಕಾರದ ಅನುಮತಿ ಕಡ್ಡಾಯ. ಯಡಿಯೂರಪ್ಪ ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರ ಅನುಮತಿ ನಿರಾಕರಿಸಿದ್ದರೂ ಹೈಕೋರ್ಟ್ ಇದನ್ನು ಬದಲಾಯಿಸಿದೆ' ಎಂದು ರೋಹಟಗಿ ವಾದಿಸಿದರು.

ಪ್ರಕರಣದ ವಿಚಾರಣಾ ಹಂತದಲ್ಲಿ ಅನುಮತಿ ಕಡ್ಡಾಯ ಎಂದು ಹೈಕೋರ್ಟ್ ಹೇಳಿದೆ. ಆದರೆ, ಭ್ರಷ್ಟಾಚಾರ ನಿಗ್ರಹ ಕಾಯ್ದೆ 2018ರ ಸೆಕ್ಷನ್ 17 (ಎ) ಪ್ರಕಾರ, ಜನಪ್ರತಿನಿಧಿಗಳ ಪ್ರಕರಣದಲ್ಲಿ ಸೂಕ್ತ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ತನಿಖೆ ಅಥವಾ ವಿಚಾರಣೆ ನಡೆಸುವಂತಿಲ್ಲ ಎಂಬ ನಿಯಮವನ್ನು ಹೈಕೋರ್ಟ್ ನಿರ್ಲಕ್ಷ್ಯಿಸಿದೆ ಎಂದು ಅವರು ವಾದ ಮಂಡಿಸಿದರು.

ಬಳಿಕ ನ್ಯಾಯಪೀಠವು, ಮೇಲ್ಮನವಿಯ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತು. ಪ್ರಕರಣದಲ್ಲಿ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸುವ ಮೊದಲು ಮೂಲ ದೂರುದಾರ ಟಿ.ಜೆ.ಅಬ್ರಹಾಂ ಅವರ ವಾದವನ್ನು ಆಲಿಸುವುದಾಗಿ ಪೀಠ ತಿಳಿಸಿತು.

ಬಿಡಿಎ ವಸತಿ ಯೋಜನೆಯೊಂದರ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಮೇಲೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಬಿ.ಎಸ್. ಯಡಿಯೂರಪ್ಪ, ಅವರ ಮಗ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಒಂಬತ್ತು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲು ಹೈಕೋರ್ಟ್ ಸೂಚಿಸಿತ್ತು. ಲೋಕಾಯುಕ್ತ ಪೊಲೀಸರು ಕಳೆದ ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದರು.



ಆತ್ಮವಿಶ್ವಾಸಕ್ಕೆ ಹತ್ತು ಸೂತ್ರಗಳು

ಬದುಕಿನಲ್ಲಿ ಭೀತಿ, ಆತಂಕಗಳು ಸಹಜ. ನಮ್ಮ ಹಿಂಜರಿಕೆಗಳನ್ನು ಮೀರುವುದು ಬೆಳವಣಿಗೆಯ ಚಿಹ್ನೆ. ಇದು ಏಕಾಏಕಿ ಆಗುವಂಥದ್ದಲ್ಲ.



ಡಾ. ಕಿರಣ್ ವಿ. ಎಸ್.

ಆತ್ಮವಿಶ್ವಾಸ ಜೀವನದ ಅಗತ್ಯಗಳಲ್ಲಿ ಒಂದು. ಬದುಕಿನ ಪಯಣದಲ್ಲಿ ಮುನ್ನಡೆಯುವುದಕ್ಕಾಗಲೀ, ಸವಾಲುಗಳನ್ನು ಸ್ವೀಕರಿಸುವುದಕ್ಕಾಗಲೀ, ಗಮ್ಯಗಳನ್ನು ತಲುಪುವುದಕ್ಕಾಗಲೀ, ಮುಂದಿನ ಗುರಿಗಳನ್ನು ನಿರ್ಧರಿಸುವುದಕ್ಕಾಗಲೀ ಆತ್ಮವಿಶ್ವಾಸ ಆವಶ್ಯಕ. ಅಹಂಕಾರವನ್ನು ಆತ್ಮವಿಶ್ವಾಸವೆಂದು ಭ್ರಮಿಸುವವರು ಮತ್ತು ಆತ್ಮವಿಶ್ವಾಸದ ಕೊರತೆಯನ್ನು ವಿನಯವೆಂದು ಭಾವಿಸುವವರು ಸಾಕಷ್ಟಿದ್ದಾರೆ. ಆತ್ಮವಿಶ್ವಾಸ ಇತರರ ಮುಂದೆ ತೋರ್ಪಡಿಕೆಗಿಂತ ನಮ್ಮ ಅಂತರ್ಯಕ್ಕೆ ತಿಳಿದಿರಬೇಕಾದ ಸತ್ಯ. ಅದು ಜನ್ಮತಃ ಬರಬೇಕೆಂದೇನೂ ಇಲ್ಲ. ಆತ್ಮವಿಶ್ವಾಸವನ್ನು ಪ್ರಯತ್ನಗಳಿಂದ, ತರಬೇತಿಯಿಂದ ರೂಢಿಸಿಕೊಳ್ಳಬಹುದು. ಧೃಢವಾದ ಆತ್ಮವಿಶ್ವಾಸವು ಜೀವನದ ಹಾದಿಯನ್ನೇ ಬದಲಿಸಬಲ್ಲದು. ಈ ದಿಶೆಯಲ್ಲಿ ಕೆಲವು ಸೂತ್ರಗಳನ್ನು ಅನುಸರಿಸಬಹುದು.

1. ಧನಾತ್ಮಕ ಚಿಂತನೆಗಳು ಋಣಾತ್ಮಕ ಚಿಂತನೆಗಳು ಆತ್ಮವಿಶ್ವಾಸದ ಹಾದಿಯಲ್ಲಿ ತೊಡಕಾಗಬಹುದು. ಇದನ್ನು ನಿಧಾನವಾಗಿ ಧನಾತ್ಮಕವಾಗಿ ಬದಲಾಯಿಸಬೇಕು. 'ನನ್ನಿಂದಾಗದು' ಎನ್ನುವುದನ್ನು 'ಪ್ರಯತ್ನಿಸುತ್ತೇನೆ' ಎಂಬ ಹಂತಕ್ಕೆ, 'ಸೋತುಹೋಗುತ್ತೇನೆ' ಎಂಬ ಭಾವವನ್ನು 'ಪ್ರಯತ್ನಿಸಿದರೆ ಸಫಲನಾಗಬಹುದು' ಎನ್ನುವ ಸ್ಥಿತಿಗೆ ಕೊಂಡೊಯ್ಯಬೇಕು. ಪ್ರತಿದಿನವೂ ಕನಿಷ್ಠ ಒಂದು ಧನಾತ್ಮಕ ಚಿಂತನೆಯನ್ನು ಮಾಡುತ್ತೇನೆಂದು ನಿರ್ಧರಿಸಿ, ಪಾಲಿಸಬೇಕು. ಮನಸ್ಸಿನಲ್ಲಿ ಋಣಾತ್ಮಕ ಚಿಂತನೆಗಳು ಮೂಡಿದಾದ ಗಮನವನ್ನು ಬೇರೆಡೆಗೆ ಹರಿಸಬೇಕು; ಧನಾತ್ಮಕ ಚಿಂತನೆಗಳನ್ನು ಘನೀಕರಿಸಬೇಕು. ಇದರಿಂದ ಮನಸ್ಸಿನಲ್ಲಿ ಆತ್ಮವಿಶ್ವಾಸದ ಕೇಂದ್ರಬಿಂದು ಮೂಡಿದಂತಾಗುತ್ತದೆ. ಈ ಕಾಲಘಟ್ಟದಲ್ಲಿ ನಮ್ಮನ್ನು ಪ್ರೋತ್ಸಾಹಿಸುವ ಕುಟುಂಬವರ್ಗ ಮತ್ತು ಸ್ನೇಹಿತರ ಜೊತೆಯಲ್ಲಿ ಬೆರೆಯುವುದು ಒಳ್ಳೆಯ ವಿಧಾನ; ಅನಗತ್ಯ ಟೀಕಾಕಾರರಿಂದ ದೂರವಿರುವುದು ಸೂಕ್ತ.

2. ಸೋಲು-ಗೆಲುವು ಜೀವನದಲ್ಲಿ ಸೋಲು-ಗೆಲುವುಗಳು ಜೊತೆಜೊತೆಯಾಗಿಯೇ ಹೋಗುತ್ತವೆ. ಗೆಲುವುಗಳನ್ನು ಮರೆತರೂ, ಸೋಲುಗಳು ಹೆಚ್ಚು ಕಾಲ ನೆನಪಿರುತ್ತವೆ. ಮುನ್ನಡೆಯುವ ಮನಃಸ್ಥಿತಿಯವರು ಸೋಲುಗಳು ಕಲಿಸುವ ಪಾಠಗಳನ್ನು ಮಾತ್ರ ಕಾಪಿಟ್ಟುಕೊಳ್ಳುತ್ತಾರೆ. ಆದರೆ ಋಣಾತ್ಮಕ ಚಿಂತನೆಯವರು ಸೋಲಿನ ಅನಗತ್ಯ ವಿವರಗಳನ್ನು ಮರೆಯಲಾಗದೆ ಕೊರಗುತ್ತಾರೆ. ಸೋಲಿನ ಭೌತಿಕ ಕುರುಹುಗಳನ್ನು ದೃಷ್ಟಿಯಿಂದ ದೂರ ಮಾಡುವುದು ಧನಾತ್ಮಕ ಚಿಂತನೆಯಲ್ಲಿ ಪರಿಣಾಮಕಾರಿ. ಸೋಲನ್ನು ಸದಾ ನೆನಪಿಸುವ ಯಾವ್ಯಾವ ಸಂಗತಿಗಳನ್ನು ಮರೆಯಬೇಕೆಂದು ಪಟ್ಟಿ ಮಾಡುವುದು ಸಹಾಯಕ. ಸೋಲಿನ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಬೇಕು. ಅಂತೆಯೇ, ವಿಜಯದ ಕುರುಹುಗಳನ್ನು ಕಣ್ಣಿಗೆ ಕಾಣುವಂತೆ ಇಡುವುದು ಒಳ್ಳೆಯದು. ಆದರೆ, ಆ ಗೆಲುವಿನ ನಶೆಯಲ್ಲೇ ಉಳಿಯಬಾರದು.

3. ಬಲ-ದೌರ್ಬಲ್ಯ ಪ್ರತಿಯೊಬ್ಬರಿಗೂ ಕೆಲವು ಬಲಗಳು, ದೌರ್ಬಲ್ಯಗಳು ಇರುತ್ತವೆ. ಅವುಗಳ ಪರಿಚಯ ಇರಬೇಕು. 'ನಮ್ಮ ಕೌಶಲಗಳ ಬಗೆ ಹೆಮ್ಮೆ ಇರಬೇಕು; ಹಮ್ಮು ಇರಬಾರದು' ಎನ್ನುವ ಮಾತಿದೆ. ಬರವಣಿಗೆ, ನೃತ್ಯ, ಚಿತ್ರಕಲೆ, ಸಂಗೀತ, ವಾಕ್ಪಟುತ್ವ– ಹೀಗೆ ನಮ್ಮ ಬಲ ಯಾವುದೋ ಅದನ್ನು ಮತ್ತಷ್ಟು ಬಲಗೊಳಿಸುವತ್ತ ದೈನಂದಿನ ಪ್ರಯತ್ನ ಇರಬೇಕು. ಅದಕ್ಕೆ ಸಂಬಂಧಿಸಿದ ಇತರ ಹವ್ಯಾಸಗಳನ್ನು ರೂಢಿಸಿಕೊಳ್ಳಬಹುದು. ಆಗ ಅದೇ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರ ಪರಿಚಯವಾಗುತ್ತದೆ. ಇದರಿಂದ ನಮ್ಮ ಕೌಶಲಕ್ಕೆ ಹೊಸ ಆಯಾಮಗಳು ದೊರೆತಂತಾಗುತ್ತದೆ. ಆ ವಿಷಯದಲ್ಲಿ ಮುಂದುವರೆದಷ್ಟೂ ಆತ್ಮವಿಶ್ವಾಸ ವೃದ್ಧಿಸುತ್ತದೆ. ಅದೇ ರೀತಿ ನಮ್ಮ ದೌರ್ಬಲ್ಯಗಳ ಪರಿಚಯವೂ ಇರಬೇಕು. ಅದನ್ನು ಪಟ್ಟಿ ಮಾಡಿ, ಒಂದೊಂದೇ ಅಂಶವನ್ನು ಬದಲಾಯಿಸಲು ನಾವು ಏನು ಮಾಡಬಹುದೆಂಬ ಆಲೋಚನೆಯೂ ದೌರ್ಬಲ್ಯಗಳ ಮೇಲೆ ನಮ್ಮ ನಿಯಂತ್ರಣವನ್ನು ಬೆಳೆಸುತ್ತದೆ. ಕೆಲವೊಮ್ಮೆ ಅಕಾರಣವಾಗಿ ನಾವು ದೌರ್ಬಲ್ಯವೆಂದು ಭಾವಿಸಿದ ಅಂಶ ಹಾಗಲ್ಲವೆಂದು ಅರಿತಾಗ ಆತ್ಮವಿಶ್ವಾಸ ಏರುತ್ತದೆ.

4. ಅಭಿನಂದನೆಯ ಸ್ವೀಕಾರ ಆತ್ಮವಿಶ್ವಾಸದ ಕೊರತೆ ಇರುವವರು ಹೊಗಳಿಕೆಯನ್ನು ಸಮಸ್ಥಿತಿಯಲ್ಲಿ ಸ್ವೀಕರಿಸಲಾರರು; ತಮಗೆ ಅಭಿನಂದನೆ ಸಲ್ಲಿಸುವವರನ್ನು ಅನುಮಾನದಿಂದಲೇ ನೋಡುತ್ತಾರೆ. ಈ ಮನಃಸ್ಥಿತಿಯಿಂದ ಹೊರಗೆ ಬರುವುದು ಸೂಕ್ತ. ನಮ್ಮ ಕುರಿತಾಗಿ ಒಳ್ಳೆಯ ಮಾತುಗಳನ್ನಾಡಿದವರಿಗೆ ನಗುಮೊಗದೊಡನೆ ಧನ್ಯವಾದಗಳನ್ನು ಹೇಳಿದರೆ ಅದನ್ನು ನೀಡಿದವರಿಗೂ ಸಾರ್ಥಕ ಎನಿಸುತ್ತದೆ. ಆತ್ಮವಿಶ್ವಾಸ ಬೆಳೆಯಲು ಇದೊಂದು ದಾರಿ. ನಮ್ಮ ಬಗ್ಗೆ ನಮಗೇ ಅನುಮಾನವಿದ್ದಾಗ ಒಳ್ಳೆಯ ಭಾವ ಮೂಡುವುದಿಲ್ಲ. ಹಾಗೆಯೇ, ಸುಳ್ಳು ಮಾತುಗಳನ್ನು ಆಡುತ್ತಾ, ನಮ್ಮಲ್ಲಿ ಇಲ್ಲದ ಗುಣಗಳನ್ನು ನಮಗೆ ಆರೋಪಿಸುವವರನ್ನು ಸಾಧ್ಯವಾದಷ್ಟೂ ದೂರ ಇಡಬೇಕು. ಇದನ್ನು ಮಾಡಲು ನಮ್ಮ ಬಲ-ದೌರ್ಬಲ್ಯಗಳ ಬಗ್ಗೆ ಸರಿಯಾದ ಅರಿವು ಇರುವುದು ಮುಖ್ಯವಾಗುತ್ತದೆ. ಇಲ್ಲವಾದರೆ ಸುಳ್ಳು ಹೊಗಳಿಕೆಯ ಹೊನ್ನಶೂಲಕ್ಕೆ ಏರಿದಂತಾಗುತ್ತದೆ.

5. ಭೀತಿ-ಆತಂಕ ಬದುಕಿನಲ್ಲಿ ಭೀತಿ, ಆತಂಕಗಳು ಸಹಜ. ನಮ್ಮ ಹಿಂಜರಿಕೆಗಳನ್ನು ಮೀರುವುದು ಬೆಳವಣಿಗೆಯ ಚಿಹ್ನೆ. ಇದು ಏಕಾಏಕಿ ಆಗುವಂಥದ್ದಲ್ಲ. ಇದಕ್ಕೆ ಸಮಯ ನೀಡಬೇಕು. ಆರಂಭದ ಹಿನ್ನಡೆಗಳಿಗೆ ಸಿದ್ಧರಾಗಿರಬೇಕು. ಈ ಹಾದಿಯಲ್ಲಿ ಗೆಲುವು ಮತ್ತು ಅನುಭವ ಎಂಬ ಎರಡು ಆಯ್ಕೆಗಳು ಇರುತ್ತವೆ. ಯಾವುದನ್ನೂ ಸೋಲು ಎಂದು ಭಾವಿಸದಿದ್ದರೆ, ಆಯಾ ಪ್ರಸಂಗದ ಅನುಭವ ನಮ್ಮನ್ನು ಮುಂದಿನ ಪ್ರಯತ್ನಕ್ಕೆ ಸಜ್ಜಾಗಿಸುತ್ತದೆ. ಕೈಯಿಟ್ಟ ಕೆಲಸ ಏಕೆ ಆಗಲಿಲ್ಲ? ನಮ್ಮ ವಿಧಾನವನ್ನು ಬದಲಾಯಿಸಿಕೊಳ್ಳಬಹುದೇ? ಕೆಲಸ ಸಾಧಿಸಲು ಯಾವ ಮಾರ್ಗಗಳಿವೆ? ಈ ಮಾರ್ಗಗಳ ಪೈಕಿ ನಮ್ಮ ವೈಯಕ್ತಿಕ ಕೌಶಲಕ್ಕೆ ಯಾವ ಹಾದಿ ಸೂಕ್ತ? ಈ ಮೊದಲಾದ ಪ್ರಶ್ನೆಗಳು ಅನುಭವದ ಮೂಲಕ ಬರುತ್ತವೆ. ಇಂತಹ ಒಳನೋಟಗಳು ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿ. ಈ ನಿಟ್ಟಿನಲ್ಲಿ ಬಹಳ ತಾಳ್ಮೆ ಬೇಕು. ಆರಂಭದ ವೈಫಲ್ಯಗಳ ಬಗ್ಗೆ ಕೊರಗಿ, ದುಡುಕಿನ ನಿರ್ಧಾರ ತೆಗೆದುಕೊಳ್ಳುವ ವಿರುದ್ಧ ಮನಸ್ಸನ್ನು ಸಜ್ಜಾಗಿಸಬೇಕು.

6. ಏಕಾಗ್ರತೆಯ ಅಗತ್ಯ ಹೊಸ ಪ್ರಯತ್ನದ ಸಮಯದಲ್ಲಿ ಸಾಕಷ್ಟು ಕಾಲಾವಕಾಶಕ್ಕೆ ಎಡೆಯಿರಬೇಕು. ಹತ್ತಾರು ಕೆಲಸಗಳ ನಡುವೆ ಅರೆಮನಸ್ಕರಾಗಿ ಮಾಡುವ ಪ್ರಯತ್ನಗಳು ವಿಫಲವಾಗುವ ಸಾಧ್ಯತೆಗಳೇ ಅಧಿಕ. ಸಾಧನೆಯೆಂಬುದು ಸಮಯ ಮತ್ತು ಪ್ರಯತ್ನಗಳನ್ನು ಬಯಸುತ್ತದೆ. ಅವುಗಳನ್ನು ನೀಡಲು ಸಾಧ್ಯವಾಗದಿದ್ದರೆ, ಪ್ರಯತ್ನದಿಂದ ಪಲಾಯನ ಮಾಡದೇ, ಸೂಕ್ತವಾದ ಸಮಯಕ್ಕೆ ವರ್ಗಾಯಿಸಬೇಕು. ಸಬೂಬುಗಳಿಂದ ಇತರರನ್ನು ನಂಬಿಸಬಹುದೇ ಹೊರತು, ನಮ್ಮ ಮನಸ್ಸನ್ನಲ್ಲ. ಹಿಮ್ಮೆಟ್ಟುವ ಪ್ರಕ್ರಿಯೆ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ.

7. ಹೋಲಿಕೆಯ ವೈಫಲ್ಯ 'ಹೋಲಿಕೆ ಮಾಡಿಕೊಳ್ಳುವವರಿಗೆ ಸಂತೃಪ್ತಿಯಿಲ್ಲ' ಎನ್ನುವ ಮಾತಿದೆ. ನೆನ್ನೆಗಿಂತ ನಾಳೆ ಚಂದವಾಗಿರಬೇಕೆಂದರೆ ನಮಗೆ ನಾವೇ ಹೋಲಿಕೆಯಾಗಬೇಕು. ಪ್ರತಿಯೊಬ್ಬರ ಜೀವನದ ಹಾದಿ, ಸವಾಲುಗಳು ವಿಭಿನ್ನ. ಹೀಗಾಗಿ, ಯಾರದ್ದೋ ಸಾಧನೆಗೆ ಮತ್ತೊಬ್ಬರ ಬೆಳವಣಿಗೆ ಹೋಲಿಕೆಯಾಗುವುದಿಲ್ಲ. ನಮಗೇನು ಬೇಕೆಂಬುದು ನಮಗೆ ತಿಳಿದಿರಬೇಕು. ಅದನ್ನು ಇತರರ ಜೊತೆಗೆ ಹೋಲಿಸುವುದು ಅರ್ಥಹೀನ. ಈ ನಿಟ್ಟಿನಲ್ಲಿ ಪ್ರಾಮಾಣಿಕ ಆತ್ಮಾವಲೋಕನ ಸಹಕಾರಿ. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ಮಂದಿ ತಮಗೆ ಬೇಕಾದ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತಾರೆ. ಅದನ್ನು ನೋಡಿ ಅವರ ಬಗ್ಗೆ ಏನೇನೋ ಕಲ್ಪಿಸಿಕೊಂಡು, ಅವರ ಹೋಲಿಕೆಯಲ್ಲಿ ನಮ್ಮ ಕೊರತೆಗಳನ್ನು ಕುರಿತು ಕೊರಗುವುದು ಹಾಸ್ಯಾಸ್ಪದವಾಗುತ್ತದೆ.

8. ತಪ್ಪುಗಳ ನಿರ್ವಹಣೆ ತಪ್ಪು ಮಾಡದವರು ಯಾರೂ ಇಲ್ಲ. ಆದರೆ ತಪ್ಪನ್ನು ನಾವು ಹೇಗೆ ನಿರ್ವಹಿಸುತ್ತೇವೆಂಬುದು ಮುಖ್ಯ. ತಪ್ಪನ್ನು ಗುರುತಿಸಿ, ನಮ್ಮ ತಪ್ಪಿನಿಂದ ಯಾರಿಗಾದರೂ ತೊಂದರೆಯಾಗಿದ್ದರೆ ಅವರ ಕ್ಷಮೆ ಬೇಡಿ, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದು, ಮುಂದಿನ ಬಾರಿ ಇಂತಹ ತಪ್ಪಾಗದಂತೆ ಎಚ್ಚರ ವಹಿಸುವುದು ಆತ್ಮವಿಶ್ವಾಸದ ವೃದ್ಧಿಗೆ ಸಹಕಾರಿ. ತಪ್ಪನ್ನೇ ಕುರಿತಾಗಿ ಆಲೋಚಿಸುತ್ತಾ ಕೊರಗುವುದು ತಪ್ಪನ್ನು ಹಲವಾರು ಬಾರಿ ಮರುಕಳಿಸಿದಂತೆ. ಹಿಂದೆ ಮಾಡಿದ ತಪ್ಪು ನಮ್ಮ ಭವಿಷ್ಯದ ಸೂಚಕವಲ್ಲ. ಅದನ್ನು ಸರಿತಿದ್ದುವ ನೂರಾರು ಸಾಧ್ಯತೆಗಳು ಜೀವನದ ಉದ್ದಕ್ಕೂ ದೊರೆಯುತ್ತವೆ.

9. ಪರಿಪೂರ್ಣತೆಯೆಂಬ ಗೀಳು ಪರಿಪೂರ್ಣತೆ ಚಂದವೆನಿಸಿದರೂ ಅದು ಗೀಳಾಗಬಾರದು. ಯಾವುದೇ ಸಂಗತಿ ಗೀಳಿನ ಸ್ವರೂಪ ಪಡೆದರೆ ಹಲವಾರು ಅವಕಾಶಗಳು ಕೈತಪ್ಪಿ ಹೋಗಬಹುದು. ಮಾಡುವ ಕೆಲಸವನ್ನು ತಪ್ಪುಗಳಿಗೆ ಆಸ್ಪದವಿಲ್ಲದಂತೆ ತೃಪ್ತಿಕರವಾಗಿ ಮಾಡಿದರೆ ಸಾಕಾಗುವಾಗ ಅದಕ್ಕೆ ಪರಿಪೂರ್ಣತೆಯ ಅಗತ್ಯ ಬರುವುದಿಲ್ಲ. ಪರಿಪೂರ್ಣತೆಯ ಗೀಳು ಆತ್ಮವಿಶ್ವಾಸದ ಸಾಧನೆಗೆ ಅಡ್ಡಿಯಾಗಬಹುದು; ಕೌಟುಂಬಿಕ ಮತ್ತು ವೃತ್ತಿ ಸಂಬಂಧಗಳನ್ನು ಹದಗೆಡಿಸಬಹುದು.

10. ಕೃತಜ್ಞತೆ ನಮ್ಮ ಬೆಂಬಲಕ್ಕೆ ನಿಲ್ಲುವವರ ಬಗ್ಗೆ ಪ್ರಾಮಾಣಿಕ ಕೃತಜ್ಞತಾಭಾವ ಇರುವುದು ಮುಖ್ಯ. ಇದರಿಂದ ಮನಸ್ಸಿನ ಶಾಂತಿ ಬೆಳೆಯುತ್ತದೆ. ಜೀವನದ ಸೊಬಗನ್ನು ಬೆಳೆಸುತ್ತಿರುವ ಸ್ನೇಹಿತರ, ಆತ್ಮೀಯರ ಪಟ್ಟಿ ಮಾಡುವುದರಿಂದ ನಮ್ಮ ನೆರವಿಗೆ ನಿಲ್ಲಬಲ್ಲವರ ಬಗ್ಗೆ ಕೃತಜ್ಞತೆ ಮೂಡುತ್ತದೆ. ಇದು ಮನಸ್ಸಿನ ಸ್ಥೈರ್ಯವನ್ನು ಹಿಗ್ಗಿಸುತ್ತದೆ. ಆತ್ಮವಿಶ್ವಾಸ ಬೆಳೆಯಲು ಇದೊಂದು ಪ್ರಮುಖ ಮಾರ್ಗ.



ಮಧ್ಯವಯಸ್ಸು ಮಧ್ಯಂತರಕ್ಕೇ ಮುಗಿಯದಿರಲಿ

ಡಾ. ಶ್ರೀನಿವಾಸ ಹರಪನಹಳ್ಳಿ

ಜೀವನ ವೇಗವಾಗಿ ಸಾಗುತ್ತಿರುವಾಗ ನಾವು ನಮ್ಮ ಜೀವಮಾನದ ಹಲವು ಮಜಲುಗಳನ್ನು ನೋಡನೋಡುತ್ತಲೇ ದಾಟಿಬಿಟ್ಟಿರುತ್ತೇವೆ. ದಿನನಿತ್ಯದ ಧಾವಂತದಲ್ಲಿ ಕೆಲವೊಂದು ಕಾಲಘಟ್ಟಗಳನ್ನು ಮರೆತೇಬಿಟ್ಟಿರುತ್ತೇವೆ. ಏಕೆಂದರೆ ಜೀವನ ನಮಗೆ ನೀಡುವ ಸವಾಲಿನ ಸ್ಪರ್ಧೆಯೇ ಅಂತಹುದು. ವೇಗ, ಗಡಿಬಿಡಿಗೇ ಇಲ್ಲಿ ಮಹತ್ವ. ಮುನ್ನುಗ್ಗಬೇಕೆನ್ನುವ ಛಲ, ಇನ್ನೂ ಹೆಚ್ಚಿನದನ್ನು ಸಾಧಿಸೋಣ ಎನ್ನುವ ಉತ್ಸಾಹ ಅನೇಕ ಬಾರಿ ನಮ್ಮನ್ನು ಸ್ಪರ್ಧೆಯ ಕಣಕ್ಕೆ ಇಳಿಸಿಬಿಟ್ಟಿರುತ್ತದೆ. ಹಾಗೆ ನೋಡಿದರೆ ಸ್ಪರ್ಧೆ ಉತ್ತಮವೇ. ನಮ್ಮಲ್ಲಿನ ಜಡತ್ವವನ್ನು ಒದ್ದೋಡಿಸಿ ಚುರುಕುತನವನ್ನು ಹೆಚ್ಚಿಸುವುದು, ಗುರಿ ಮುಟ್ಟುವಂತೆ ಪ್ರೇರೇಪಿಸುವುದು ಸ್ಪರ್ಧೆಯ ಒಂದು ಉದ್ದೇಶ.

ಚಿಕ್ಕವರಿದ್ದಾಗ ಪಾಲಕರ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಕನಸು ಕಾಣುವ ನಾವು ಇಪ್ಪತ್ತರ ಮತ್ತು ಮೂವತ್ತರ ದಶಕಗಳಲ್ಲಿ ನಮ್ಮ ಕಾಲಮೇಲೆ ನಿಂತು ಆ ಕನಸುಗಳನ್ನು ಸಾಕಾರಮಾಡಬಯಸುತ್ತೇವೆ. ನಮ್ಮ ನಮ್ಮ ಕನಸಿನ ವೃತ್ತಿಗಳಲ್ಲಿ ಪುಟ್ಟ ಪುಟ್ಟ ಹೆಜ್ಜೆಯಿಕ್ಕುತ್ತ, ಒಮ್ಮೊಮ್ಮೆ ಬಿದ್ದರೂ ಮೇಲೇಳುತ್ತ ಕೊನೆಗೆ ದೃಢವಾಗಿ ನಿಲ್ಲುತ್ತೇವೆ. ನಂತರ ಬರುವುದೇ ಮಧ್ಯವಯಸ್ಸು. ಎಲ್ಲರ ಜೀವನದಲ್ಲಿ ಇದೊಂದು ಪ್ರಮುಖ ಕಾಲಘಟ್ಟ. ಸುಮಾರು 40ರಿಂದ 60 ವಯಸ್ಸಿನ ವಯೋಮಾನದವರೆಲ್ಲರನ್ನು ನಾವು ಮಧ್ಯವಯಸ್ಕರೆಂದು ಪರಿಗಣಿಸಬಹುದು.

ಒಂದು ಸರ್ವೆಯ ಪ್ರಕಾರ ಜಗತ್ತಿನಲ್ಲಿ ಸುಮಾರು ಶೇ25 ಜನಸಂಖ್ಯೆಯಷ್ಟು ಈ ಮಧ್ಯವಯಸ್ಕರರಿದ್ದಾರೆ. ಆದರೆ ಜಗತ್ತಿನ ಆದಾಯದ ಶೇ 50ಕ್ಕೂ ಹೆಚ್ಚಿನ ಆದಾಯ ಈ ಮಧ್ಯವಯಸ್ಕರ ಬಳಿ ಇದೆ. ಏಕೆಂದರೆ ಈ ವಯೋಮಾನದ ಬಹುತೇಕ ಜನ ತಮ್ಮ ತಮ್ಮ ಉದ್ಯೋಗದ ಅತ್ಯುತ್ತಮ ಹಂತದಲ್ಲಿರುತ್ತಾರೆ. ಬ್ಯಾಂಕಿಂಗ್ ವಲಯದಲ್ಲಿ ಹಿರಿಯ ಅಥವಾ ಪ್ರಾಂತೀಯ ಮ್ಯಾನೇಜರ್ ಆಗಿಯೋ, ಕಾಲೇಜುಗಳಲ್ಲಿ ಪ್ರೊಫೆಸರ್ ಆಗಿಯೋ, ಔದ್ಯಮಿಕ ಕ್ಷೇತ್ರಗಳಲ್ಲಿ 'ಸಿಇಒ' ಅಥವಾ ಪ್ರಾದೇಶಿಕ ಮುಖ್ಯಸ್ಥರಾಗಿಯೋ ಸೇವೆ ಸಲ್ಲಿಸುತ್ತಿರುತ್ತಾರೆ. ಹಿರಿಯ ವೈದ್ಯರು, ಉದ್ಯಮಿಗಳು ಮತ್ತು ಸರ್ಕಾರಿ ಸೇವೆಯಲ್ಲಿರುವ ಅನೇಕ ಗೆಜೆಟೆಡ್ ಅಧಿಕಾರಿಗಳು ಕೂಡ ಈ ವರ್ಗಕ್ಕೇ ಸೇರುತ್ತಾರೆ. ಒಟ್ಟಿನಲ್ಲಿ ಈ ವರ್ಗ ಒಂದು ದೇಶದ ಆರ್ಥಿಕತೆಯ ಚುಕ್ಕಾಣಿಯನ್ನೇ ಹಿಡಿದಿರುತ್ತೆ ಎಂದರೆ ತಪ್ಪಾಗಲಿಕ್ಕಿಲ್ಲ!

ಹೆಚ್ಚಿನ ಜವಾಬ್ದಾರಿ ಜೊತೆಗೆ ಮಹತ್ವಾಕಾಂಕ್ಷೆಯನ್ನೂ ಹೊಂದಿರುವ ಸುಮಾರು 40ರಿಂದ 60 ವಯಸ್ಸಿನ ಈ ಜನ ಕೆಲವೊಮ್ಮೆ ಹತಾಶೆ, ಖಿನ್ನತೆಯಿಂದ ಬಳಲತೊಡಗುತ್ತಾರೆ. ಜೀವನೋತ್ಸಾಹ ಕುಗ್ಗಿದಂತೆ ಅನಿಸುವುದು, ಭವಿಷ್ಯದ ಬಗ್ಗೆ ಕಳವಳ/ ಅನಾದರ ತೋರುವುದು, ಲೈಂಗಿಕ ನಿರಾಸಕ್ತಿ ಇಂತಹ ಅನೇಕ ಲಕ್ಷಣಗಳನ್ನು ಇವರಲ್ಲಿ ಕಾಣಬಹುದು. ಈ ಸ್ಥಿತಿಯನ್ನು ಮನೋವೈದ್ಯಕೀಯ ಪರಿಭಾಷೆಯಲ್ಲಿ 'ಮಿಡ್ಲ್ ಲೈಫ್ ಕ್ರೈಸಿಸ್' ಎಂದೂ ಕರೆಯುತ್ತಾರೆ.

ಈ ಸಮಸ್ಯೆಗಳಿಗೆ ಕಾರಣಗಳಿವೆ. ವಯಸ್ಸಾಗುತ್ತಿದ್ದಂತೆ ನಮ್ಮ ಶರೀರ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೊಂಚ ಕೊಂಚವೇ ಕುಗ್ಗುತ್ತಾ ಹೋಗುತ್ತದೆ. ಜೊತೆಗೆ ಬಿ.ಪಿ, ಮಧುಮೇಹದಂತಹ ಕಾಯಿಲೆಗಳು ಈ ಸಂದರ್ಭದಲ್ಲೇ ಒಕ್ಕರಿಸುತ್ತವೆ. (ಮಹಿಳೆಯರಲ್ಲಿ ಮುಟ್ಟು ನಿಲ್ಲುವಿಕೆಯ ಪರಿಣಾಮಗಳು ಕಂಡುಬರುವುದು ಕೂಡ ಈ ವಯಸ್ಸಿನಲ್ಲಿಯೇ.) ಅಲ್ಲದೆ ಕೆಲಸ ಏಕತಾನತೆಯಿಂದ ಕೂಡಿದೆ ಅನಿಸತೊಡಗಿ ಮುಂದೇನು ಎಂಬ ಚಿಂತೆ ಕೂಡ ಕಾಡತೊಡಗುತ್ತದೆ.

ಹಾಗಾದರೆ ಇದಕ್ಕೆ ಪರಿಹಾರವೇನು?

ಮಧ್ಯವಯಸ್ಕರಲ್ಲಿ ಆ ಚೇತನವನ್ನು ಮರಳಿ ತರುವುದು ಹೇಗೆ? ಸಂತೋಷ 'U' ಆಕಾರದಲ್ಲಿ ನಮ್ಮ ಜೀವನದಲ್ಲಿ ಬರುವುದಂತೆ. ಅಂದರೆ ಪ್ರಾರಂಭಿಕ ವರ್ಷಗಳು ಹೆಚ್ಚು ಸಂತೋಷಮಯವಾಗಿರುತ್ತದೆ; ಮಧ್ಯದ ವರ್ಷಗಳಲ್ಲಿ ಸಂತಸ ಕೆಳಮಟ್ಟದಲ್ಲಿರುತ್ತದೆ. ನಂತರದ ದಿನಗಳು ಮತ್ತೆ ಸಂತೋಷಮಯವಾಗಿರುತ್ತವೆ. ಅದು ನಾವು ಮಾಗಿ, ಪರಿಪಕ್ವಗೊಂಡ ಸಮಯ. ಸಂತಸ ಕೆಳಮಟ್ಟದಲ್ಲಿರುವ ಈ ಮಧ್ಯವಯಸ್ಸನ್ನು ಚೇತೋಹಾರಿಯಾಗಿಸಲು, ಮಾನಸಿಕ ತುಮುಲಗಳನ್ನು ಜಯಿಸಲು ಕೆಲವು ಸೂತ್ರಗಳಿವೆ. ಮೊದಲನೆಯದಾಗಿ, ವಯಸ್ಸಾಗುವಿಕೆ ಒಂದು ನಿರಂತರ, ಒಮ್ಮುಖ ಪ್ರಕ್ರಿಯೆ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕು. ವಯಸ್ಸಾಗುವಿಕೆಯ ಲಕ್ಷಣಗಳು ಕೂಡ ಸ್ವಾಭಾವಿಕವೇ ಎಂದು ತಿಳಿಯಬೇಕು. ಈ ವಯಸ್ಸಿನಲ್ಲಿ ಬರುವ ಬಿ.ಪಿ, ಮಧುಮೇಹ, ಬೊಜ್ಜು, ಕಣ್ಣಿನ ತೊಂದರೆ ಮುಂತಾದುವುಗಳನ್ನು ಆರಂಭಿಕ ಹಂತದಲ್ಲೇ ಪತ್ತೆಮಾಡಿ ಸೂಕ್ತ ಚಿಕಿತ್ಸೆಯನ್ನು ಪಡೆಯಬೇಕು. ನಂತರ ನಾವು ಕೆಲಸದ ಒತ್ತಡ ಕಡಿಮೆಮಾಡಿಕೊಳ್ಳಲು ನಮ್ಮ ವೈಯುಕ್ತಿಕ ಸಮಯದ ಸದುಪಯೋಗವನ್ನು ಪಡೆಯಬೇಕು. ಇದನ್ನು ಪಡೆಯಲು ಅನೇಕ ವಿಧಗಳಿವೆ:

1. ಸುಂದರ, ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವುದು. ಎಷ್ಟೋ ವರ್ಷಗಳಿಂದ ನೋಡಲು ಆಗದೇ ಇದ್ದ ಈ ಸ್ಥಳಗಳನ್ನು ನೋಡಲು ಇದೊಂದು ಸದವಕಾಶ.
2. ನಿಮಗಿಷ್ಟವಾದ ಪುಸ್ತಕವೊಂದನ್ನು ಓದಿಯೋ ಇಲ್ಲವೇ ಆಸಕ್ತಿಯಿರುವ ವಾದ್ಯವನ್ನು ನುಡಿಸಿಯೋ ಸ್ವಲ್ಪ ಸಮಯವನ್ನು ಕಳೆಯಲು ಪ್ರಯತ್ನಿಸಿ.
3. ಹಲವು ವರ್ಷಗಳ ಹಿಂದೆ ಕೆಲಸದ ಜಂಜಾಟದಲ್ಲಿ ನಿಲ್ಲಿಸಿದ ಹವ್ಯಾಸಗಳನ್ನು ಈಗ ಮತ್ತೆ ಪ್ರಾರಂಭಿಸಿ ನೋಡಿ. ನಿಮಗೇ ಅಚ್ಚರಿಯಾಗುವಷ್ಟು ಆನಂದಿಸುತ್ತೀರಿ.
4. ಸ್ನೇಹಿತರ, ಸಂಬಂಧಿಕರ ಸಮಾರಂಭಗಳಿಗೆ ಭೇಟಿ ಕೊಟ್ಟು ಆತ್ಮೀಯತೆಯಿಂದ ಮಾತನಾಡಿ. ನಿಮ್ಮ ಸಾಂಗತ್ಯ ಅವರಿಗೂ ಎಷ್ಟೊಂದು ಖುಷಿ ಕೊಡುತ್ತದೆ ಎನ್ನುವುದು ಗೊತ್ತಾಗುವುದು ಆಗಲೇ.
5. ಸಾಧ್ಯವಾದಷ್ಟು ಇನ್ನೊಬ್ಬರಿಗೆ ಸಹಾಯ ಮಾಡುವುದನ್ನು ರೂಢಿಸಿಕೊಳ್ಳಿ. (ಅದು ಸಂಘ-ಸಂಸ್ಥೆಯಾಗಿರಬಹುದು, ಮನೆಕೆಲಸದವರಿರಬಹುದು ಅಥವಾ ಆಫೀಸಿನ ಹುಡುಗನಾಗಿರಬಹುದು.) ಕೊಂಚಮಟ್ಟಿನ ಹಣದ ಸಹಾಯ ಅಥವಾ ಆತ್ಮೀಯತೆಯ ಮಾತುಗಳು ಅವರಲ್ಲಿ ಕೃತಜ್ಞತೆಯ ಭಾವವನ್ನು ಮೂಡಿಸಿದರೆ ನಮ್ಮಲ್ಲಿ ಸಂತೃಪ್ತಿಯ ಸೆಲೆಯನ್ನು ಉಕ್ಕಿಸುತ್ತದೆ.

ಈ ಮೇಲಿನ ಸೂತ್ರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮಲ್ಲಿ ಸಾಕಷ್ಟು ಮಟ್ಟಿಗೆ ಧನಾತ್ಮಕ ಬದಲಾವಣೆಗಳು ಕಂಡುಬರುತ್ತವೆ. ಜೊತೆಗೆ ಮುಂಬರುವ ವೃದ್ಧಾಪ್ಯದಲ್ಲಿ ನಾವು ಮತ್ತೊಮ್ಮೆ ಸಂತೋಷದ ಅಲೆಯಲ್ಲಿ ತೇಲಾಡಬಹುದು.

ನೆಮ್ಮದಿಯ ಜನರು

40ರಿಂದ 60 ವಯಸ್ಸಿನ ಸಾಮಾನ್ಯರ ವರ್ಗವೊಂದಿದೆ. ದಿನಗೂಲಿ ಮಾಡುವವರು, ಚಿಕ್ಕ-ಪುಟ್ಟ ಅಂಗಡಿಗಳನ್ನು ಇಟ್ಟುಕೊಂಡವರು ಮತ್ತು ರಿಕ್ಷಾ ಇನ್ನಿತರ ವಾಹನಚಾಲಕರು ಇಂಥವರು ಇದರಲ್ಲಿ ಬರುತ್ತಾರೆ. ಇವರು ಆರ್ಥಿಕವಾಗಿ ಮತ್ತು ಬೌದ್ಧಿಕವಾಗಿ ಅಷ್ಟೇನೂ ಮೇಲಿನ ಹಂತಕ್ಕೆ ಹೋಗದಿದ್ದರೂ ಪದೋನ್ನತಿಯ ಒತ್ತಡ ಮತ್ತು ವರ್ಗಾವಣೆಯ ಜಂಜಡಗಳಿಗೆ ಸಿಲುಕದೆ ಹಾಯಾಗಿರುತ್ತಾರೆ.

ರೋಗಭೀತಿ ಎಂಬ ರೋಗ



ಡಾ. ಕವಿತಾ ಸದಾಶಿವ

'ಸಣ್ಣ ವಿಷಯವನ್ನು ಯಾವತ್ತೂ ದೊಡ್ಡದಾಗಿ ಮಾಡಿ ಹೇಳಬೇಡಿ. ಆದರೆ ದೊಡ್ಡ ವಿಷಯ ಮಾತ್ರ ಸಂಕ್ಷಿಪ್ತವಾಗಿರಲಿ.'

– ಪೈಥಾಗೋರಸ್

ಹೊರರೋಗಿ ವಿಭಾಗಕ್ಕೆ ಬಂದ 30 ವರ್ಷದ ನಮ್ಮ ಕಾರ್ಖಾನೆಯ ಉದ್ಯೋಗಿಯೊಬ್ಬರು 'ಡಾಕ್ಟರೇ, ಎದೆಯ ಎಡ ಭಾಗದಲ್ಲಿ ಚುಚ್ಚಿದಂತೆ ಆಗುತ್ತದೆ. ಇದು ಹಾರ್ಟ್ ಅಟ್ಯಾಕ್‌ನ ಮುನ್ಸೂಚನೆಗಳೇ?' ಎಂದು ಪ್ರಶ್ನಿಸಿದರು. ಬಿ.ಪಿ., ಇ.ಸಿ.ಜಿ. ತಪಾಸಣೆ ಮಾಡಿಸಿಕೊಂಡು ಹೋದ ಅವರು ಮತ್ತೆರಡು ದಿನಗಳ ನಂತರ ಬಂದು 'ಡಾಕ್ಟರೇ, ಅದೇನೋ 'ಟ್ರಿಪಲ್ ವೆಸೆಲ್ ಡಿಸೀಸ್' ಇದೆಯಂತೆ. ಹೀಗಾಗಿ ನನಗೆ ಹಾರ್ಟ್‌ಗೆ ಸಂಬಂಧಿಸಿದ ಇಕೊ, ಸಿ.ಟಿ. ಪರೀಕ್ಷೆಗಳನ್ನೆಲ್ಲಾ ಮಾಡಿಸಿಬಿಡಿ' ಎಂದು ಆತಂಕದಿಂದ ಹೇಳಿದನು.

ಅವರ ಅಂಗೈನಲ್ಲಿದ್ದ 'ಗೂಗಲ್ ಡಾಕ್ಟರ್' ನನ್ನನ್ನು ನೋಡಿ ನಗುತಿತ್ತು!

ಇತ್ತೀಚಿಗೆ ಫಿಟ್ ಅಂಡ್ ಫೈನ್ ಆಗಿರುವವರ ಹಠಾತ್ ಸಾವುಗಳು ನಮ್ಮ ಯುವಪೀಳಿಗೆಯಲ್ಲಿ ಸಹಜವಾಗಿಯೇ ಆತಂಕ ಸೃಷ್ಟಿಸಿದೆ. ಹಾಗೆಯೇ ಹೆಚ್ಚುತ್ತಿರುವ ಕ್ಯಾನ್ಸರ್ ಕಾಯಿಲೆ, ವರದಿಯಾಗುತ್ತಿರುವ ಭಯಾನಕ ಸಾಂಕ್ರಾಮಿಕ ರೋಗಗಳು ವೈದ್ಯಕೀಯ ಕ್ಷೇತ್ರಕ್ಕೂ ಸವಾಲಾಗಿವೆ. ಎದೆನೋವು, ಎದೆಯುರಿ; ಹಾಗೆಯೇ ತಲೆನೋವು, ಹೊಟ್ಟೆನೋವು ಇಂತಹ ಸಣ್ಣ ಸಮಸ್ಯೆಗಳನ್ನು ನಿರ್ಲಕ್ಷ್ಯ ಮಾಡುವ ಕಾಲವಲ್ಲವಿದು. ಹೀಗೆಂದು ಅತಿಯಾದ ಉತ್ಪ್ರೇಕ್ಷೆ ಮತ್ತು ಭಯಗಳೂ ಸಲ್ಲವು.

ಒಂದೆರಡು ದಿವಸದ ತಲೆನೋವಿಗೆ ಬ್ರೇನ್ ಟ್ಯೂಮರ್ ಆಗಿರಬಹುದೇ? ಹೊಟ್ಟೆನೋವಿಗೆ ಕ್ಯಾನ್ಸರ್ ಇರಬಹುದೇ? ಹೀಗೆ ಯಾವಾಗಲೂ ಅನಾರೋಗ್ಯದ ಬಗ್ಗೆ ವಿಪರೀತ ಆತಂಕ ಸುಮಾರು 3ರಿಂದ 5 ಪ್ರತಿಶತ ಜನರನ್ನು ಇಂದು ಕಾಡುತ್ತಿದೆ. ಗಂಭೀರ ಕಾಯಿಲೆಗಳಿಗೆ ತುತ್ತಾಗಬಹುದೇನೋ ಎಂಬ ಭಯದಿಂದ ಪದೇ ಪದೇ ವೈದ್ಯಕೀಯ ಪರೀಕ್ಷೆಗಳಿಗೆ ಇಂಥವರು ಒಳಪಡುತ್ತಾರೆ. ವೈದ್ಯಕೀಯ ವರದಿಗಳಲ್ಲಿ ಕಾಯಿಲೆಯ ಬಗ್ಗೆ ಯಾವ ಪುರಾವೆ ಇಲ್ಲದಿದ್ದರೂ ಯಾವಾಗಲೂ ಆತಂಕ–ಭೀತಿಗಳಲ್ಲಿರುತ್ತಾರೆ. ಇಂತಹ ರೋಗಭೀತಿಯನ್ನು ವೈದ್ಯವಿಜ್ಞಾನದಲ್ಲಿ 'ನೊಸೊಫೋಬಿಯಾ' ಎನ್ನುತ್ತಾರೆ; 'ವೈದ್ಯಕೀಯ ವಿದ್ಯಾರ್ಥಿಗಳ ಕಾಯಿಲೆ' ಎಂಬ ಹೆಸರೂ ಇದೆ.

ಇಂದು ಜನ ಸಾಮಾನ್ಯರಲ್ಲಿ ಹೆಚ್ಚುತ್ತಿರುವ ಈ ರೋಗಗಳ ಭೀತಿಗೆ, ಮಾಹಿತಿ ತಂತ್ರಜ್ಞಾನದಿಂದ ಸುಲಭವಾಗಿ ಸಿಗುವ ವೈದ್ಯಕೀಯ ಜ್ಞಾನವೇ ಕಾರಣವೆನ್ನಬಹುದು. ಅನುವಂಶಿಕತೆ ಇಲ್ಲವೆ ಬಾಲ್ಯದ ಅಹಿತಕರ ಇತಿಹಾಸ ಇದಕ್ಕೆ ಪೂರಕವಾಗಬಹುದು.

ರೋಗದ ಇಂತಹ ಭೀತಿಗಳು ಮೊದಲು ಆತಂಕಗಳಾಗಿ ಪ್ರಾರಂಭಗೊಂಡು, ಬಳಿಕ ರೋಗದ ಭ್ರಮೆಯಾಗಿ, ಕಾಲಕ್ರಮೇಣ ಮನೋರೋಗವೂ ಆಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಇಂತಹ ಯೋಚನೆಗಳಿಂದಾಗುವ ಸಮಸ್ಯೆಗಳಾವುವು ಎಂದು ಅರಿತು, ಅವಕ್ಕೆ ಶೀಘ್ರವಾಗಿ ಪರಿಹಾರಗಳನ್ನು ಕಂಡುಕೊಳ್ಳುವುದು ಅತ್ಯಗತ್ಯ.

ಸಮಸ್ಯೆಗಳು

1. ರೋಗಗಳ ಭಯವೇ ಒಂದು ಒತ್ತಡವಾಗಿ ಪರಿಣಮಿಸಿ ಅದರೊಟ್ಟಿಗೆ ನಿದ್ರಾಹೀನತೆ, ಅಧಿಕ ರಕ್ತದ ಒತ್ತಡ – ಹೀಗೆ ಹಲವು ಕಾಯಿಲೆಗಳು ಹುಟ್ಟುತ್ತವೆ.
2. ಅವರ ಜೊತೆಗಾರರೂ ಒತ್ತಡದ ಬದುಕನ್ನು ಬಾಳಬೇಕಾಗುತ್ತದೆ.
3. ಸಂಬಂಧಗಳಲ್ಲಿ ಬಿರುಕು, ವೈಯಕ್ತಿಕ ಹಾಗು ವೃತ್ತಿಜೀವನದಲ್ಲಿ ತೊಡಕುಗಳುಂಟಾಗುತ್ತವೆ.
4. ಅನಗತ್ಯ ತಪಾಸಣೆ ಮತ್ತು ಚಿಕಿತ್ಸೆಗಳಿಂದ ಅಡ್ಡಪರಿಣಾಮಗಳು ಸೇರಿದಂತೆ ಆರ್ಥಿಕ ಹೊರೆಯಾಗುತ್ತದೆ.
5. ವೈದ್ಯರನ್ನೂ ಆಸ್ಪತ್ರೆಗಳನ್ನೂ ಬದಲಾಯಿಸಿದರೂ ಸಮಾಧಾನ ಸಿಗದೆ ಖಿನ್ನತೆಗೊಳಗಾಗುತ್ತಾರೆ.

ಪರಿಹಾರಗಳು

1. 'ಯದ್ ಭಾವಂ ತದ್ ಭವತಿ' – ನಮ್ಮ ಯೋಚನೆಗಳಂತೆ ನಮ್ಮ ಹೊರ ಬದುಕು. ಹೀಗಾಗಿ ಧನಾತ್ಮಕ ಚಿಂತನೆಗೆ ಸಹಾಯಕಾರಿಯಾಗುವಂತಹ ಓದು, ಸಂಗೀತ, ಪ್ರವಾಸ, ಯೋಗ, ಧ್ಯಾನ ಮುಂತಾದ ಉತ್ತಮ ಹವ್ಯಾಸಗಳು ನಿಮ್ಮ ಸಂಗಾತಿಗಳಾಗಲಿ.
2. ಕಾಯಿಲೆಗಳನ್ನು ಅತ್ಯಂತ ರೋಚಕವಾಗಿ ಬಿತ್ತರಿಸುವ ಟಿ.ವಿ ಮಾಧ್ಯಮಗಳಿಂದ ದೂರವಿರಿ. ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಅತಿಯಾದ ಅಧ್ಯಯನ ಬೇಡ.
3. 30 ವರ್ಷ ಮೇಲ್ಪಟ್ಟ ಸ್ತ್ರೀ–ಪುರುಷರೆಲ್ಲರೂ ವಾರ್ಷಿಕ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳಿ.
4. ಆರೋಗ್ಯದಾಯಕ ಆಹಾರ–ವಿಹಾರಗಳನ್ನು ನಿಮ್ಮದಾಗಿಸಿಕೊಳ್ಳಿ. ಒಳ್ಳೆಯ ಜೀವನಶೈಲಿಯನ್ನು ರೂಢಿಸಿಕೊಳ್ಳಿ.
5. ಸಮಸ್ಯೆಗಳು ತಲೆದೋರಿದಲ್ಲಿ ವೈದ್ಯಕೀಯ ನೆರವನ್ನು ತಕ್ಷಣ ಪಡೆಯಿರಿ.

ಅತಿಯಾದರೆ ಅಮೃತವೂ ವಿಷವಂತೆ! ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಆದರೆ ಅನಗತ್ಯ ಭೀತಿಗಳು ಬೇಡ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ರಾಜಕೀಯ ಅಧಿಕಾರವು ಒಂದು ಮಾಸ್ಟರ್ ಕೀಲಿಕೈ ಇದ್ದಂತೆ. ಈ ಕೀಲಿಕೈಯಿಂದ ನೀವು ನಿಮ್ಮ ಎಲ್ಲಾ ಪ್ರಗತಿಯ ಬಾಗಿಲುಗಳನ್ನು ತೆರೆಯಬಹುದು.

–ಬಿ.ಆರ್.ಅಂಬೇಡ್ಕರ್

ಸ್ಥಳೀಯ ಭಾಷೆಗಳಲ್ಲಿ ಬ್ಯಾಂಕಿಂಗ್ ಸೇವೆ ಮಾತು ಸಾಕು, ಕಾನೂನು ಬಲ ಬೇಕು

ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಸೇವೆ ಒದಗಿಸುವ ವಿಚಾರವು ವರ್ಷಗಳಿಂದಲೂ ವಿವಾದದ ಸುಳಿಯಲ್ಲಿ ಸಿಲುಕುತ್ತಿದೆ. ಸಂವಿಧಾನದ ಎಂಟನೆಯ ಪರಿಚ್ಛೇದದ ಅಡಿಯಲ್ಲಿ ಗುರುತಿಸಲಾಗಿರುವ ಭಾಷೆಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುವುದು ವಾಸ್ತವದಲ್ಲಿ ಚರ್ಚೆಯ ಅಗತ್ಯವೇ ಇರದ ಹಕ್ಕು ಎಂಬಂತಾಗಬೇಕಿತ್ತು. ಆದರೆ ಪರಿಸ್ಥಿತಿ ಬೇರೆಯೇ ಇದೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಹಲವು ಕಡೆಗಳಲ್ಲಿ ಬ್ಯಾಂಕ್‌ಗಳ ಸಿಬ್ಬಂದಿ ಅಲ್ಲಿನ ಆಡಳಿತ ಭಾಷೆಯಲ್ಲಿ ಸೇವೆ ಒದಗಿಸದ ಕಾರಣಕ್ಕೆ ಗ್ರಾಹಕರು ತೊಂದರೆಗೆ ಸಿಲುಕಿದ ಪ್ರಸಂಗಗಳು ಆಗಾಗ ವರದಿಯಾಗುತ್ತಲೇ ಇವೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ವಿಷಯವನ್ನು ಬ್ಯಾಂಕ್‌ಗಳ ಒಕ್ಕೂಟದ ಕಾರ್ಯಕ್ರಮವೊಂದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬ್ಯಾಂಕ್‌ಗಳಲ್ಲಿ ಪ್ರತಿನಿತ್ಯ ಗ್ರಾಹಕರ ಜೊತೆ ವ್ಯವಹರಿಸಬೇಕಾದವರು ಅಲ್ಲಿನ ಭಾಷೆಯನ್ನು ಕಲಿತಿರಬೇಕು, ಅಂತಹ ವ್ಯವಸ್ಥೆಯನ್ನು ಬ್ಯಾಂಕ್‌ಗಳು ರೂಪಿಸಬೇಕು ಎಂದು ಹೇಳಿದ್ದಾರೆ. ನಿರ್ಮಲಾ ಅವರ ಮಾತು ಸ್ವಾಗತಾರ್ಹ. ಆದರೆ, ಅವರು ಈ ಮಾತು ಆಡಿದ ಮಾತ್ರಕ್ಕೆ ತಳಮಟ್ಟದಲ್ಲಿ ಹೆಚ್ಚಿನ ಬದಲಾವಣೆ ಆಗುವುದಿಲ್ಲ ಎಂಬುದು ಸತ್ಯ. ಹಿಂದೆಯೂ ಅವರು ಇಂತಹ ಸೂಚನೆ ನೀಡಿದ ನಿದರ್ಶನಗಳು ಇವೆ. ಅವರು ಸೂಚನೆ ನೀಡಿದ ನಂತರದಲ್ಲಿಯೂ ಬ್ಯಾಂಕ್ ಶಾಖೆಗಳ ಮಟ್ಟದಲ್ಲಿ ಹೆಚ್ಚಿನ ಬದಲಾವಣೆ ಕಂಡುಬಂದಿಲ್ಲ. ಬ್ಯಾಂಕ್‌ಗಳು, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು, ಸ್ಥಳೀಯ ಭಾಷೆಗಳಲ್ಲಿ ಸೇವೆಗಳನ್ನು ನೀಡುವಲ್ಲಿ ಸೋಲುತ್ತಿವೆ.



ದಕ್ಷಿಣದ ರಾಜ್ಯಗಳಿಗೆ ನೇಮಕಗೊಳ್ಳುವ ಹಿಂದಿ ಭಾಷಿಕ ಪ್ರದೇಶಗಳ ನೌಕರರಿಗೆ ಇಲ್ಲಿನ ಭಾಷೆಯನ್ನು ಕಲಿಸಲು ಬ್ಯಾಂಕುಗಳಿಗೆ ಸಾಧ್ಯವಿಲ್ಲ ಎಂದಾದರೆ, ಅವು ತಮ್ಮ ವರ್ಗಾವಣೆ ನೀತಿಯನ್ನೇ ಪುನರ್‌ವಿಮರ್ಶೆಗೆ ಒಳಪಡಿಸಬೇಕು

ನಿರ್ದಿಷ್ಟವಾದ ಭಾಷೆಯೊಂದರಲ್ಲಿ ಮಾತನಾಡಲು ಗ್ರಾಹಕನಿಗೆ ಆಗದಿದ್ದರೆ ಆತ ಭಾರತೀಯ ಅಲ್ಲ ಎಂಬಂತಹ ಮಾತುಗಳು ಬ್ಯಾಂಕ್ ಸಿಬ್ಬಂದಿಯಿಂದ ಬರಬಾರದು ಎಂಬ ಎಚ್ಚರಿಕೆಯನ್ನೂ ನಿರ್ಮಲಾ ಅವರು ನೀಡಿದ್ದಾರೆ ಎಂದು ವರದಿಯಾಗಿದೆ. ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಸೇವೆ ಸರಿಯಾಗಿ ಸಿಗದೆ ಸಮಸ್ಯೆ ಸೃಷ್ಟಿಯಾಗುತ್ತಿರುವುದಕ್ಕೆ ಎರಡು ಮುಖ್ಯ ಕಾರಣಗಳು ಇವೆ. ಅವು, ಬ್ಯಾಂಕಿಂಗ್ ಹುದ್ದೆಗಳಿಗೆ ನಡೆಯುವ ನೇಮಕಾತಿಯಲ್ಲಿನ ದೋಷಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳು ಪಾಲಿಸಿಕೊಂಡು ಬಂದಿರುವ ಸಿಬ್ಬಂದಿಯ ವರ್ಗಾವಣೆ ನೀತಿ. ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ನಡೆಯುವ ನೇಮಕಾತಿ ಪ್ರಕ್ರಿಯೆಯು ಕನ್ನಡದ ಅಥವಾ ದಕ್ಷಿಣ ಭಾರತದ ಅಭ್ಯರ್ಥಿಗಳಿಗೆ ಅನುಕೂಲಕರ ಆಗುವಂತೆ ಇಲ್ಲ. ಈ ವಿಚಾರವಾಗಿ ಹಲವು ಸಂಘಟನೆಗಳು, ರಾಜಕೀಯ ಪಕ್ಷಗಳು ದನಿಯೆತ್ತುತ್ತಲೇ ಇವೆ. ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪ ಸರಿಯಾಗದ ಹೊರತು ಬ್ಯಾಂಕಿಂಗ್ ವ್ಯವಸ್ಥೆಗೆ ದಕ್ಷಿಣದ ರಾಜ್ಯಗಳಿಂದ ಹೆಚ್ಚಿನವರು ಸೇರ್ಪಡೆ ಆಗುವುದಿಲ್ಲ. ಹಿಂದಿ ಭಾಷಿಕ ಪ್ರದೇಶಗಳ ಅಥವಾ ಈಶಾನ್ಯ ರಾಜ್ಯಗಳ ನೌಕರರನ್ನು ದಕ್ಷಿಣದ ರಾಜ್ಯಗಳಿಗೆ ನೇಮಕ ಮಾಡುವ ಮೊದಲು, ಅವರಿಗೆ ಇಲ್ಲಿನ ಭಾಷೆಯನ್ನು ಕಲಿಸುವ ಕೆಲಸವನ್ನು ಬ್ಯಾಂಕ್‌ಗಳೇ ಮಾಡಬೇಕು. ಹಾಗೆ ಮಾಡಲು ಸಾಧ್ಯವಿಲ್ಲ ಎಂದಾದರೆ, ತಮ್ಮ ವರ್ಗಾವಣೆ ನೀತಿಯನ್ನು ಅವು ಪುನರ್‌ವಿಮರ್ಶೆಗೆ ಒಡ್ಡಬೇಕು. ಸ್ಥಳೀಯ ಭಾಷೆ ಗೊತ್ತಿಲ್ಲದ ವ್ಯಕ್ತಿಯನ್ನು ಬ್ಯಾಂಕಿನಲ್ಲಿ ಕೂರಿಸಿ, ಸ್ಥಳೀಯರೆಲ್ಲ ಆತನ ಜೊತೆ ಆತನ ಭಾಷೆಯಲ್ಲೇ ಮಾತನಾಡಬೇಕು ಎಂದು ಬಯಸುವುದರಿಂದ ಬ್ಯಾಂಕಿಂಗ್ ಸೇವೆಗೆ ಅದೆಷ್ಟರ ಮಟ್ಟಿಗೆ ಅನುಕೂಲ ಆಗುತ್ತದೆ? ಇಂತಹ ಕ್ರಮಗಳು ವಾಸ್ತವದಲ್ಲಿ ಎಲ್ಲರನ್ನೂ ಒಳಗೊಳ್ಳುವ ರೀತಿಯಲ್ಲಿ ಹಣಕಾಸು ಸೇವೆ ಒದಗಿಸುವ ಆಶಯಕ್ಕೆ ಪೂರಕವಾಗಿಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಜಾರಿಯಲ್ಲಿರುವ ವರ್ಗಾವಣೆಯ ನೀತಿಯ ಕಾರಣದಿಂದಾಗಿ ದಕ್ಷಿಣದ ರಾಜ್ಯಗಳ ಪ್ರತಿಭಾವಂತರು ಬ್ಯಾಂಕಿಂಗ್ ಉದ್ಯೋಗದ ಕಡೆ ಆಕರ್ಷಿತರಾಗುತ್ತಿಲ್ಲ; ಅವರು ವರ್ಗಾವಣೆ ಹೆಚ್ಚು ಇಲ್ಲದ ಉದ್ಯೋಗಗಳಲ್ಲಿ ಬದುಕು ಕಟ್ಟಿಕೊಳ್ಳಲು ಮುಂದಾಗುತ್ತಿದ್ದಾರೆ ಎಂಬ ವಾದ ಇದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಇಂತಹ ರಾಚನಿಕ ಲೋಪಗಳನ್ನು ಸರಿಪಡಿಸದೇ ಇದ್ದರೆ ಸ್ಥಳೀಯ ಭಾಷೆಗಳಲ್ಲಿ ಸೇವೆ ಲಭ್ಯವಾಗುವುದಿಲ್ಲ. ನಿರ್ಮಲಾ ಅವರು ಈ ವಿಚಾರವಾಗಿ ಸಾರ್ವಜನಿಕವಾಗಿ ಮಾತುಗಳನ್ನು ಆಡುವುದಕ್ಕಿಂತ, ಪೂರಕವಾಗಿ ಕಾಯ್ದೆ, ಕಾನೂನುಗಳನ್ನು ಜಾರಿಗೆ ತರುವ ಬಗ್ಗೆ ಹೆಚ್ಚು ಗಮನ ನೀಡಬೇಕಾದ ಅಗತ್ಯ ಇದೆ. ನಿರ್ಮಲಾ ಅವರು ತಮ್ಮ ಆಶಯವನ್ನು ಮಾತುಗಳ ಮೂಲಕವಷ್ಟೇ ವ್ಯಕ್ತಪಡಿಸುವ ಬದಲು, ಕಾನೂನಿನ ಮೂಲಕ ಕಾರ್ಯರೂಪಕ್ಕೆ ತರುವುದು ಒಳಿತು.

ದಿನದ ಟ್ವೀಟ್

ದೇಸಿತನ ಕಾಯ್ದುಕೊಳ್ಳೋಣ


ನೋಡಿ! ಸ್ಥಳೀಯವಾಗಿ ಬೆಳೆಯುವ ಹೂವುಗಳು ಮತ್ತು ಎಲೆಗಳನ್ನು ಅವರು ಬಳಸುತ್ತಾರೆ. ನಮ್ಮಲ್ಲಿ ಸರ್ಕಾರದ ವತಿಯಿಂದ ಬಳಸುವ ಪ್ರತೀ ಹೂಗುಚ್ಛದಲ್ಲಿ ಇರುವಂತೆ ಲಿಲಿ, ಆಂಥೋರಿಯಂ, ಕಾರ್ನೇಷನ್ ಹೂವುಗಳನ್ನಲ್ಲ. ಇನ್ನು ನಮ್ಮಲ್ಲಿ ಹೂವಿನ ಅಲಂಕಾರ ಆಗಿದ್ದರಂತೂ ಅದೇ ಕಿರಿಕಿರಿ ಉಂಟುಮಾಡುವ ನೀಲಿ ಬಣ್ಣದ ಆರ್ಕಿಡ್. ಚಂಪಾ, ದಾಸವಾಳ, ಮಲ್ಲಿಗೆ, ಕೇದಿಗೆಯಂತಹ ಸ್ಥಳೀಯ ಹೂವುಗಳನ್ನು ಪುಷ್ಪಾಲಂಕಾರಕ್ಕೆ ನಾವು ಬಳಸಬಾರದೇಕೆ?

(ಬ್ರಿಟನ್ ರಾಣಿಯ ಅಂತ್ಯಕ್ರಿಯೆಯಲ್ಲಿ ಸ್ಥಳೀಯ ಪುಷ್ಪಗಳನ್ನು ಹೆಚ್ಚಾಗಿ ಬಳಸಿರುವುದಕ್ಕೆ ಪ್ರತಿಕ್ರಿಯೆ)

ಶಿಲ್ಪಾ ಆನಂದ್

ಕಿಡಿನುಡಿ

ಐ.ಟಿ. ಕಂಪನಿಯವರೊಬ್ಬರು ಬೆಂಗಳೂರಿನಲ್ಲಿ ಪ್ರವಾಹ ನಿಭಾಯಿಸಲು ಹಲವು ಸಲಹೆಗಳನ್ನು ನೀಡಿದರು. ಆದರೆ, ಅವರ ಕಂಪನಿಯ ಕಟ್ಟಡದ ಕೆಳಗೆ ರಾಜಕಾಲುವೆ ಹಾದು ಹೋಗಿತ್ತು. ಹೀಗಾಗಿ ಕಂಪನಿ ಕಟ್ಟಡದ ಒಳಗೆ ನೀರು ನುಗ್ಗಿತ್ತು. ಇಂತಹ ಒತ್ತುವರಿಗಳನ್ನು ಮುಲಾಜಿಲ್ಲದೇ ತೆರವುಗೊಳಿಸಲಾಗುವುದು.



ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 20-9-1997

• ಚರ್ಚೆ ವಿಫಲ: ಭಾರತ– ಪಾಕ್ ಪ್ರತ್ಯಾರೋಪ

ಇಸ್ಲಾಮಾಬಾದ್, ಸೆ. 19 (ಪಿಟಿಐ)– ಭಾರತ ಮತ್ತು ಪಾಕಿಸ್ತಾನದ ನಡುವಿನ ಮೂರನೇ ಸುತ್ತಿನ ಮಾತುಕತೆಯ ವೈಫಲ್ಯಕ್ಕೆ ಉಭಯ ರಾಷ್ಟ್ರಗಳು ಪರಸ್ಪರ ರಾಷ್ಟ್ರಗಳ ವಿರುದ್ಧ ದೂಷಣೆ ಮಾಡುವುದರೊಂದಿಗೆ ಉಭಯ ದೇಶಗಳ ನಡುವಣ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಪ್ರಯತ್ನಕ್ಕೆ ತೀವ್ರ ಹಿನ್ನಡೆ ಉಂಟಾಗಿದೆ. ಈ ಬೆಳವಣಿಗೆ ಗುಜ್ರಾಲ್– ಷರೀಫ್ ಮಾತುಕತೆಯ ಮೇಲೆ ಪರಿಣಾಮ ಬೀರುವುದೇ ಎಂದು ಕಾದುನೋಡಬೇಕಿದೆ.

‘ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಮಟ್ಟದ ಮೂರನೇ ಸುತ್ತಿನ ಮಾತುಕತೆ ವಿಫಲವಾಗಲು ಭಾರತದ ಹಟಮಾರಿತನವೇ ಕಾರಣ’ ಎಂಬ ಪಾಕ್ ಟೀಕೆಯನ್ನು ಭಾರತ ತಿರಸ್ಕರಿಸಿದೆ.

‘ಉಭಯ ದೇಶಗಳ ಸಂಬಂಧ ಸುಧಾರಣೆಯಾಗಬೇಕು ಎಂಬ ಭಾರತದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಪಾಕಿಸ್ತಾನದ ಜೊತೆ ಉತ್ತಮ ಸಂಬಂಧ ಹಾಗೂ ಸಹಕಾರಕ್ಕಾಗಿ ಭಾರತ ಎದುರು ನೋಡುತ್ತಿದೆ’ ಎಂದು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರರು ಸ್ಪಷ್ಟಪಡಿಸಿದ್ದಾರೆ.

• ಗರ್ಭಿಣಿಯಾಗಿದ್ದ ಡಯಾನಾ

ವಾಷಿಂಗ್ಟನ್, ಸೆ. 19 (ಎಎಫ್‌ಪಿ)– ಪ್ಯಾರಿಸ್‌ನಲ್ಲಿ ಕಾರು ಅಪಘಾತದಲ್ಲಿ ನಿಧನರಾದ ಪ್ರಿನ್ಸಸ್ ಡಯಾನಾ ಅವರು ದುರಂತ ಸಂಭವಿಸಿದ ಸಂದರ್ಭದಲ್ಲಿ ಆರು ವಾರಗಳ ಗರ್ಭಿಣಿ ಆಗಿದ್ದರು ಎಂದು ‘ಟೈಮ್’ ನಿಯತಕಾಲಿಕೆ ಪ್ರಕಟಿಸಿದೆ.

‘ತಾನು ಆರು ವಾರಗಳ ಗರ್ಭಿಣಿ’ ಎಂದು ಜತೆಗಿದ್ದ ಸಹಾಯಕನೊಬ್ಬನಿಗೆ ಅಪಘಾತದ ನಂತರ ಅರೆಪ್ರಜ್ಞೆಯಲ್ಲಿದ್ದ ಡಯಾನಾ ತಿಳಿಸಿದ್ದರು ಎಂದು ತುರ್ತು ಸೇವಾ ವೈದ್ಯರೊಬ್ಬರು ನಿಯತಕಾಲಿಕೆಗೆ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 20-9-1972

• ಭದ್ರಾವತಿ ಕಾರ್ಖಾನೆ ಉದ್ರಿಕ್ತ, ಗೋಲಿಬಾರ್; 1 ಸಾವು

ಭದ್ರಾವತಿ, ಸೆ. 19– ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಉದ್ರಿಕ್ತ ಕಾರ್ಮಿಕರ ಗುಂಪನ್ನು ಚದುರಿಸಲು ಪೊಲೀಸರು ಇಂದು ಬೆಳಿಗ್ಗೆ ಗೋಲಿಬಾರ್ ಮಾಡಿದಾಗ ಒಬ್ಬರು ಸ್ಥಳದಲ್ಲೇ ಸತ್ತು, ಮೂವರು ತೀವ್ರವಾಗಿ ಗಾಯಗೊಂಡರು.

ತುಟ್ಟಿಭತ್ಯೆ ವ್ಯತ್ಯಾಸ ಮೊತ್ತದ ತತ್‌ಕ್ಷಣದ ಪಾವತಿಗಾಗಿ ಒತ್ತಾಯಪಡಿಸಿ ನಿನ್ನೆ ರಾತ್ರಿ ಪ್ರಾರಂಭವಾದ ಕಾರ್ಮಿಕರ ಚಳವಳಿಯು ಇಂದು ಬೆಳಿಗ್ಗೆ ವಿಕೋಪಕ್ಕೆ ಮುಟ್ಟಿ, ಸಹಸ್ರಾರು ಕಾರ್ಮಿಕರು ಮುಖ್ಯದ್ವಾರದ ಮುಂದೆ ಸೇರಿ, ಪೊಲೀಸರು ಮತ್ತಿತರರ ಮೇಲೆ ಕಲ್ಲು ತೂರಾಟ ಆರಂಭಿಸಿದರು.


• ಉಗಾಂಡಾ, ತಾಂಜಾನಿಯ ಮಧ್ಯೆ ಭೀಕರ ಯುದ್ಧ ಸಂಭವ

ಲಂಡನ್, ಸೆ. 19–ಬಂಡಾಯಗಾರರನ್ನು ಗಡಿಯಾಚೆ ತಾಂಜಾನಿಯಾದೊಳಕ್ಕೆ ಅಟ್ಟಲು ಉಗಾಂಡಾದ ಅಧ್ಯಕ್ಷ ಇದಿ ಅಮೀನ್ ಅವರು ತಮ್ಮ ಸೇನೆಗೆ ಆಜ್ಞೆಯಿತ್ತು ತಾಂಜಾನಿಯಾದ ಜತೆ ಯುದ್ಧದ ಕಿಡಿ ಹಾರಿಸಬಹುದೆಂಬ ಭೀತಿ ಇಂದು ಪ್ರಬಲವಾಗಿದೆ.

ಪದಚ್ಯುತ ಅಧ್ಯಕ್ಷ ಮಿಲ್ಟನ್ ಒಬೋಟೆ ಅವರ ಬೆಂಬಲಿಗ ಬಂಡಾಯಗಾರರು ಭಾನುವಾರ ಬೆಳಿಗ್ಗೆ ತಮ್ಮ ತಾಯ್ನಾಡನ್ನು ಪ್ರವೇಶಿಸಿದರೆಂದೂ ಎರಡು ದಿನಗಳ ಹೋರಾಟದ ನಂತರ ಪರಾಭವಗೊಂಡ ಅವರು ಗಡಿನಾಡಿಗೆ ಹಿನ್ನಡೆದಿರುವರೆಂದೂ ಉಗಾಂಡಾ ರೇಡಿಯೊ ಹೇಳಿಕೊಂಡಿದೆ.

ಯಾವುದೇ ಕಾರಣದಿಂದ ಯುದ್ಧ ಆರಂಭವಾದರೂ, ಯುದ್ಧಕ್ಕೆ ಕೊನೆ ಹಾಡುವುದು ಅಷ್ಟು ಸುಲಭವಲ್ಲ

ಯುದ್ಧಕ್ಕೆ ಇದು ಕಾಲವಲ್ಲ, ಆದರೆ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಉಜ್ಬೇಕಿಸ್ತಾನದ ಸಮರ್ಕಂಡ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ಪುಟಿನ್ ಅವರ ಎದುರು ‘ಇದು ಯುದ್ಧದ ಕಾಲವಲ್ಲ’ ಎಂಬ ಮಾತನ್ನು ಆಡಿದರು. ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗಗಳು ಆದ್ಯತೆಯಾಗಬೇಕು. ನಾವು ಗಮನಿಸಬೇಕಾದ ಸಮಸ್ಯೆಗಳು ಬಹಳಷ್ಟಿವೆ. ಹಾಗಾಗಿ ಉಕ್ರೇನ್ ಸಂಘರ್ಷಕ್ಕೆ ಕೊನೆ ಹಾಡುವುದು ಅಗತ್ಯ ಎಂಬ ಇಂಗಿತ ಆ ಮಾತಿನಲ್ಲಿತ್ತು. ಪುಟಿನ್ ಅವರ ಸಮ್ಮುಖದಲ್ಲಿ ಬಹಿರಂಗವಾಗಿ ಪ್ರಧಾನಿ ಮೋದಿ ಆಡಿದ ಈ ಮಾತು ಜಗತ್ತಿನ ಗಮನಸೆಳೆಯಿತು. ಅಮೆರಿಕದ ಮಾಧ್ಯಮಗಳು ಮೋದಿ ಅವರ ಮಾತನ್ನು ಕೊಂಡಾಡಿದವು.

ಯಾವುದೇ ಯುದ್ಧಕ್ಕೆ ಹಲವು ಕಾರಣಗಳು ಇರುತ್ತವೆ. ವಿಸ್ತರಣಾ ದಾಹ, ಪಾರಮ್ಯ ಸಾಧಿಸುವ ಬಯಕೆ, ಪಾಠ ಕಲಿಸಬೇಕು ಎಂಬ ವಾಂಛೆ, ಅಭದ್ರತೆಯ ಭೀತಿ ಪ್ರಮುಖವಾಗಿ ಯುದ್ಧಕ್ಕೆ ಪ್ರಚೋದನೆ ಒದಗಿಸಿದರೆ, ರಾಜಕೀಯವಾಗಿ ವರ್ಚಸ್ಸು ವೃದ್ಧಿಸಿಕೊಳ್ಳುವ, ಆಂತರಿಕ ಸಮಸ್ಯೆಗಳನ್ನು ಗೌಣವಾಗಿಸುವ ಪ್ರಯತ್ನಗಳಿಗೂ ಕೆಲವೊಮ್ಮೆ ಯುದ್ಧ ಸಹಕಾರಿಯಾಗುತ್ತದೆ. ಪ್ರಬಲ ರಾಷ್ಟ್ರಗಳ ಹಿತಾಸಕ್ತಿ, ಆರ್ಥಿಕತೆಯನ್ನು ಮೇಲೆತ್ತಬೇಕಾದ ಅನಿವಾರ್ಯ ಮತ್ತು ಶಸ್ತ್ರಾಸ್ತ್ರ ಉದ್ಯಮದ ವಾಣಿಜ್ಯಿಕ ಲೆಕ್ಕಾಚಾರಗಳು ಪರದೆಯ ಹಿಂದೆ ನಿಂತು ಯುದ್ಧಕ್ಕೆ ಪ್ರಚೋದಿಸಿದ ಉದಾಹರಣೆಗಳು ಇತಿಹಾಸದಲ್ಲಿವೆ. ಈ ಯಾವುದೇ ಕಾರಣದಿಂದ ಯುದ್ಧ ಆರಂಭವಾದರೂ, ಯುದ್ಧಕ್ಕೆ ಕೊನೆ ಹಾಡುವುದು ಅಷ್ಟು ಸುಲಭವಲ್ಲ. ಆಗ ಪ್ರತಿಷ್ಠೆ ಅಡ್ಡಬರುತ್ತದೆ, ಸಂದಿಗ್ಧ ಎದುರಾಗುತ್ತದೆ. ಯುದ್ಧದಲ್ಲಿ ಆದ ಹಿನ್ನಡೆ ಅಥವಾ ಸೋಲು ಹಲವು ನಾಯಕರ ವರ್ಚಸ್ಸನ್ನು ಹಾಳುಗೆಡವಿದೆ. ದುರ್ಬಲ ಎಂದು ಬಿಂಬಿಸಿದೆ. ರಾಜಕೀಯ ಭವಿಷ್ಯವನ್ನು ಮಂಕಾಗಿಸಿದೆ.

ಬೇರೆಲ್ಲೂ ನೋಡುವುದು ಬೇಡ. ಇತ್ತೀಚೆಗೆ ನಿಧನರಾದ, ಸೋವಿಯತ್ ಒಕ್ಕೂಟದ (ಯುಎಸ್‌ಎಸ್‌ಆರ್) ಕೊನೆಯ ಮುಖ್ಯಸ್ಥರಾಗಿದ್ದ ಮಿಖಾಯಿಲ್ ಗೋರ್ಬಚೆವ್ ಅವರ ಉದಾಹರಣೆಯೇ ಸಾಕು.

ಎರಡನೇ ಪ್ರಪಂಚ ಯುದ್ಧದ ಬಳಿಕ ಕಮ್ಯುನಿಸ್ಟ್ ಕೈಗೊಂಬೆ ಸರ್ಕಾರಗಳನ್ನು ಪೂರ್ವ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಸ್ಥಾಪಿಸುವುದನ್ನೇ ಧ್ಯೇಯವಾಗಿಸಿಕೊಂಡ ಸ್ಟಾಲಿನ್ ಅವರ ನೀತಿಯಿಂದಾಗಿ, ಪಶ್ಚಿಮ ಐರೋಪ್ಯ ರಾಷ್ಟ್ರಗಳು ಅಮೆರಿಕದ ಮುಂದಾಳತ್ವದಲ್ಲಿ ಒಂದಾಗಿ ನಿಂತವು. ಬಣಗಳು ಸೃಷ್ಟಿಯಾದ ಕಾರಣ ಬತ್ತಳಿಕೆ ತುಂಬಿಕೊಳ್ಳುವ ಪೈಪೋಟಿ ಏರ್ಪಟ್ಟಿತು. ಶಸ್ತ್ರಾಗಾರವನ್ನು ತುಂಬಿಸಿಕೊಳ್ಳುವಲ್ಲೇ ಸಮಯ ವ್ಯಯಿಸಿದ ಸೋವಿಯತ್ ಒಕ್ಕೂಟವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು.

1985ರಲ್ಲಿ ಗೋರ್ಬಚೆವ್ ಅವರು ಸೋವಿಯತ್ ಒಕ್ಕೂಟದ ಚುಕ್ಕಾಣಿ ಹಿಡಿದಾಗ, ಶೀತಲ ಸಮರ ಚಾಲ್ತಿಯಲ್ಲಿತ್ತು ಮತ್ತು ಸೋವಿಯತ್ ಒಕ್ಕೂಟವು ಆರ್ಥಿಕ ಪ್ರಪಾತದಿಂದ ಕೇವಲ ನಾಲ್ಕು ಹೆಜ್ಜೆ ಹಿಂದಿತ್ತು. ಕೈಗೊಂಬೆ ಸರ್ಕಾರಗಳನ್ನು ಬಲವಂತವಾಗಿ ಹಿಡಿದಿಟ್ಟುಕೊಳ್ಳುವ, ದೊಡ್ಡ ಸೇನೆಯನ್ನು ಪೋಷಿಸುವ ಆರ್ಥಿಕ ಶಕ್ತಿಯನ್ನು ಸೋವಿಯತ್ ಒಕ್ಕೂಟ ಹೊಂದಿರಲಿಲ್ಲ.

ಗೋರ್ಬಚೆವ್ ‘ಯುದ್ಧಕ್ಕೆ ಇದು ಕಾಲವಲ್ಲ’ ಎಂದು ಅರಿತಿದ್ದರು. ಜಡ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವುದು ಮತ್ತು ಸುಧಾರಣೆ ತರುವುದು ಅವರ ಆದ್ಯತೆಯಾಯಿತು. ಕಮ್ಯುನಿಸ್ಟ್ ಪಕ್ಷ ಆಂತರಿಕ ಸುಧಾರಣೆಗೆ ತೆರೆದುಕೊಳ್ಳದ ವಿನಾ ಆರ್ಥಿಕ ಸುಧಾರಣಾ ಕ್ರಮಗಳು ಯಶಸ್ವಿಯಾಗಲಾರವು ಎಂಬುದು ಅವರಿಗೆ ಅರ್ಥವಾಗಿತ್ತು. ‘ಜಗತ್ತು ಮುಂದಡಿ ಇಡುತ್ತಿದ್ದರೆ ನಾವು ನಿಂತಲ್ಲೇ ಹಲ್ಲು ಮಸೆಯುತ್ತಿದ್ದೇವೆ. ಕಳಪೆ ದರ್ಜೆಯ ಸರಕುಗಳನ್ನು ನೆಚ್ಚಿಕೊಳ್ಳುವುದು, ಆಧುನಿಕತೆಗೆ ತೆರೆದುಕೊಳ್ಳದಿರುವುದು ನಾಚಿಕೆಗೇಡಿನ ವಿಷಯ’ ಎಂದು ಕಮ್ಯುನಿಸ್ಟ್ ಪಕ್ಷದ ನಾಯಕರಿಗೆ ಮನವರಿಕೆ ಮಾಡಿಕೊಟ್ಟರು. ಸೋವಿಯತ್ ನೀತಿಯನ್ನು ಮುಕ್ತತೆ ಮತ್ತು ಪುನರ್ನಿರ್ಮಾಣ ಎಂಬ ಎರಡು ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗೋರ್ಬಚೆವ್ ಮರು ವ್ಯಾಖ್ಯಾನಿಸಿದರು.

ಇಂಗ್ಲೆಂಡ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಅವರೊಂದಿಗೆ ಮಾತುಕತೆಗೆ ಕುಳಿತರು. ಚೀನಾಕ್ಕೆ ಸ್ನೇಹಹಸ್ತ ಚಾಚಿದರು. ಅಫ್ಗಾನಿಸ್ತಾನದಿಂದ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಕ್ರಮ ಕೈಗೊಂಡರು. ಮುಖ್ಯವಾಗಿ ಅಮೆರಿಕದ ಅಧ್ಯಕ್ಷ ರೇಗನ್ ಮತ್ತು ಗೋರ್ಬಚೆವ್ ನಡುವೆ ಪತ್ರ ಸಂವಾದ ಆರಂಭವಾಯಿತು. ಶೃಂಗಸಭೆ ಏರ್ಪಟ್ಟಿತು. ಅದುವರೆಗೆ ಅಮೆರಿಕ ಹಾಗೂ ಸೋವಿಯತ್ ಒಕ್ಕೂಟವು ‘ಮ್ಯಾಡ್’ (Mutual assured destruction) ಧೋರಣೆ ಅನುಸರಿಸುತ್ತಿದ್ದವು. ಅಂದರೆ ಎರಡೂ ದೇಶಗಳು ಸಮ ಪ್ರಮಾಣದ ಅಣ್ವಸ್ತ್ರಗಳನ್ನು ಇಟ್ಟುಕೊಳ್ಳುವುದು ಮತ್ತು ಆ ಮೂಲಕ ಒಂದೊಮ್ಮೆ ದಾಳಿಯಾದರೆ ಪ್ರತಿದಾಳಿ ಮಾಡಲು ಸಜ್ಜಾಗುವುದು. ಇದು ಎರಡು ದೇಶಗಳ ನಡುವೆ ಶಸ್ತ್ರ ಜಮಾವಣೆಯ ಪೈಪೋಟಿಗೆ ಕಾರಣವಾಗಿತ್ತು. ಈ ಧೋರಣೆ ವಿನಾಶಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ರೇಗನ್ ಮತ್ತು ಗೋರ್ಬಚೆವ್ ಬಲ್ಲವರಾಗಿದ್ದರು.

ಜಿನೀವಾ ಮಾತುಕತೆಯ ಬಳಿಕ ಒಂದು ಸೌಹಾರ್ದ ಅಧ್ಯಾಯವು ಅಮೆರಿಕ ಮತ್ತು ಯುಎಸ್‌ಎಸ್‌ಆರ್ ನಡುವೆ ಆರಂಭವಾಯಿತು. ಐಎನ್‌ಎಫ್ ಒಪ್ಪಂದಕ್ಕೆ ಅಂಕಿತ ಹಾಕುವ ಮೂಲಕ ಮಧ್ಯಂತರ ಶ್ರೇಣಿಯ ಪರಮಾಣು ಅಸ್ತ್ರಗಳ ನಿಯಂತ್ರಣಕ್ಕೆ ಅಮೆರಿಕ ಮತ್ತು ಸೋವಿಯತ್ ಕ್ರಮ ಕೈಗೊಂಡವು. ಜರ್ಮನಿಯ ಏಕೀಕರಣ ಜರ್ಮನಿಯ ಆಂತರಿಕ ವಿಷಯ ಎಂದು ಗೋರ್ಬಚೆವ್ ಘೋಷಿಸಿದರು. ಸೇನಾ ಬಲವನ್ನು ಬಳಸಿ ಯಥಾಸ್ಥಿತಿ ಕಾಯ್ದುಕೊಳ್ಳಲು ಅವರು ಬಯಸಲಿಲ್ಲ.



ಗೋರ್ಬಚೆವ್ ಅವರ ಕುರಿತು ಪಶ್ಚಿಮ ಜಗತ್ತು ಮೆಚ್ಚುಗೆಯ ಮಾತನ್ನು ಆಡಿತು. ಶೀತಲ ಸಮರವನ್ನು ಕೊನೆಗಾಣಿಸಿದ ಮುತ್ಸದ್ದಿ, ಅಣ್ವಸ್ತ್ರದ ಅವಘಡ ತಪ್ಪಿಸಿದ ಮಾನವತಾವಾದಿ ಎಂದೆಲ್ಲಾ ಅಮೆರಿಕದ ಮಾಧ್ಯಮಗಳು ಅವರನ್ನು ಕೊಂಡಾಡಿದವು. ಪೂರ್ವ ಮತ್ತು ಪಶ್ಚಿಮ ಜಗತ್ತಿನ ನಡುವಿನ ಸಂಬಂಧದಲ್ಲಿ ಆಮೂಲಾಗ್ರ ಬದಲಾವಣೆ ತಂದ ಕಾರಣದಿಂದ ಗೋರ್ಬಚೆವ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರವನ್ನು ನೀಡಲಾಯಿತು. ಆದರೆ 1991ರ ಆಗಸ್ಟ್ ಹೊತ್ತಿಗೆ ಕಮ್ಯುನಿಸ್ಟ್ ಪಕ್ಷದ ಸಂಪ್ರದಾಯವಾದಿಗಳು ಗೋರ್ಬಚೆವ್ ನಿಲುವಿನ ವಿರುದ್ಧ ಬಂಡೆದ್ದರು. ಕ್ಷಿಪ್ರಕ್ರಾಂತಿ ನಡೆಯಿತು. ಕಪ್ಪು ಸಮುದ್ರ ಪ್ರದೇಶದಲ್ಲಿ ವಿಶ್ರಾಂತಿಯಲ್ಲಿದ್ದಾಗ ಗೋರ್ಬಚೆವ್ ಅವರನ್ನು ಬಂಧಿಸಲಾಯಿತು. ಕೆಲವೇ ದಿನಗಳಲ್ಲಿ ಗೋರ್ಬಚೆವ್ ರಾಜಕೀಯವಾಗಿ ಮೂಲೆಗುಂಪಾದರು. ಬೋರಿಸ್ ಯೆಲ್ಸಿನ್ ಮುನ್ನೆಲೆಗೆ ಬಂದರು. 1996ರ ಅಧ್ಯಕ್ಷೀಯ ಚುನಾವಣೆಗೆ ಗೋರ್ಬಚೆವ್ ಸ್ಪರ್ಧಿಸಿದರಾದರೂ, ಅವರಿಗೆ ಅತ್ಯಲ್ಪ ಮತಗಳು ಬಂದವು. ಅಮೆರಿಕದ ಎದುರು ಮಂಡಿಯೂರಿದ ನಾಯಕ ಎಂದು ರಷ್ಯಾದ ಒಳಗೆ ಬಿಂಬಿತವಾಗಿದ್ದ ಗೋರ್ಬಚೆವ್ ಅವರನ್ನು ಅಲ್ಲಿನ ಜನ ಒಪ್ಪಿಕೊಳ್ಳಲಿಲ್ಲ.

ಹಾಗಂತ ಗೋರ್ಬಚೆವ್ ವಾಸ್ತವಕ್ಕೆ ಮುಖ ತಿರುಗಿಸಿ ಯಾವುದೇ ನಿಲುವು ತೆಗೆದುಕೊಂಡಿರಲಿಲ್ಲ. ಅಮೆರಿಕದೊಂದಿಗೆ ಮಾತುಕತೆ ನಡೆಸಿದ ಸಂದರ್ಭದಲ್ಲಿ ಕೆಲವು ಷರತ್ತುಗಳನ್ನೂ ಅವರು ವಿಧಿಸಿದ್ದರು. ಅಮೆರಿಕ ತನ್ನ ಮಿಲಿಟರಿ ಒಕ್ಕೂಟವನ್ನು ಪೂರ್ವ ಐರೋಪ್ಯ ದೇಶಗಳಿಗೆ ವಿಸ್ತರಿಸಬಾರದು ಎಂಬುದು ಆ ಪೈಕಿ ಪ್ರಮುಖ ಷರತ್ತಾಗಿತ್ತು. ‘ಪೂರ್ವದ ಕಡೆಗೆ ಒಂದು ಇಂಚೂ ಮುಂದುವರಿಯುವುದಿಲ್ಲ’ ಎಂದು ಅಮೆರಿಕದ ವಿದೇಶಾಂಗ ಸಚಿವ ಜೇಮ್ಸ್ ಬೇಕರ್ ಮಾತು ಕೊಟ್ಟಿದ್ದರು. ಆದರೆ? ರಷ್ಯಾ ಮುಂದೆಂದೂ ತನಗೆ ಪ್ರತಿಸ್ಪರ್ಧಿಯಾಗಿ ಎದ್ದು ನಿಲ್ಲಬಾರದು ಎಂಬ ದಿಸೆಯಲ್ಲಿ ಅಮೆರಿಕ ಯೋಜನೆಗಳನ್ನು ರೂಪಿಸಿತು. ಉಕ್ರೇನ್ ಗಡಿಯವರೆಗೂ ನ್ಯಾಟೊ ಒಕ್ಕೂಟವನ್ನು ವಿಸ್ತರಿಸಿತು. ಸಂಘರ್ಷಕ್ಕೆ ಪ್ರಚೋದನೆ ಒದಗಿಸಿತು. ಹಾಗಾಗಿ ಬೈಡನ್ ಅವರಿಗೂ ಪ್ರಧಾನಿ ಮೋದಿ ‘ಯುದ್ಧಕ್ಕೆ ಇದು ಕಾಲವಲ್ಲ’ ಎಂದು ಮನವರಿಕೆ ಮಾಡಿಕೊಡಬೇಕಿದೆ.

ಅದೇನೇ ಇರಲಿ, ಸಮರ್ಕಂಡ್‌ನಲ್ಲಿ ಮೋದಿ ಅವರ ಮಾತಿಗೆ ಪುಟಿನ್ ‘ನಿಮ್ಮ ಕಳವಳ ಮತ್ತು ಉಕ್ರೇನ್ ಸಂಘರ್ಷದ ವಿಷಯದಲ್ಲಿ ತಳೆದ ನಿಲುವು ಅರ್ಥವಾಗುತ್ತದೆ. ಸಂಘರ್ಷವನ್ನು ಶೀಘ್ರದಲ್ಲಿ ಕೊನೆಗಾಣಿಸಲು ಪ್ರಯತ್ನಿಸುತ್ತೇವೆ’ ಎಂದು ಪ್ರತಿಕ್ರಿಯಿಸಿದ್ದಾರೆ. ಆದರೆ ಹೇಗೆ ಮತ್ತು ಸಾಧ್ಯವೇ ಎಂಬ ಪ್ರಶ್ನೆಗಳು ಉಳಿದುಕೊಂಡಿವೆ.

ಅತ್ತ ಅಮೆರಿಕವು ರಷ್ಯಾಕ್ಕೆ ಪಾಠ ಕಲಿಸಬೇಕು ಎಂಬ ಉಮೇದಿನಲ್ಲಿ ಉಕ್ರೇನ್ ಬತ್ತಳಿಕೆಗೆ ಶಸ್ತ್ರಾಸ್ತ್ರಗಳನ್ನು ತುಂಬುತ್ತಲೇ ಇದೆ. ಇತ್ತ ಸ್ಟಾಲಿನ್ ಬಳಿಕ ರಷ್ಯಾ ಕಂಡ ಪ್ರಬಲ ನಾಯಕ ಎನಿಸಿಕೊಂಡಿರುವ ಪುಟಿನ್, ಮುಖ ಉಳಿಸಿಕೊಳ್ಳುವ ಮಾರ್ಗ ಗೋಚರಿಸದೆ ಯುದ್ಧದಿಂದ ಹಿಂದೆ ಸರಿಯಬಲ್ಲರೇ ಎಂಬ ಪ್ರಶ್ನೆ ಢಾಳಾಗಿದೆ. ಜಾಗತಿಕ ಸಂದರ್ಭವನ್ನು ಒಟ್ಟಾರೆ ನೋಡಿದಾಗ ಯುದ್ಧಕ್ಕೆ ಇದು ಕಾಲವಲ್ಲ, ಖರೆ. ಆದರೆ...?

ಚುರುಮುರಿ



ಲಾಸ್ಟ್ ಅನಾಲಿಸಿಸ್

• ಲಿಂಗರಾಜು ಡಿ.ಎಸ್.

‘**ಲಾಸ್ಟ್** ಬೆಂಚಲ್ಲಿ ಕೂತಾಗಲೇ ಕ್ರಿಯಾಶೀಲತೆ, ಖುಷಿ ಸಿಕ್ತದೆ. ಅದರಿಂದಲೇ ನಾನು ಓದಿನ ಹೊರತಾದ ಅನುಭವ ತಕಂದು ಮುಂದಕ್ಕೆ ಬಂದೆ ಅಂದದೆ ಬಸಣ್ಣ’ ಅಂತಂದ್ರು ತುರೇಮಣೆ.

‘ಸೀಎಂ ಆಗಬೇಕಾದ್ರೆ ಲಾಸ್ಟ್ ಬೆಂಚಲ್ಲಿ ಕೂತೋರಿಗೆ ಮಾತ್ರ ಸಾಧ್ಯ! ದೇಶ ಮುಂದಕ್ಕೆ ಬರಬೇಕಾದ್ರೆ ಇನ್ನು ಮುಂದೆ ಎಲ್ಲಾ ಸ್ಕೂಲು-ಕಾಲೇಜುಗಳಲ್ಲಿ ಲಾಸ್ಟ್ ಬೆಂಚ್ ಮಾತ್ರ ಇರಬಕು ಅಂತ ಸಚಿವರು ಆದೇಶ ಹೊಂಡುಸ್ತಾವ್ರಂತೆ!’ ಅಂತು ಯಂಟಪ್ಪಣ್ಣ.

‘ಹಂಗಾದ್ರೆ ಇನ್ನು ಮುಂದೆ ಯಾರೂ ನಮ್ಮನ್ನ ‘ಲಾರ್ಡ್ ಆಫ್ ದಿ ಲಾಸ್ಟ್ ಬೆಂಚ್’ ಅಂತ ಬೈಯ್ಯಂಗಿಲ್ಲ ಬುಡಿ!’ ಅಂತ ಖುಷಿಪಟ್ಟೆ.

‘ನೋಡ್ಲಾ, ನಾನು ಸಣ್ಣೋನಿದ್ದಾಗ ನಮ್ಮಪ್ಪ ಲಾಸ್ಟ್ ಪೆಗ್ಗು ಎಣ್ಣೆಬುಟ್ಕಂದು ಲಾಸ್ಟ್ ಬಸ್ಸಿಗೆ ಬತ್ತಿದ್ದ. ಅವುನ್ನ ಮನೆ ಸೇರ್ಸೋ ಲಾಸ್ಟ್ ರೆಸ್ಪಾನ್ಸಿಬಲಿಟಿ ನಂದಾಗಿತ್ತು’ ತುರೇಮಣೆ ನೆನಪಿನ ಲೋಕಕ್ಕೆ ಜಾರಿದರು.

‘ಲಾಸ್ಟ್ ಮ್ಯಾಚಿಗೆ ಮೊದಲೇ ಸೋತಿದ್ದರಿಂದ ಏಷ್ಯಾ ಕಪ್ ಸಿಗಲಿಲ್ಲ. ಅದಿರಲಿ ಲಾಸ್ಟ್ ರೆಸಾರ್ಟ್ ಅಂದ್ರೆ ಪಕ್ಷಾಂತರದ ಲೆಕ್ಕದೇಲಿ ಬಂದದಾ?’ ಚಂದ್ರು ಪ್ರಶ್ನೆ ಮಾಡಿದರು.

‘ಅದೇ ಥರಾ ಲಾಸ್ಟ್ ಕೊರೋನಾ ಕೇಸ್, ಲಾಸ್ಟ್ ದೌರ್ಜನ್ಯ, ರಸ್ತೇಲಿ ಲಾಸ್ಟ್ ಗುಂಡಿ, ಅಧಿಕಾರಿಗಳಿಗೆ ಲಾಸ್ಟ್ ಲಂಚ, ಶಾಸಕರ ಲಾಸ್ಟ್ ಕ್ಲಿಯರೆನ್ಸ್ ಸೇಲ್, ಲಾಸ್ಟ್ ಜೋಡೋ, ಲಾಸ್ಟ್ ಸ್ಪಂದನ, ಲಾಸ್ಟ್ ಧಾರೆ ಯಾವತ್ತಾದ್ರೂ ಲಾಸ್ಟಾದಾವಾ?’ ಅಂತ ಲಾಸ್ಟ್ ಕ್ವೆಸ್ಚನ್ ಹಾಕಿದೆ.

‘ಅಯ್ಯೋ ಬೊಡ್ಡಿಹೈದ್ನೆ, ಇವೆಲ್ಲ ಈಗಲೇ ಲಾಸ್ಟಾದ್ರೆ ರಾಜಕಾರಣಿಗಳಿಗೆ ಲಾಸ್ಟಿಗೆ ಏನು ಕೆಲಸ ಇದ್ದತ್ತು ಅನ್ನೋ ಲಾಸ್ಟ್ ಯೋಚನೇನೂ ಇಲ್ಲವಲ್ಲೋ ನಿನಗೆ!’ ಅಂತ ತುರೇಮಣೆ ಲಾಸ್ಟಿಗೆ ಮಕ್ಕುಗಿದರು. ಆದುದರಿಂದ ಲಾಸ್ಟ್ ಅನ್ನೋದು ನೆವರ್ ಲಾಸ್ಟ್ ವಿಚಾರ ಅನ್ನೋದು ಲಾಸ್ಟ್ ಮಿನಿಟಿಗೆ ನನಗೆ ಗೊತ್ತಾಯ್ತು.

ಸಂಗತ

ನೆಮ್ಮದಿಯ ನಾಳೆಗಳ ಹಂಬಲದಲ್ಲಿ...

ಈಗಿನ ಯುವಕರನ್ನು ಮುತ್ತಿಕೊಳ್ಳುತ್ತಿರುವ ಹಲವು ಬಗೆಯ ಪ್ರಭಾವಳಿಗಳಿಂದ ಬಿಡಿಸಿಕೊಳ್ಳುವ ದಾರಿ ಹುಡುಕಲೇಬೇಕಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಯೌವನವೊಂದು ಸಂದಿಗ್ಧ ಕಾಲ. ಪ್ರೌಢಹಂತ ದಾಟಿಯಾದ ಮೇಲೆ ಬದುಕು ಕಲಿಸುವ ಕುಲುಮೆಯಾಗಿ, ಸ್ಪರ್ಧಾಜಗತ್ತಿನ ಬೆಳಕಿಂಡಿಯಾಗಿ ನಿಲ್ಲಬೇಕಿರುವುದು ಕಾಲೇಜು ಶಿಕ್ಷಣ. ವಿದ್ಯಾರ್ಥಿಯ ಸರ್ವತೋಮುಖ ಪ್ರಗತಿಗೀಗ ವಿಪುಲ ಅವಕಾಶಗಳಿವೆ. ಜ್ಞಾನಾರ್ಜನೆ, ತಾತ್ವಿಕ ವಿಷಯಾಧ್ಯಯನಕ್ಕೆ ಸರ್ಕಾರ–ಸ್ವಯಂಸೇವಾ ಸಂಸ್ಥೆಗಳ ಪ್ರೇರಣೆ- ಪ್ರೋತ್ಸಾಹಗಳಿಗೇನೂ ಕೊರತೆಯಿಲ್ಲ. ಕೊಠಾರಿ ಶಿಕ್ಷಣ ಸುಧಾರಣಾ ಆಯೋಗವು ‘ದೇಶದ ಭವಿಷ್ಯವು ತರಗತಿಕೋಣೆಗಳಲ್ಲಿ ರೂಪುಗೊಳ್ಳುತ್ತದೆ...’ ಎಂದಿದೆ. ಆದರೆ, ಹದಗೊಂಡ ನೆಲದಲ್ಲಿ ಶ್ರಮಬಿತ್ತಿ ಯಶಸ್ಸಿನ ಫಸಲುಣ್ಣಬೇಕಾದ ಕೃಷಿಕನೀಗ ಅಲ್ಲಿ ಕಾಣೆಯಾಗುತ್ತಿದ್ದಾನೆ. ಅವನಲ್ಲಿ ಕಲಿಕೆಗಿಂತ ಅನ್ಯವಿಚಾರಗಳೇ ಮುಂಚೂಣಿಯಲ್ಲಿವೆ ಅನ್ನುವುದು ವಿದ್ಯಾರ್ಥಿಗಳ ಮೇಲಿನ ಆರೋಪ ಮತ್ತು ಸರಿಹೊತ್ತಿನ ಆತಂಕ.


ಯುವಮನಸುಗಳ ಅಸಹಜ ನಡೆಗೆ ಇರಬಹುದಾದ ಕಾರಣಗಳನ್ನು ವಿಭಿನ್ನ ಆಯಾಮಗಳಲ್ಲಿ ಚಿಕಿತ್ಸಕ ದೃಷ್ಟಿಯಲ್ಲಿ ಗ್ರಹಿಸಬೇಕಿದೆ. ಕೊರೊನಾ ಕಾಲದಲ್ಲಂತೂ, ತುರ್ತು ಎಂಬಂತೆ ಕೈಸೇರಿದ ಬೈಕು- ಮೊಬೈಲುಗಳ ಗೀಳು- ಮೋಜು ಹೆಚ್ಚಿ ಅಜಾಗರೂಕವಾಗಿ ಆಹ್ವಾನಿಸಿದ ಅಪಘಾತಗಳ ಚಿತ್ರ, ಸಂಯಮ ಕಳೆದುಕೊಂಡು ಮೊರೆಹೋದ ಆತ್ಮಹತ್ಯೆಗಳಲ್ಲಿ ಎಳೆಯ ಜೀವಗಳು ಅರಳುವ ಮೊದಲೇ ಅಂತ್ಯಗೊಂಡದ್ದು, ಮಹಾನಗರಗಳಿಗೆ ಸೀಮಿತವಾಗಿದ್ದ ಮಾದಕವಸ್ತು ಜಾಲ ಈಗೀಗ ನಾಡಿನೆಲ್ಲೆಡೆ ತನ್ನ ಕಬಂಧ ಬಾಹುವನ್ನು ವಿಸ್ತರಿಸುತ್ತಿರುವುದು ಅಪಾಯದ ಕಣ್ಸನ್ನೆಯೇ ಸರಿ. ಯುವಕರಲ್ಲಿ ಹೆಚ್ಚುತ್ತಿರುವ ಮಾದಕವ್ಯಸನ, ಸಿಗರೇಟ್- ಮದ್ಯ ಸೇವನೆ, ಮೊಬೈಲ್ ಗೇಮ್‌ನಲ್ಲಿಯ ಮೈಮರೆವು ದಿನಬೆಳಗಾದರೆ ಹೆತ್ತವರನ್ನು ಬೆಚ್ಚಿಬೀಳಿಸುತ್ತಿವೆ.

‘ವರ್ತನೆಯಲ್ಲಾಗುವ ಬದಲಾವಣೆಯೇ ಕಲಿಕೆ’ ಎನ್ನುತ್ತದೆ ಮನೋವಿಜ್ಞಾನ. ಆದರೆ ಕಲಿಕೆಯು ಬುದ್ಧಿ- ಭಾವಗಳ ಪರಿಧಿಯನ್ನು ವಿಸ್ತರಿಸುವ, ಜೀವನ ಕೌಶಲಗಳನ್ನು ಹರಿತಗೊಳಿಸುವ, ಅನ್ನದ ಮೂಲ ಹುಡುಕುವ, ಬದುಕಿನ ಮೌಲ್ಯಗಳನ್ನು ಒಳಗೊಳ್ಳುವ ವಿಷಯದಲ್ಲಿ ಸೋಲುತ್ತಿರುವುದು ಸ್ಪಷ್ಟ.

ಆದರ್ಶರಹಿತ ಸಮಾಜದಲ್ಲಿ ಹಣ, ಅಂತಸ್ತು, ಅಧಿಕಾರವೆಂಬುದು ಇನ್ನಿಲ್ಲದ ಮಾನ್ಯತೆ ಪಡೆಯುತ್ತಿರುವಾಗ, ಮಕ್ಕಳಿಗೆ ಬೆವರುಬಸಿವ ಅಪ್ಪನ ಬಿಡಿಗಾಸು ಕೇವಲವೆನಿಸಿ, ಸತ್ಯ-ನಿಷ್ಠೆಗಳು ಅಪ್ರಸ್ತುತವೆನಿಸುತ್ತವೆ. ಬೆರಳತುದಿಯಲ್ಲಿ ಬ್ರಹ್ಮಾಂಡವೇ ತೆರೆದುಕೊಳ್ಳುತ್ತಿರುವ ಹೊತ್ತಿನಲ್ಲಿ ತರಗತಿಯ ಪಾಠಗಳು ಸಪ್ಪೆಸಪ್ಪೆ. ಟಿ.ವಿ- ಮೊಬೈಲುಗಳ ಭ್ರಮಾಲೋಕ ವಿಹಾರದಲ್ಲಿ ಕುಟುಂಬದ ಸಂಬಂಧ- ಆಚರಣೆಗಳಲ್ಲೂ ಒಲವಿಲ್ಲ.

ವಿದ್ಯಾರ್ಥಿ ನೆಲೆಯಲ್ಲಿ, ತಿಳಿಗೊಳ ಕದಡುತ್ತಿರುವುದಕ್ಕೆ ಕಾರಣಗಳಿವೆ. ಯುವಮನಸುಗಳ ಎದುರಿಗೆ ಆದರ್ಶಗಳಿಲ್ಲ... ಕೇವಲ ಆದಾಯ ಪ್ರಮಾಣಪತ್ರಕ್ಕೆಂದು ಕಚೇರಿ ಮೆಟ್ಟಿಲೇರಿದ ಮೊದಲ ದಿನವೇ ಅವನ ಅಷ್ಟೂ ವರ್ಷದ ತರಗತಿಯ ನೀತಿಪಾಠಗಳನ್ನೆಲ್ಲ ಮಣ್ಣುಪಾಲು ಮಾಡಲು ಸಾಕಾಗುತ್ತದೆ. ಮೂಲಭೂತ ಕೋರಿಕೆಗಳಾದ ಆಹಾರ, ಆರೋಗ್ಯ ಮತ್ತು ವಿದ್ಯಾಕ್ಷೇತ್ರಗಳು ಲಾಭಕೋರರ ಕೈವಶವಾಗಿರುವ ಹೊತ್ತಿದು. ಹಲವೆಡೆ ಸರ್ವಸಂಗ ಪರಿತ್ಯಾಗಿಗಳು ಎನಿಸಿಕೊಂಡವರು ವೈಭೋಗಗಳಲ್ಲಿ ಮಿಂದೇಳುತ್ತ ಧಾರ್ಮಿಕತೆಯನ್ನು ಜಾತಿ- ಪಕ್ಷ ರಾಜಕಾರಣಕ್ಕೆ ಒತ್ತೆಯಿರಿಸಿಯಾಗಿದೆ. ಬಲಿಷ್ಠರಾದವರ ಭ್ರಷ್ಟಾಚಾರ, ಅನಾಚಾರಗಳ ಸುದ್ದಿಗಳು ಕುದಿಮನಸುಗಳಲ್ಲಿ ಭ್ರಮನಿರಸನ ತರಿಸುತ್ತವೆ.

ಒಳಗೊಳ್ಳುವಿಕೆಯ ತತ್ವದಡಿ ಹೃದಯ ಬೆಸೆಯಬೇಕಾದ ಹೊತ್ತಲ್ಲಿ ಜಾತಿ-ಧರ್ಮಗಳ ಸೂಕ್ಷ್ಮ ಸಂಗತಿಗಳನ್ನು ಕೆಣಕಿ, ಉದ್ರೇಕಿಸಿ ಬಿಸಿರಕ್ತಗಳ ಮನಸು ಒಡೆದು, ಬೀದಿಯಲ್ಲಿ ಬಡಿದಾಡಲು ಬಿಡುವ ರಾಜಕೀಯ ಹುನ್ನಾರಗಳು ಅಲ್ಲಲ್ಲಿ ಚಾಲ್ತಿಯಲ್ಲಿವೆ. ದೇಶನಾಯಕರು ಕರೆ ಕೊಡುವ ಆರೋಗ್ಯವಂತ ಸಮಸಮಾಜದ ಪರಿಕಲ್ಪನೆಯೇ ತಮಾಷೆ ಎನಿಸುತ್ತದೆ. ತಾರುಣ್ಯವೆಂದರೆ ಮೊದಲೇ ಗೊಂದಲದ ಗೂಡು. ಯುವಕರನ್ನು ಮುತ್ತಿಕೊಳ್ಳುತ್ತಿರುವ ಹಲವು ಬಗೆಯ ಪ್ರಭಾವಳಿಗಳಿಂದ ಬಿಡಿಸಿಕೊಳ್ಳುವ ದಾರಿ ಹುಡುಕಲೇಬೇಕಿದೆ.



ಎಲ್ಲ ಕಾಲಕ್ಕೂ ದೇಶದ ಆಸ್ತಿಯೂ ಶಕ್ತಿಯೂ ಆಗಿರುವ ಯುವಜನತೆ, ಬೆಳಕಿನ ಬೀಜಗಳಾಗಿ ಮೊಳೆಯಬೇಕು. ನಾಳಿನ ಭರವಸೆಗಳಾಗಿ ಬೆಳೆಯಬೇಕು ಎಂಬುದು ಆಶಯ. ಹಾಗಂತ ಯುವಸಮೂಹವನ್ನು ದೂರುತ್ತಾ ಕೂತರೆ ಪ್ರಯೋಜನವಿಲ್ಲ. ಸಮಸ್ಯೆಯ ತಾಯಿಬೇರು ಇರುವುದು ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ. ಬೆಳೆಯುವ ಭವಿಷ್ಯದ ಕುಡಿಗಳನ್ನು ‘ಹೊನ್ನ ಬಿತ್ತೇವ ಹೊಲಕೆಲ್ಲಾ...’ ಎಂಬಂತೆ ಆಸ್ಥೆಯಿಂದ ಪೊರೆಯಬೇಕು. ಸಮಾಜವೀಗ ಪ್ರಜ್ಞಾವಂತವಾಗಿ ಜಾತಿ, ಹಣ, ಸ್ವಾರ್ಥ, ಭ್ರಷ್ಟಾಚಾರ, ಬಾಹ್ಯ ಸೌಂದರ್ಯಗಳ ಬೆನ್ನುಬೀಳದೆ, ತನ್ನ ಸಂತತಿಯನ್ನು ತಿದ್ದುವ ನೈತಿಕತೆಯನ್ನು ಉಳಿಸಿಕೊಳ್ಳುವುದು ಮುಖ್ಯ.

ಪರೀಕ್ಷೆಯಲ್ಲಿನ ಅಂಕ ಗಳಿಕೆ, ಪ್ರಮಾಣಪತ್ರ, ದೊಡ್ಡ ಕಂಪನಿಗಳ ಕ್ಯಾಂಪಸ್ ಇಂಟರ್‌ವ್ಯೂ, ಲಂಡನ್-ನ್ಯೂಯಾರ್ಕುಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವಿಕೆಯಷ್ಟನ್ನೇ ಧ್ಯೇಯ ಮಾಡಿಕೊಡುವ ಅಪಾಯಕಾರಿ ವ್ಯವಸ್ಥೆಯನ್ನು ಆರಾಧಿಸುತ್ತಿದ್ದರೆ ಕಷ್ಟ. ಅಕ್ಷರಗಳ ಅರಿವನ್ನಷ್ಟೇ ಮಕ್ಕಳಿಗಿತ್ತರೆ ಸಾಲದು, ಸಂಸ್ಕಾರದ ತಳಹದಿಯ ಮೇಲೆ ಬದುಕು ಕಟ್ಟಿಕೊಡಬೇಕು. ಎಲ್ಲಕ್ಕಿಂತ ಮೊದಲು ಮನೆಮಂದಿಯ ನಡವಳಿಕೆಗಳೂ ಸರಿದಾರಿಯತ್ತ ಹೊರಳಬೇಕು. ತಮ್ಮದೇ ಆರೋಗ್ಯ, ನೆಮ್ಮದಿ, ಬಾಂಧವ್ಯ ಮರೆತು ಸಂಪತ್ತಿನ ಕ್ರೋಢೀಕರಣಕ್ಕೆ ಹಗಲಿರುಳು ಹೊಯ್ದಾಡುವ ಪೋಷಕವರ್ಗದ ಆತ್ಮಾವಲೋಕನಕ್ಕಿದು ಸಕಾಲ.

ವಾಚಕರ ವಾಣಿ

ಅದೇ ನಮ್ಮಲ್ಲಿ ಆಗಿದ್ದರೆ...?

ಇಂಗ್ಲೆಂಡ್‌ನ ಮಹಾರಾಣಿಯಾಗಿದ್ದ ಎಲಿಜಬೆತ್ ಅವರ ನಿಧನಾನಂತರ, ಅವರಿಗೆ ಅಂತಿಮ ನಮನ ಸಲ್ಲಿಸಲು ಲಂಡನ್ನಿನಲ್ಲಿ ಅಸಂಖ್ಯಾತ ಜನ ಮೈಲುಗಟ್ಟಲೆ ಸಾಲಿನಲ್ಲಿ ಹೋಗುತ್ತಿರುವ ದೃಶ್ಯಗಳನ್ನು ವಾಹಿನಿಗಳಲ್ಲಿ, ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಗಮನಾರ್ಹ ಸಂಗತಿ ಎಂದರೆ, ಅಂತಹ ಜನಸಂದಣಿಯಲ್ಲೂ ಯಾವುದೇ ಸದ್ದುಗದ್ದಲವಿಲ್ಲ, ಎಂತಹ ಶಿಸ್ತಿನ ನಡವಳಿಕೆಯನ್ನು ಪ್ರದರ್ಶಿಸುತ್ತಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಅದೇ ನಮ್ಮಲ್ಲಿ ಆಗಿದ್ದರೆ?

ಸ್ವಲ್ಪ ದಿನಗಳ ಮೊದಲು, ಅದೇ ದೇಶದಲ್ಲಿ, ನೂತನ ಪ್ರಧಾನ ಮಂತ್ರಿಯ ಹೆಸರು ಪ್ರಕಟವಾಗುವ ಹೊತ್ತಿಗಾಗಲೇ, ನಿರ್ಗಮಿತ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಪ್ರಧಾನಿಯ ಅಧಿಕೃತ ನಿವಾಸವನ್ನು ಸಂಪೂರ್ಣವಾಗಿ ಖಾಲಿ ಮಾಡಿ, ತಮ್ಮ ಉತ್ತರಾಧಿಕಾರಿ ಆ ಮನೆಯನ್ನು ಪ್ರವೇಶಿಸಲು ಅನುವು ಮಾಡಿಕೊಟ್ಟಿದ್ದರು. ಅದೇ ನಮ್ಮಲ್ಲಿ ಆಗಿದ್ದಿದ್ದರೆ?

ಎಂ.ಎಸ್.ರಘುನಾಥ್, ಬೆಂಗಳೂರು

ಅನುಭವ ಬಳಕೆಯಾಗಲಿ

ಲೋಕಾಯುಕ್ತರಾಗಿದ್ದಾಗ ಪ್ರಭಾವಿಗಳು ಮತ್ತು ರಾಜಕೀಯ ನಾಯಕರು ಬೆಚ್ಚುವಂತೆ ಮಾಡಿದ್ದ ಹೆಗ್ಗಳಿಕೆ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರದು. ಅವರೀಗ ನಿವೃತ್ತರಾಗಿದ್ದಾರೆ. ಆದರೂ ಅವರ ಅನುಭವವನ್ನು ಮತ್ತೆ ಲೋಕಾಯುಕ್ತಕ್ಕೆ ದೊರಕಿಸಲು ಸರ್ಕಾರ ಅವರನ್ನು ಗೌರವ ಸಲಹೆಗಾರರನ್ನಾಗಿ ನೇಮಿಸುವತ್ತ ಗಮನಹರಿಸಲಿ. ಭ್ರಷ್ಟತೆಯ ವಿಶ್ವರೂಪದ ತಳಸ್ಪರ್ಶಿ ಅರಿವು ಇರುವುದರಿಂದ, ಸೂಕ್ಷ್ಮ ಸಂದರ್ಭಗಳಲ್ಲಿ ಅವರ ಸಲಹೆ ಲೋಕಾಯುಕ್ತಕ್ಕೆ ನೆರವಾಗಬಲ್ಲದು.

ಸತ್ಯಬೋಧ, ಬೆಂಗಳೂರು

ಬ್ಯಾಂಕ್‌ಗೆ ವಂಚನೆ: ಫೋಟೊ ಅಳವಡಿಸಿ

ಕೆಲವು ಉದ್ಯಮಿಗಳು ಭಾರತೀಯ ಬ್ಯಾಂಕುಗಳಲ್ಲಿ ಸಾಲ ಪಡೆದು, ಅದನ್ನು ಕಟ್ಟದೆ ದೇಶ ಬಿಟ್ಟು ಓಡಿಹೋದ ಪ್ರಕರಣಗಳು ಗ್ರಾಹಕರ ಮನಸ್ಸಿನಲ್ಲಿ ಹಸಿಯಾಗಿಯೇ ಉಳಿದಿವೆ. ಬ್ಯಾಂಕ್‌ನ ಸಾಧನೆ, ಬಂದ ಲಾಭ, ಸಾಲ ವಸೂಲು ಮಾಡಿದ ಸಾಧನೆಯಂತಹ ಸಂಗತಿಗಳನ್ನು ಬ್ಯಾಂಕುಗಳು ಪ್ರಚುರಪಡಿಸುತ್ತವೆ. ಅದೇ ರೀತಿ, ಬ್ಯಾಂಕಿಗೆ ಮೋಸ ಮಾಡಿದವರ ಫೋಟೊಗಳನ್ನು ಬ್ಯಾಂಕ್‌ಗಳಲ್ಲಿ ಅಳವಡಿಸುವುದು ಒಳ್ಳೆಯದು. ಇಂಥವರಿಗೆಲ್ಲ ನಮ್ಮ ಬ್ಯಾಂಕುಗಳು ಸಾಲ ಕೊಟ್ಟು ಮೋಸ ಹೋಗಿವೆ ಎಂಬುದು ಮುಂದಿನ ಪೀಳಿಗೆಗೆ ಗೊತ್ತಾಗಬೇಕಲ್ಲವೇ?

ಧನ್ವಂತರಿ, ಮಾನ್ವಿ, ಬಳ್ಳಾರಿ

ಬೇಕು ಮೇಲುಸ್ತುವಾರಿ ಸಮಿತಿ

ಚಿತ್ರದುರ್ಗದ ಮುರುಘಾಮಠಕ್ಕೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತಾತ್ಕಾಲಿಕ ಮೇಲುಸ್ತುವಾರಿ ಸಮಿತಿ ರಚನೆ ಮಾಡಿ ದೈನಂದಿನ ಆಡಳಿತ ಸುಗಮವಾಗಿ ನಡೆಯುವಂತೆ ಕ್ರಮ ಕೈಗೊಳ್ಳಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಹೈಕೋರ್ಟ್ ಹಾಗೂ ಸರ್ಕಾರವನ್ನು ಕೋರಿರುವುದು ಸಕಾಲಿಕ ಮತ್ತು ಅತಿ ಅವಶ್ಯಕವಾದ ಕ್ರಮವಾಗಿದೆ. ಕರ್ನಾಟಕದ ಅಗ್ರಗಣ್ಯ ವೀರಶೈವ ಪೀಠಗಳಲ್ಲಿ ಒಂದಾದ, ಶ್ರದ್ಧಾಭಕ್ತಿಯ ಕೇಂದ್ರವಾದ ಮುರುಘಾಮಠ ಇಂದು ವಿವಾದದಲ್ಲಿ ಸಿಲುಕಿರುವುದರಿಂದ ನಮ್ಮಂತಹ ಸಮಾಜಬಾಂಧವರಿಗೆ ಅತೀವ ಮಾನಸಿಕ ಆಘಾತ ಆಗಿದೆ.

ಕೋಟ್ಯಂತರ ರೂಪಾಯಿ ಬೆಲೆಬಾಳುವ ಮಠದ ಆಸ್ತಿಯ ದುರುಪಯೋಗ ತಡೆಯಲು ಮೇಲುಸ್ತುವಾರಿ ಸಮಿತಿ ನೇಮಕ ಅತೀ ಶೀಘ್ರದಲ್ಲಿ ಆಗಬೇಕು. ಮುರುಘಾ ಶ್ರೀಗಳ ಬಂಧನ ಆದಾಗಿನಿಂದ ನಡೆದ ಹಣಕಾಸಿನ, ಆಸ್ತಿಪಾಸ್ತಿಯ ವ್ಯವಹಾರಗಳ ಬಗ್ಗೆ ಸೂಕ್ತ ತನಿಖೆ ಆಗಬೇಕು. ಇದು ಒಂದು ಸಮಾಜದ ಶ್ರದ್ಧೆ, ಭಕ್ತಿ, ನಂಬಿಕೆ ಮತ್ತು ಪಾವಿತ್ರ್ಯದ ಪ್ರಶ್ನೆಯಾಗಿದೆ.

ಶಾಂತವೀರ ಎಸ್., ಚಿತ್ರದುರ್ಗ

ಮನಃಸ್ಥಿತಿ ಬದಲಾಗಬೇಕಿದೆ

ಚಂಡೀಗಡ ವಿಶ್ವವಿದ್ಯಾಲಯದಲ್ಲಿನ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯೊಬ್ಬಳು ತನ್ನ ಸಹಪಾಠಿಗಳ ಆಕ್ಷೇಪಾರ್ಹವಾದ ವಿಡಿಯೊಗಳನ್ನು ಚಿತ್ರೀಕರಿಸಿ ಅವನ್ನು ತನ್ನ ಗೆಳೆಯನೊಂದಿಗೆ ಹಂಚಿಕೊಂಡಿದ್ದಾಳೆ ಎನ್ನಲಾದ ಸಂಗತಿ (ಪ್ರ.ವಾ., ಸೆ. 19) ಅತ್ಯಂತ ನಾಚಿಕೆಗೇಡಿನದು. ಇದನ್ನು ನೋಡಿದರೆ, ಭವಿಷ್ಯದ ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂದು ಆತಂಕ ಉಂಟಾಗುತ್ತದೆ. ಸಮಾಜದ ಮೌಲ್ಯಗಳು ಅಧಃಪತನಗೊಳ್ಳುತ್ತಿವೆ ಎಂಬುದಕ್ಕೆ ಇಂಥ ಪ್ರಕರಣಗಳು ನಿದರ್ಶನದಂತಿವೆ. ಇಂಥದ್ದಕ್ಕೆಲ್ಲ ಎಷ್ಟೇ ಕಠಿಣ ಕಾನೂನುಗಳನ್ನು ಜಾರಿಗೆ ತಂದರೂ ಪ್ರಯೋಜನವಿಲ್ಲ. ಮೊದಲು ನಮ್ಮ ಮನಃಸ್ಥಿತಿ ಬದಲಾಗಬೇಕು, ಇಂದ್ರಿಯಗಳ ಸ್ವಯಂ ನಿಗ್ರಹ ಮಾಡಿಕೊಂಡರೆ ಕಾನೂನಿನ ಅಗತ್ಯವೇನಿದೆ?

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಕಡಿಮೆ ಮತದಾನ ಬೇಸರದ ಸಂಗತಿ

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಲು 1,295 ಸದಸ್ಯರು ಅರ್ಹತೆ ಹೊಂದಿದ್ದರೂ 699 ಮಂದಿಯಷ್ಟೇ ಮತ ಚಲಾಯಿಸಿರುವುದು ಬೇಸರದ ಸಂಗತಿ. ಅದರಲ್ಲಿ ಬೆಂಗಳೂರಿನಲ್ಲಿ ಚಲಾವಣೆಯಾದ 275 ಮತಗಳಲ್ಲಿ 7 ಮತ್ತು 424 ಅಂಚೆಮತಗಳಲ್ಲಿ 37 ಮತಗಳು ತಿರಸ್ಕೃತಗೊಂಡಿವೆ.

ಲೇಖಕಿಯರು, ಸಾಹಿತಿಗಳು ಸಮಾಜದ ಕನ್ನಡಿಯಿದ್ದಂತೆ ಎಂಬ ಮಾತೊಂದಿದೆ. ಇಂತಹವರ ಮತಗಳೇ ತಿರಸ್ಕೃತಗೊಂಡರೆ ಹೇಗೆ? ಸಮಾಜವನ್ನು ಎಚ್ಚರಿಸಬೇಕಾದ ಸಾಹಿತಿಗಳಿಂದ ಇಂತಹ ನಡೆ ಸಾಧುವಲ್ಲ. ಇದರ ಜೊತೆಗೆ ಎಲ್ಲ ಸದಸ್ಯರೂ ಮತದಾನ ಮಾಡಬೇಕಿತ್ತು. ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಎಲ್ಲ ಸಂಸ್ಥೆಗಳ ಸದಸ್ಯರೂ ಕಡ್ಡಾಯವಾಗಿ ಮತದಾನ ಮಾಡುವಂತಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ಅಸಹಕಾರ ಜಾರಿಗೆ ಬಾರದ ಸಿಂಹ ಸ್ಥಳಾಂತರ

ಗುಜರಾತ್‌ನ ಗಿರ್ ಪ್ರದೇಶದಲ್ಲಿ ಇರುವ ಏಷ್ಯಾ ಸಿಂಹಗಳನ್ನು ಮಧ್ಯ ಪ್ರದೇಶದ ಕುನೊ ಅಭಯಾರಣ್ಯಕ್ಕೆ (ಈಗಿನ ಕುನೊ ರಾಷ್ಟ್ರೀಯ ಉದ್ಯಾನ) ಮರುಪರಿಚಯಿಸುವ ಯೋಜನೆ 1986ರಲ್ಲೇ ಆರಂಭವಾಗಿತ್ತು. ಯೋಜನೆ ಪ್ರಕಾರ ಸಿಂಹಗಳ ಮರುಪರಿಚಯಕ್ಕೆ ಕುನೊ ಅಭಯಾರಣ್ಯವನ್ನು ಸಿದ್ಧಪಡಿಸುವ ಕಾರ್ಯವೂ ಪೂರ್ಣಗೊಂಡಿತ್ತು. ಈ ಯೋಜನೆಗೆ ಆರಂಭದಿಂದಲೂ ಗುಜರಾತ್ ಸರ್ಕಾರ ಪ್ರಬಲ ಆಕ್ಷೇಪ ತೋರಿತ್ತು. ಅಂದು ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ನೇತೃತ್ವದ ರಾಜ್ಯ ಸರ್ಕಾರವು ಸಿಂಹಗಳನ್ನು ಮಧ್ಯ ಪ್ರದೇಶಕ್ಕೆ ಕಳುಹಿಸಲು ಸಾಧ್ಯವೇ ಇಲ್ಲ ಎಂದು ಹೇಳಿತ್ತು. ಆದರೆ, ಸಿಂಹಗಳನ್ನು ಮಧ್ಯ ಪ್ರದೇಶಕ್ಕೆ ಕಳುಹಿಸಿ ಎಂದು ಸುಪ್ರೀಂ ಕೋರ್ಟ್ 2013ರಲ್ಲಿ ಆದೇಶಿಸಿತ್ತು. 2022ರಲ್ಲಿಯೂ ಗುಜರಾತ್ ಸರ್ಕಾರವು ಸಿಂಹಗಳನ್ನು ಕಳುಹಿಸಲು ಮನಸ್ಸು ಮಾಡುತ್ತಿಲ್ಲ. ಇದರ ಮಧ್ಯೆಯೇ ಪ್ರಧಾನಿ ನರೇಂದ್ರ ಮೋದಿ 2020ರ ಆಗಸ್ಟ್‌ನಲ್ಲಿ 'ಪ್ರಾಜೆಕ್ಟ್ ಲಯನ್'ಗೆ ಚಾಲನೆ ನೀಡಿದರು. ಮಧ್ಯಪ್ರದೇಶಕ್ಕೆ ಸಿಂಹಗಳನ್ನು ಕಳುಹಿಸುವ ಪ್ರಸ್ತಾವದ ಉಲ್ಲೇಖವೇ ಈ ಯೋಜನೆಯಲ್ಲಿ ಇಲ್ಲ. ಕೆಲವು ಸಿಂಹಗಳನ್ನು ಗುಜರಾತ್‌ನಿಂದ ಹೊರಗೆ ಕಳುಹಿಸುವುದಕ್ಕೆ ನರೇಂದ್ರ ಮೋದಿ ನೇತೃತ್ವದ ಗುಜರಾತ್ ಸರ್ಕಾರ ಸಿದ್ಧವಿರಲಿಲ್ಲ. ಈಗ ಅದೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಪ್ರಾಜೆಕ್ಟ್ ಲಯನ್ ಯೋಜನೆ ಆರಂಭಿಸುವ ಮೂಲಕ, 35 ವರ್ಷಗಳ ಮೂಲ ಯೋಜನೆಯನ್ನು ಕಡೆಗಣಿಸಿದೆ.

ದಶಕಗಳ ಪ್ರಗತಿ ಕಡೆಗಣನೆ

1957: 18ನೇ ಶತಮಾನದವರೆಗೂ ಮಧ್ಯಪ್ರದೇಶದ ಕುನೊ ಪ್ರದೇಶದಲ್ಲಿ ಏಷ್ಯಾ ಸಿಂಹಗಳಿದ್ದವು ಎನ್ನುತ್ತದೆ ಗುಜರಾತ್ ಅರಣ್ಯ ಇಲಾಖೆಯ ದಾಖಲೆಗಳು. ಆನಂತರದಲ್ಲಿ ವಿವಿಧ ಕಾರಣಗಳಿಂದ ಮಧ್ಯಪ್ರದೇಶದಿಂದ ಏಷ್ಯಾ ಸಿಂಹಗಳು ನಾಮಾವಶೇಷವಾಗಿವೆ. ಹೀಗಾಗಿ ಸಿಂಹಗಳನ್ನು ಮರುಪರಿಚಯಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಲೇ ಇದ್ದವು. 1957ರಲ್ಲಿ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಕ್ಕೆ ಗುಜರಾತ್‌ನ ಗಿರ್ ಪ್ರದೇಶದಿಂದ ಹಲವು ಸಿಂಹಗಳನ್ನು ಮರುಪರಿಚಯಿಸಲಾಗಿತ್ತು. ಆದರೆ ಬೇಟೆಯಾಡಿ ಅವನ್ನೆಲ್ಲ ಕೊಲ್ಲಲಾಗಿತ್ತು.

1986: ಗುಜರಾತ್‌ನ ಸೀಮಿತ ಪ್ರದೇಶದಲ್ಲಿ ಮಾತ್ರ ಏಷ್ಯಾ ಸಿಂಹಗಳು ಉಳಿದಿವೆ. ಯಾವುದಾದರೂ ಸಾಂಕ್ರಾಮಿಕ, ನೈಸರ್ಗಿಕ ವಿಕೋಪ ನಡೆದರೆ ಎಲ್ಲಾ ಸಿಂಹಗಳೂ ನಾಶವಾಗುವ ಅಪಾಯವಿದೆ ಎಂದು 1986ರಲ್ಲಿ ಕೇಂದ್ರ ಅರಣ್ಯ ಸಚಿವಾಲಯದ ಭಾರತೀಯ ವನ್ಯಜೀವಿ ಸಂಸ್ಥೆ (ಡಬ್ಲ್ಯುಐಐ) ಕಳವಳ ವ್ಯಕ್ತಪಡಿಸಿತ್ತು. ಅಂತಹ ಸಂದರ್ಭಗಳು ಎದುರಾದರೆ ಏಷ್ಯಾ ಸಿಂಹಗಳನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಗುತ್ತದೆ. ಅಂತಹ ಅಪಾಯವನ್ನು ತಪ್ಪಿಸುವ ಸಲುವಾಗಿ, ಗಿರ್ ಮತ್ತು ಗುಜರಾತ್‌ನ ಹೊರವಲಯದಲ್ಲಿ ಸಿಂಹಗಳಿಗೆ ಮತ್ತೊಂದು ನೈಸರ್ಗಿಕ ಆವಾಸವನ್ನು ಸಿದ್ಧಪಡಿಸಬೇಕು ಎಂದು ಡಬ್ಲ್ಯುಐಐ ಹೇಳಿತ್ತು.

1993: ಸಿಂಹಗಳಿಗೆ ಎರಡನೇ ಆವಾಸವನ್ನು ಸಿದ್ಧಪಡಿಸುವ ಮತ್ತು ಸಿಂಹಗಳನ್ನು ಅಲ್ಲಿಗೆ ಬಿಡುವ ಸಂಬಂಧ ಕಾರ್ಯಸಾಧ್ಯತಾ ಅಧ್ಯಯನಗಳು ನಡೆದಿದ್ದವು. ಡಬ್ಲ್ಯುಐಐ ಅಧೀನದಲ್ಲಿ ನಡೆದಿದ್ದ ಅಂತಹ ಅಧ್ಯಯನದ ವರದಿಯನ್ನು 1993ರ ಅಕ್ಟೋಬರ್‌ನಲ್ಲಿ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು. ಆ ಪ್ರಕಾರ ಸಿಂಹಗಳನ್ನು ಎರಡನೇ ಆವಾಸಕ್ಕೆ ಬಿಡುವ ಯೋಜನೆಯನ್ನು ಸಿದ್ಧಪಡಿಸಲಾಗಿತ್ತು. ಯೋಜನೆಯು ಒಟ್ಟು 20 ವರ್ಷಗಳದ್ದಾಗಿತ್ತು. ಮೂರು ಹಂತದಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸಿದ್ಧತೆ ನಡೆಸಲಾಗಿತ್ತು.

- **1995-2000:** ಸಂಭಾವ್ಯ ಎರಡನೇ ಆವಾಸದ ಪ್ರದೇಶದಲ್ಲಿರುವ ಹಳ್ಳಿಗಳ ಸ್ಥಳಾಂತರ
- **2000-2005:** ಅರಣ್ಯ ಪ್ರದೇಶಕ್ಕೆ ಬೇಲಿ ನಿರ್ಮಿಸುವುದು, ಸಿಂಹಗಳನ್ನು ಅರಣ್ಯಕ್ಕೆ ಬಿಡುವುದು ಮತ್ತು ಮೇಲ್ವಿಚಾರಣೆ. ಅಧ್ಯಯನ
- **2005-2015:** ಸಿಂಹಗಳನ್ನು ಒಳಗೊಂಡು, ಸಿಂಹದ ಆವಾಸ ಸ್ಥಾನದ ಪರಿಸರ ಅಭಿವೃದ್ಧಿ



ಚೀತಾಗಿಂತ ಮೊದಲು ಸಿಂಹ ಬರಲಿ ಎಂದಿತ್ತು ಸುಪ್ರೀಂ ಕೋರ್ಟ್

ಕುನೊ ಪ್ರದೇಶಕ್ಕೆ ಸಿಂಹಗಳನ್ನು ಬಿಡುವುದಕ್ಕೂ ಮುನ್ನ ಚೀತಾಗಳನ್ನು ಬಿಡುವುದಕ್ಕೆ ಸುಪ್ರೀಂ ಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. 'ಆಫ್ರಿಕಾ ಚೀತಾಗಳಿಗೆ ಕುನೊ ಪ್ರದೇಶ ಯಾವತ್ತೂ ಆವಾಸ-ವಾಗಿರಲಿಲ್ಲ. ಇಲ್ಲಿನ ಚೀತಾ ನಾಶವಾಗಿದೆ. ಆದರೆ ಗಿರ್‌ನಲ್ಲಿರುವ ಏಷ್ಯಾ ಸಿಂಹಗಳು ಈ ಹಿಂದೆ ಕುನೊ ಪ್ರದೇಶದಲ್ಲೂ ಇದ್ದವು ಎಂಬುದು ಸಾಬೀತಾಗಿದೆ. ಸಿಂಹಗಳನ್ನು ರಕ್ಷಿಸುವುದು ಆದ್ಯತೆಯಾಗಬೇಕು. ಮೊದಲು ಸಿಂಹಗಳನ್ನು ಅಲ್ಲಿಗೆ ಬಿಡಿ' ಎಂದು ಸುಪ್ರೀಂ ಕೋರ್ಟ್ 2013ರ ಏಪ್ರಿಲ್‌ನಲ್ಲಿ ನೀಡಿದ್ದ ತೀರ್ಪಿನಲ್ಲಿ ಉಲ್ಲೇಖಿಸಿತ್ತು. ಆದರೆ, ಕೇಂದ್ರ ಸರ್ಕಾರವು ಸಿಂಹಗಳನ್ನು ಕುನೊಗೆ ಬಿಡುವ ಯೋಜನೆಯನ್ನು ಕಡೆಗಣಿಸಿತು ಮತ್ತು ಚೀತಾಗಳನ್ನೇ ಮೊದಲು ಕುನೊಗೆ ಬಿಟ್ಟಿತು.

ಸಿಂಹಗಳನ್ನು ಬಿಟ್ಟುಕೊಡಲು ನರೇಂದ್ರ ಮೋದಿ ಅವರಿಗೆ ಮನಸ್ಸಿಲ್ಲ. ಅದನ್ನು ಮರೆಮಾಚುವ ಉದ್ದೇಶದಿಂದಲೇ ಚೀತಾಗಳನ್ನು ತಂದು ಕುನೊಗೆ ಬಿಡಲಾಗಿದೆ ಎಂದು ಸಮಾಜವಾದಿ ಪಕ್ಷ, ಕಾಂಗ್ರೆಸ್ ಟೀಕಿಸಿವೆ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, 'ಕುನೊದಲ್ಲಿ ಸಿಂಹಗಳು ಗರ್ಜಿಸುತ್ತವೆ ಎಂದುಕೊಂಡರೆ, ಚೀತಾಗಳು ಮಿಯಾಮ್ ಎಂದವು' ಎಂದು ಲೇವಡಿ ಮಾಡಿದ್ದಾರೆ.

1995-2005: ಈ ಯೋಜನೆಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲಾಯಿತು. ಡಬ್ಲ್ಯುಐಐ ಸೂಚಿಸಿದ್ದ ಕುನೊ ಅಭಯಾರಣ್ಯ ಪ್ರದೇಶದಲ್ಲಿದ್ದ 24 ಹಳ್ಳಿಗಳ ಸ್ಥಳಾಂತರ. 1,554 ಕುಟುಂಬಗಳಿಗೆ ಪರಿಹಾರ ನೀಡಿ, ಅರಣ್ಯ ಪ್ರದೇಶದ ಹೊರವಲಯದಲ್ಲಿ ಪುನರ್ವಸತಿ ಕಲ್ಪಿಸಲಾಯಿತು. ಆದರೆ, ಸಿಂಹಗಳನ್ನು ಸ್ಥಳಾಂತರಿಸಲು ಗುಜರಾತ್ ಸರ್ಕಾರದಿಂದ ನಕಾರ. ಇದರಿಂದ ಯೋಜನೆ ನನೆಗುದಿಗೆ ಬಿದ್ದಿತು.

2006: ಗುಜರಾತ್ ಸರ್ಕಾರವು ಸಿಂಹಗಳನ್ನು ನೀಡದೇ ಇರುವ ಬಗ್ಗೆ ಕೇಂದ್ರ ಅರಣ್ಯ ಸಚಿವಾಲಯವು, ಗುಜರಾತ್‌ನ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿತ್ತು. 'ಸಂಬಂಧಿತ ಇಲಾಖೆಯಲ್ಲಿ ಈ ಕಾರ್ಯ ಪ್ರಗತಿಯಲ್ಲಿದೆ' ಎಂದಷ್ಟೇ ಮುಖ್ಯಮಂತ್ರಿಗಳ ಕಚೇರಿಯು ಉತ್ತರ ಬರೆದಿತ್ತು. ಅದರ ಬೆನ್ನಲ್ಲೇ ಡಬ್ಲ್ಯುಡಬ್ಲ್ಯುಎಫ್ (ವರ್ಲ್ಡ್ ವೈಲ್ಡ್‌ಲೈಫ್ ಫಂಡ್), ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು. ಯೋಜನೆ ತ್ವರಿತ ಜಾರಿಗೆ ಸೂಚನೆ ನೀಡಿ ಎಂದು ಡಬ್ಲ್ಯುಡಬ್ಲ್ಯುಎಫ್ ಮನವಿ ಸಲ್ಲಿಸಿತ್ತು.

2007: ಅರ್ಜಿಯ ವಿಚಾರಣೆ ಆರಂಭ. 'ಗುಜರಾತ್ ಸರ್ಕಾರ ಒಪ್ಪುತ್ತಿಲ್ಲವಾದ ಕಾರಣ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತಿಲ್ಲ' ಎಂದು ಕೇಂದ್ರ ಅರಣ್ಯ ಸಚಿವಾಲಯದಿಂದ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ. ಗುಜರಾತ್ ಸರ್ಕಾರದ ಆಕ್ಷೇಪಗಳನ್ನೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಕೇಂದ್ರ ಸರ್ಕಾರ. ಗುಜರಾತ್ ಸರ್ಕಾರದ ಆಕ್ಷೇಪಗಳು ಮತ್ತು ಸಿಂಹಗಳನ್ನು ಕುನೊಗೆ ಬಿಡುವ ಯೋಜನೆಯ ಬಗ್ಗೆ ಸಮಾಲೋಚನೆ ನಡೆಸಿ ವರದಿ ನೀಡಿ ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಸುಪ್ರೀಂ ಕೋರ್ಟ್‌ನಿಂದ ಸೂಚನೆ. 2008ರಲ್ಲಿ ಎಲ್ಲರ ವಾದಗಳನ್ನು ಆಲಿಸಿ ಹೊಸದಾಗಿ ವರದಿ ಸಿದ್ಧಪಡಿಸಲು ವನ್ಯಜೀವಿ ಮಂಡಳಿಗೆ ಮತ್ತೆ ಸೂಚನೆ ನೀಡಿದ ಸುಪ್ರೀಂ ಕೋರ್ಟ್.

2009-10: ವನ್ಯಜೀವಿ ಮಂಡಳಿಯು ಸುಪ್ರೀಂ ಕೋರ್ಟ್‌ಗೆ ತನ್ನ ವರದಿಯನ್ನು ಸಲ್ಲಿಸಿತ್ತು. ಗುಜರಾತ್ ಸರ್ಕಾರವು ಎತ್ತಿರುವ ಆಕ್ಷೇಪಗಳಿಗೆ ಆಧಾರವಿಲ್ಲ. ಸಿಂಹಗಳಿಗೆ ಗುಜರಾತ್‌ನಿಂದ ಹೊರಗೆ ಎರಡನೇ ಆವಾಸವನ್ನು ಅಭಿವೃದ್ಧಿಪಡಿಸುವುದು ಮತ್ತು ಅವುಗಳನ್ನು ಅಲ್ಲಿಗೆ ಬಿಡುವುದು ಅತ್ಯಗತ್ಯ ಎಂದು ಮಂಡಳಿಯು ಶಿಫಾರಸು ಮಾಡಿತ್ತು. ಅದರ ಬೆನ್ನಲ್ಲೇ ಕೇಂದ್ರ ಅರಣ್ಯ ಸಚಿವಾಲಯವೂ ಸಿಂಹಗಳನ್ನು ಕುನೊಗೆ ಬಿಡಬೇಕು ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸಿತು. ಆದರೆ, ಗುಜರಾತ್ ಸರ್ಕಾರ ಮತ್ತೆ ಆಕ್ಷೇಪ ಸಲ್ಲಿಸಿತು. 'ರಾಜ್ಯ ವನ್ಯಜೀವಿ ಮಂಡಳಿ ಎದುರು ಈ ಪ್ರಸ್ತಾಪವನ್ನು ಇರಿಸಿಲ್ಲ' ಎಂದು ಹೇಳಿತು. ಗುಜರಾತ್ ಸರ್ಕಾರದ ಆಕ್ಷೇಪವನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿತು.

2012: ಗುಜರಾತ್ ವನ್ಯಜೀವಿ ಮಂಡಳಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ವರದಿಯನ್ನು ನೀಡಲಾಯಿತು. ವರದಿಯ ಶಿಫಾರಸುಗಳನ್ನು ಗುಜರಾತ್ ವನ್ಯಜೀವಿ ಮಂಡಳಿ ನಿರಾಕರಿಸಿತು. ಸಿಂಹಗಳನ್ನು ಕುನೊಗೆ ಕಳುಹಿಸುವ ಯೋಜನೆ ಕಾರ್ಯಸಾಧುವಲ್ಲ ಎಂದು ಹೇಳಿತು.

2013: ಏಪ್ರಿಲ್ 15ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತು. ಗುಜರಾತ್ ಸರ್ಕಾರ ಮತ್ತು ಗುಜರಾತ್ ವನ್ಯಜೀವಿ ಮಂಡಳಿಯ ಆಕ್ಷೇಪಗಳನ್ನು ಸುಪ್ರೀಂ ಕೋರ್ಟ್ ಸಾರಾಸಗಟಾಗಿ ತಳ್ಳಿಹಾಕಿತು. 'ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಶಿಫಾರಸುಗಳನ್ನು ಮತ್ತು ಸಿಂಹಗಳಿಗೆ ಎರಡನೇ ಆವಾಸವನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ಪೂರ್ಣ ಜಾರಿಗೆ ತನ್ನಿ' ಎಂದು ಆದೇಶಿಸಿತು. ಮುಂದಿನ ಆರು ತಿಂಗಳಲ್ಲಿ ಸಿಂಹಗಳನ್ನು ಕುನೊಗೆ ಬಿಡಬೇಕು ಎಂದು ಗುಜರಾತ್ ಸರ್ಕಾರಕ್ಕೆ ಸೂಚಿಸಿತು. ಈ ಆದೇಶವನ್ನು ಮರುಪರಿಗಣಿಸಿ ಎಂದು ಗುಜರಾತ್ ಸರ್ಕಾರ ಅರ್ಜಿ ಸಲ್ಲಿಸಿತು. ಆ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಮಾಡಿತು. ಆದೇಶವನ್ನು ಯಥಾವತ್ ಜಾರಿಗೆ ತನ್ನಿ ಎಂದು ಆದೇಶಿಸಿತು.

ಗುಜರಾತ್–ಮಧ್ಯಪ್ರದೇಶ ನಡುವೆ ರಾಜಕೀಯ ಜಟಾಪಟಿ

ಗುಜರಾತ್‌ನ ಗಿರ್ ಪ್ರದೇಶದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಏಷ್ಯಾ ಸಿಂಹಗಳನ್ನು ಒಯ್ದು ಬಿಡುವ ಯೋಜನೆಯಲ್ಲಿ ಕಳೆದ 25 ವರ್ಷಗಳಿಂದ ರಾಜಕೀಯ ಮೇಲಾಟ ನಡೆದಿದೆ. ಹೀಗಾಗಿ, ಬೇರೊಂದು ರಾಜ್ಯದಲ್ಲಿ ಸಿಂಹಗಳಿಗೆ ಎರಡನೇ ಆವಾಸ ಸ್ಥಾನ ಕಲ್ಪಿಸುವ ಯೋಜನೆ ಕುಂಟುತ್ತಿದೆ.

ಗಿರ್ ಪ್ರದೇಶದಿಂದ ಸಿಂಹಗಳನ್ನು ಕುನೊ ಉದ್ಯಾನಕ್ಕೆ ಕಳುಹಿಸಬೇಕು ಎಂದು 2013ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಮಹತ್ವದ ಆದೇಶವು ಎರಡೂ ರಾಜ್ಯಗಳ ನಡುವೆ ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಅಂದು, ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು. ಈಗಿನ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರೇ ಅಂದೂ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಎರಡೂ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳೇ ಅಧಿಕಾರದಲ್ಲಿದ್ದರೂ, ಸಿಂಹಗಳನ್ನು ಸ್ಥಳಾಂತರ ಮಾಡುವ ಯೋಜನೆ ವಿಚಾರದಲ್ಲಿ ಜಟಾಪಟಿಗೆ ಇಳಿದಿದ್ದು ಸೋಜಿಗ.



ಸುಪ್ರೀಂ ಕೋರ್ಟ್ ಆದೇಶವಿದ್ದರೂ ಸಿಂಹಗಳನ್ನು ಮಧ್ಯಪ್ರದೇಶಕ್ಕೆ ಗುಜರಾತ್ ಸರ್ಕಾರವು ಕಳಿಸಿಲ್ಲ. ಕಳುಹಿಸದೇ ಇರುವುದಕ್ಕೆ ಇರುವ ಆಕ್ಷೇಪಗಳನ್ನು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ರೂಪದಲ್ಲಿ ಗುಜರಾತ್ ಸಲ್ಲಿಸಿತ್ತು. ಗಿರ್ ಪ್ರದೇಶಕ್ಕೆ ಹೋಲಿಸಿದರೆ, ಕುನೊ ರಾಷ್ಟ್ರೀಯ ಉದ್ಯಾನವು ಸಿಂಹಗಳಿಗೆ ಸೂಕ್ತವಾದ ಆವಾಸ ಸ್ಥಾನವಲ್ಲ ಎಂಬುದು ಅದರ ಒಂದು ವಾದ. ಕುನೊ ಉದ್ಯಾನದಲ್ಲಿ ಸಿಂಹಗಳಿಗೆಂದು ಗುರುತಿಸಲಾಗಿರುವ ಪ್ರದೇಶದ ವ್ಯಾಪ್ತಿ ಕಡಿಮೆಯಿದ್ದು, ಅಲ್ಲಿ ಅವುಗಳ ಸಂತತಿ ಬೆಳೆಯಲು ಸಾಧ್ಯವಾಗುವ ವಾತಾವರಣ ಇಲ್ಲ ಎಂಬ ವಾದವನ್ನೂ ಗುಜರಾತ್ ಮುಂದಿಟ್ಟಿತ್ತು. 'ಗಿರ್ ಪ್ರದೇಶದಲ್ಲಿ ಸಿಂಹಗಳ ಸಂತತಿ ದೊಡ್ಡ ಮಟ್ಟದಲ್ಲಿ ಹೆಚ್ಚಳವಾಗಲು ಗುಜರಾತ್ ಜನರ ಬೆಂಬಲ, ವನ್ಯಜೀವಿಗಳ ಬಗೆಗಿನ ಕಾಳಜಿ ಹಾಗೂ ಅವುಗಳ ಬಗೆಗಿನ ಹೆಮ್ಮೆಯೂ ಕಾರಣ. ಆದರೆ, ಮಧ್ಯಪ್ರದೇಶದಲ್ಲಿ ಸಿಂಹಗಳು ಬದುಕುಳಿಯಲು ಇಂತಹ ಯಾವುದೇ ವಾತಾವರಣ ಇಲ್ಲ. ಹುಲಿಗಳ ಆವಾಸ ಸ್ಥಾನವಾಗಿರುವ ಮಧ್ಯಪ್ರದೇಶದಲ್ಲಿ ಪ್ರಾಣಿಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ನೂರಾರು ಹುಲಿಗಳು ಬೇಟೆಗೆ ಬಲಿಯಾಗಿವೆ. ಹೀಗಿರುವಾಗ ಸಿಂಹಗಳೂ ಬೇಟೆಗೆ ಬಲಿಯಾಗುವುದಿಲ್ಲ ಎಂದು ಹೇಳಲಾಗದು' ಎಂಬ ವಾದವನ್ನೂ ಗುಜರಾತ್ ಮುಂದಿಟ್ಟಿತ್ತು. ಗುಜರಾತ್‌ನ ಬರಡಾ ಅಭಯಾರಣ್ಯದ ಪರಿಸರವು ಗಿರ್ ವ್ಯಾಪ್ತಿಯಲ್ಲಿದ್ದು, ಅಲ್ಲಿಗೆ ಸಿಂಹಗಳನ್ನು ಬಿಡುವುದರ ಪರವಾಗಿ ಗುಜರಾತ್ ಇದೆಯೇ ಹೊರತು ಬೇರೆ ಯಾವ ರಾಜ್ಯಕ್ಕೂ ಅವುಗಳನ್ನು ಕಳುಹಿಸುವ ಉದ್ದೇಶ ಇಲ್ಲ ಎಂಬುದು ರಾಜ್ಯ ಸರ್ಕಾರದ ವಾದದಿಂದ ತಿಳಿಯುತ್ತದೆ.

ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಚೀತಾ ಹಾಗೂ ಸಿಂಹಗಳನ್ನು ಬಿಡುವ ಎರಡೂ ಯೋಜನೆಗಳಿವೆ. ಸಿಂಹಗಳನ್ನು ಬಿಡುವ ಉದ್ದೇಶದಿಂದ ಕುನೊ ಉದ್ಯಾನದ ಗಡಿಯಲ್ಲಿದ್ದ ಗ್ರಾಮಸ್ಥರನ್ನು ತೆರವು ಮಾಡಿ, ಅವರಿಗೆ ಪರಿಹಾರವನ್ನೂ ನೀಡಲಾಗಿತ್ತು. ಸಿಂಹಗಳ ಬರುವಿಕೆಗೆ ಕಾಯುತ್ತಿದ್ದ ಕುನೊ ಉದ್ಯಾನಕ್ಕೆ ಸೆ.17ರಂದು ಚೀತಾಗಳು ಪ್ರವೇಶ ಪಡೆದವು. ಪ್ರಧಾನಿ ನರೇಂದ್ರ ಮೋದಿ ತಮ್ಮ ಜನ್ಮದಿನದಂದು ಚೀತಾಗಳನ್ನು ಭಾರತಕ್ಕೆ ಮರಳಿ ತಂದರು. ಸಿಂಹಗಳಿಗಿಂತ ಮೊದಲು ಚೀತಾಗಳು ಕುನೊ ಉದ್ಯಾನ ಪ್ರವೇಶಿಸಿದವು. 'ಪ್ರಧಾನಿ ಜನ್ಮದಿನದಂದೇ ಚೀತಾಗಳು ರಾಜ್ಯದ ಅರಣ್ಯ ಪ್ರವೇಶಿಸಿವೆ. ಮಧ್ಯಪ್ರದೇಶಕ್ಕೆ ಇದಕ್ಕಿಂತ ದೊಡ್ಡ ಉಡುಗೊರೆ ಬೇರೆ ಏನಿರಲು ಸಾಧ್ಯ' ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ಮುಖ್ಯಮಂತ್ರಿ ಮೋದಿ ಜೊತೆ ಸಿಂಹಗಳ ಸ್ಥಳಾಂತರ ವಿಚಾರವಾಗಿ ಅಂದು ಜಟಾಪಟಿಗೆ ಇಳಿದಿದ್ದ ಚೌಹಾಣ್, ಈಗ ಪ್ರಧಾನಿ ಹುದ್ದೆಯಲ್ಲಿರುವ ಮೋದಿ ಅವರು ಚೀತಾಗಳನ್ನು ಕರೆತಂದಿದ್ದನ್ನು ಪ್ರಶಂಸಿಸಿದರು.


ಸಿಂಹಗಳು ನಡೆದುಕೊಂಡು ಹೋಗಲಿ: ಪ್ರಾಜೆಕ್ಟ್ ಲಯನ್

ಸಿಂಹಗಳನ್ನು ಸಂರಕ್ಷಿಸುವ ಸಂಬಂಧ 2020ರ ಆಗಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 25 ವರ್ಷಗಳ ಅವಧಿಯ 'ಪ್ರಾಜೆಕ್ಟ್ ಲಯನ್'ಗೆ ಚಾಲನೆ ನೀಡಿದ್ದಾರೆ. ಸಿಂಹಗಳ ಆವಾಸವನ್ನು ವಿಸ್ತರಿಸುವ ಉಲ್ಲೇಖಗಳು ಈ ಯೋಜನಾ ವರದಿಯಲ್ಲಿ ಇದೆ. ಇದಕ್ಕಾಗಿ ಸಂಭಾವ್ಯ ಆರು ಪ್ರದೇಶಗಳನ್ನು ಗುರುತಿಸಲಾಗಿದೆ. ಆದರೆ ಕುನೊಗೆ ಸಿಂಹಗಳನ್ನು ಬಿಡುವ ಪ್ರಸ್ತಾವವೇ ಈ ಯೋಜನೆಯಲ್ಲಿ ಇಲ್ಲ. ಬದಲಿಗೆ, 'ಸಿಂಹಗಳು ತಾವೇ ಸಹಜವಾಗಿ ನಡೆದುಕೊಂಡು ಹೋಗಿ, ಹೊಸ ಆವಾಸಗಳಲ್ಲಿ ನೆಲೆಯಾಗಬೇಕು' ಎಂದು ವರದಿಯಲ್ಲಿ ಹೇಳಲಾಗಿದೆ.



ಆಧಾರ: ಏಷ್ಯಾ ಸಿಂಹಗಳಿಗೆ ಎರಡನೇ ಆವಾಸ ಅಭಿವೃದ್ಧಿ ಕಾರ್ಯಯೋಜನೆ ವರದಿ, ಪ್ರಾಜೆಕ್ಟ್ ಲಯನ್, ಸುಪ್ರೀಂ ಕೋರ್ಟ್ ಆದೇಶ, ಗುಜರಾತ್ ಸರ್ಕಾರದ 'ಏಷಿಯಾಟಿಕ್ ಲಯನ್' ವರದಿ

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು



ಕರ್ನಾಟಕದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ರೈಲ್ವೆ ಯೋಜನೆಗಳು ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವ ಕೇರಳ ಸರ್ಕಾರದ ಬೇಡಿಕೆಯನ್ನು ಕರ್ನಾಟಕ ಸರ್ಕಾರ ತಿರಸ್ಕರಿಸಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 229

ಕಾಮದಹನದ ಸಮರ್ಥನೆ

ಶಿವನ ಬಳಿಗೆ ದೇವತೆಗಳು ಮತ್ತು ಋಷಿಮುನಿಗಳು ಬಂದು ಭಕ್ತಿಯಿಂದ ಸ್ತುತಿಸುತ್ತಾರೆ.

'ಓ ದೇವ, ನೀನು ಎಲ್ಲರಿಗೂ ತಂದೆತಾಯಿಯಾಗಿರುವೆ. ನಿನ್ನ ಹೊರತು ಇನ್ನಾರೂ ನಮ್ಮ ದುಃಖವನ್ನು ಹೋಗಲಾಡಿಸಲಾರರು' ಎಂದು ಪ್ರಾರ್ಥಿಸುತ್ತಾರೆ.

ದೇವತೆಗಳು ದೈನ್ಯದಿಂದ ಸ್ತುತಿಮಾಡುತ್ತಿರುವುದನ್ನು ನೋಡಿ ನಂದಿಕೇಶ್ವರನಿಗೆ ತುಂಬಾ ಕನಿಕರವಾಗಿ 'ಪರಮೇಶ್ವರ, ದೇವತೆಗಳು, ಮುನಿಗಳು, ಸಿದ್ಧರು ನಿನ್ನ ದರ್ಶನಕ್ಕಾಗಿ ಬಂದು ನಿನ್ನನ್ನು ಸ್ತುತಿಸುತ್ತಿದ್ದಾರೆ. ಅವರು ರಾಕ್ಷಸರಿಂದ ಪೀಡಿತರಾಗಿ ನೊಂದು, ನಿನ್ನ ಸಹಾಯ ಬೇಡಲು ಬಂದಿದ್ದಾರೆ. ದೀನಬಂಧುವೂ, ಭಕ್ತವತ್ಸಲನೂ ಆದ ನೀನು ಅವರೆಲ್ಲರ ಕಷ್ಟ ಪರಿಹರಿಸಬೇಕು' ಎಂದು ವಿಜ್ಞಾಪಿಸಿದ.

ನಂದಿಯ ವಿಜ್ಞಾಪನೆ ಕೇಳಿದ ಶಂಕರ ಕಣ್ಣುಗಳನ್ನು ತೆರೆದು ಮೆಲ್ಲಮೆಲ್ಲಗೆ ಧ್ಯಾನದಿಂದ ಬಹಿರ್ಮುಖನಾದ. ದೇವತೆಗಳೆಲ್ಲರನ್ನು ಉದ್ದೇಶಿಸಿ 'ಈಗ ನೀವು ನನ್ನ ಬಳಿಗೆ ಬಂದಿರುವ ಕಾರಣವೇನು' ಎಂದ. ಶಂಕರನ ಮಾತನ್ನು ಕೇಳಿ ದೇವತೆಗಳೆಲ್ಲರೂ ವಿಜ್ಞಾಪಿಸುವುದಕ್ಕಾಗಿ ಹರಿಯ ಮುಖವನ್ನು ನೋಡಿದರು.


ಹರಿಯು ಮಹತ್ತರವಾದ ದೇವಕಾರ್ಯವನ್ನು ಸಾಧಿಸುವ ಉದ್ದೇಶದಿಂದ ಹೀಗೆ ಹೇಳಿದ' 'ಶಂಕರ, ತಾರಕಾಸುರನೆಂಬ ದೈತ್ಯನು ದೇವತೆಗಳಿಗೆ ಮಹಾಕಷ್ಟವನ್ನು ಕೊಡುತ್ತಿದ್ದಾನೆ. ಅದನ್ನು ವಿಜ್ಞಾಪಿಸಲು ದೇವತೆಗಳೆಲ್ಲರೂ ನಿನ್ನ ಬಳಿಗೆ ಬಂದಿದ್ದಾರೆ. ತಾರಕಾಸುರನೆಂಬ ರಾಕ್ಷಸನ ಉಪಟಳದಿಂದ ಅವರೆಲ್ಲ ಕಂಗಾಲಾಗಿದ್ದಾರೆ. ನಿನ್ನ ಔರಸಪುತ್ರನಿಂದಲೇ ಮರಣಹೊಂದುವ ವರವನ್ನು ಬ್ರಹ್ಮನಿಂದ ಪಡೆದಿದ್ದಾನೆ. ಇದಕ್ಕಾಗಿ ನೀನು ಗಿರಿಜೆಯ ಪಾಣಿಗ್ರಹಣ ಮಾಡಬೇಕು. ತಾರಕಾಸುರನ ಬಾಧೆಯಿಂದ ದೇವತೆಗಳನ್ನು ರಕ್ಷಿಸಿ, ನಮ್ಮನ್ನು ಅನುಗ್ರಹಿಸು'.

ವಿಷ್ಣುವಿನ ಮಾತನ್ನು ಕೇಳಿ ಯೋಗಿರಾಜನಾದ ಶಿವನು ಪ್ರಸನ್ನನಾಗಿ 'ದೇವತೆಗಳಿರಾ, ಯಾವಾಗ ನಾನು ಗಿರಿಜೆಯನ್ನು ಮದುವೆಯಾಗುವೆನೋ ಆಗ ನಿಮ್ಮೆಲ್ಲರಿಗೂ ಕ್ಷೇಮವಾಗುವುದು. ನಿಮ್ಮಿಷ್ಟವು ಪೂರ್ತಿಯಾಗುವುದು. ಅಲ್ಲಿವರೆಗೂ ಶತ್ರುಗಳು ನಿಮ್ಮನ್ನು ಏನೂ ಮಾಡಲಾರರು. ಮದುವೆಯಾದ ಮೇಲೆ ನಾನು ಭಸ್ಮಮಾಡಿದ ಮದನನನ್ನು ಗಿರಿಜೆಯೇ ಎಲ್ಲರ ಕ್ಷೇಮಕ್ಕಾಗಿ ಬ್ರಹ್ಮನ ಮಾತಿನಂತೆ ಬದುಕಿಸುವಳು. ಇದರಲ್ಲಿ ಸಂಶಯವಿಲ್ಲ. ನಾನು ಮನ್ಮಥನನ್ನು ದಹನಮಾಡಿದುದರಿಂದ ದೇವತೆಗಳಿಗೆ ಮಹೋಪಕಾರವಾಗಿದೆ. ಈಗ ನೀವು ಆ ಕಾಮನ ಬಾಧೆ ಇಲ್ಲದೆ ನಿಶ್ಚಿಂತೆಯಿಂದ ನನ್ನಂತೆ ಜಿತೇಂದ್ರಿಯರಾಗಿ ಮಹಾತಪಸ್ಸನ್ನು ಅನಾಯಾಸವಾಗಿ ಆಚರಿಸಿ. ಈ ಹಿಂದೆ ಮನ್ಮಥ ನಿಮಗೆ ತುಂಬಾ ತೊಂದರೆಯನ್ನು ಉಂಟುಮಾಡಿರುವುದನ್ನು ಮರೆತಿರುವಿರಿ. ಅದನ್ನು ವಿಮರ್ಶೆ ಮಾಡಿದರೆ ನಿಮಗೇ ಸತ್ಯದ ಅರಿವಾಗುವುದು. ಮನ್ಮಥನ ಬಲಾತ್ಕಾರದಿಂದ ನಿಮ್ಮೆಲ್ಲರ ಧ್ಯಾನ ಭಂಗಗೊಳ್ಳುತ್ತಿತ್ತು. ಈಗ ನಿಮಗೆ ಧ್ಯಾನ ಮಾಡಲು ಯಾವುದೇ ಅಡ್ಡಿಗಳಿಲ್ಲ.

'ಕಾಮೇಚ್ಛೆಯು ಬಹಳ ಕೆಟ್ಟದ್ದು. ಅದರಿಂದ ನರಕವು ಲಭಿಸುವುದು. ಕಾಮವು ನಿಮ್ಮೊಳಗೇ ಇದ್ದು, ತಣಿಯದಿದ್ದರೆ ಕ್ರೋಧವುಂಟಾಗುವುದು. ಕ್ರೋಧದಿಂದ ಮೋಹ ತೀವ್ರವಾಗುವುದು. ಮೋಹದಿಂದ ತಪಸ್ಸು ಹಾಳಾಗುವುದು. ಆದುದರಿಂದ ಕಾಮ-ಕ್ರೋಧಗಳನ್ನು ನೀವೆಲ್ಲರೂ ಬಿಡಬೇಕು. ನನ್ನ ಈ ಮಾತು ಸತ್ಯವಾದುದು ಮತ್ತು ನಿಮಗೆಲ್ಲರಿಗೂ ಹಿತ ನೀಡುವುದು' ಎಂದ.

ಹೀಗೆ ಮಹಾದೇವನು ದೇವತೆಗಳಿಗೆ ಉಪದೇಶಿಸಿ, ಧ್ಯಾನದ ಮಹತ್ವ ಮತ್ತು ಕಾಮದ ಕೆಡುಕನ್ನು ಮನದಟ್ಟು ಮಾಡಿಸಿದ. ನಂತರ ಸದಾಶಿವ ಮತ್ತೆ ಧ್ಯಾನಮಾಡುತ್ತಾ ತನ್ನ ಆತ್ಮಸ್ವರೂಪವನ್ನು ಆತ್ಮನಲ್ಲಿಯೇ ನೋಡುತ್ತಾ ಚಿಂತಿಸತೊಡಗಿದ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಸೆಪ್ಟೆಂಬರ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣದಶಮಿ ಗಂ. 21-27 ನಕ್ಷತ್ರ: ಪುನರ್ವಸು ಗಂ. 21-07 ಯೋಗ: ವರಿಯಾನ್ ಗಂ. 08-24, ಕರಣ: ವಣಿಜ ಗಂ. 08-16, ಕನ್ಯಾ ಮಾಸದ 03 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-23 ಸೂರ್ಯಾಸ್ತ : 06-25
ಮುಸ್ಲಿಂ ದಿನಾಂಕ : 23 ಸಫರ್
ಅದೃಷ್ಟ ಸಂಖ್ಯೆ : 3, 11

ಮೇಷ: ಒಳ್ಳೆಯ ಯೋಚನಾಶಕ್ತಿ ಪಡೆದಿರುವುದು ಈ ದಿನ ಉಪಯೋಗಕ್ಕೆ ಬರಲಿದೆ. ಕಳೆದುಕೊಂಡ ವಸ್ತುಗಳು ಪುನಃ ನಿಮ್ಮ ಕೈಸೇರಲಿದೆ. ಅಭಿವೃದ್ಧಿದಾಯಕವಾದ ಚಟುವಟಿಕೆಯನ್ನು ರೂಢಿಸಿಕೊಳ್ಳಿರಿ.

ವೃಷಭ: ಜೀವ ಶೈಲಿಯನ್ನು ಇನ್ನೊಬ್ಬರ ಬಲವಂತದ ಮೇಲೆ ಬದಲಾಯಿಸಿಕೊಳ್ಳಬೇಕಾಗುತ್ತದೆ. ವಾಹನ ಚಾಲನೆಯಲ್ಲಿ ಎಚ್ಚರವಿರಲಿ. ಮಹಿಳಾ ಉದ್ಯೋಗಿಗಳಿಗೆ ಬಡ್ತಿ ದೊರೆಯುವ ಸಂಭವವಿದೆ.

ಮಿಥುನ: ಉದ್ಯೋಗ ನಿಮಿತ್ತ ವಿದೇಶ ಯಾನ ಮಾಡುವ ಅವಕಾಶ ಸಿಗುತ್ತದೆ. ಇನ್ನೊಬ್ಬರಿಗೆ ಹಿತ ಬಯಸುವುದು ನಿಮ್ಮ ಏಳಿಗೆಗೆ ಪೂರಕವಾಗುವುದೆಂದು ಮರೆಯದಿರಿ. ಕೆಲಸ ಕಾರ್ಯಗಳಿಗೆ ಕುಟುಂಬದವರಿಂದ ಸಹಕಾರ ಸಿಗುವುದು.

ಕರ್ಕಾಟಕ: ಅಪರಿಚಿತರಿಂದ ಮೋಸ ಆಗಬಹುದು. ಹಾಗಾಗಿ ಜಾಗ್ರತೆ ವಹಿಸಿ. ಹವಮಾನದ ವೈಪರೀತ್ಯ ಅಥವಾ ರಾಸಾಯನಿಕ ಬಳಕೆಯ ವ್ಯತ್ಯಾಸದಿಂದ ರೈತರಿಗೆ ನಷ್ಟ ಸಂಭವಿಸುತ್ತದೆ.

ಸಿಂಹ: ಸಗಟು ವ್ಯಾಪಾರಿಗಳಿಗೆ ವ್ಯವಹಾರ ಕುಂಠಿತವಾದರೂ ಅಭಿವೃದ್ಧಿಯಾಗುತ್ತದೆ. ಅಧಿಕಾರ ಪ್ರಾಪ್ತಿಯಲ್ಲಿ ಅಡೆತಡೆಯ ಸಂಭವವಿರುವುದು. ಎಲ್ಲವನ್ನೂ ಎದುರಿಸಬಲ್ಲೆನೆಂಬ ಮಾನಸಿಕ ಧೈರ್ಯವನ್ನು ತಂದುಕೊಳ್ಳಿರಿ.

ಕನ್ಯಾ: ತಾಯಿಯ ಆರೋಗ್ಯ ಬಿಗಡಾಯಿಸಬಹುದು. ವೃತ್ತಿ ಬದುಕಿನಲ್ಲಿ ಸಂಕೋಚದ ಪ್ರವೃತ್ತಿಯಿಂದಾಗಿ ಲಾಭಗಳಿಲ್ಲದೆ ಅಧಿಕವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸಾಲಗಾರರ ಕಿರುಕುಳ ಅಧಿಕವಾಗುವ ಲಕ್ಷಣಗಳಿದೆ.

ತುಲಾ: ಶುಭ ಕಾರ್ಯದ ಯೋಜನೆಗಾಗಿ ಹಿರಿಯರ ಆಗಮನ, ಮಾರ್ಗದರ್ಶನ ಸಿಗುವುದು. ಹೊಸ ವಾಹನ ಖರೀದಿಸುವ ಅವಶ್ಯಕತೆ ಹೆಚ್ಚಾಗಲಿದೆ. ಹೃದಯ ಸಂಬಂಧಿ ರೋಗ ಹೊಂದಿದವರಿಗೆ ರೋಗ ಉಲ್ಬಣವಾಗುವ ಸಾಧ್ಯತೆಗಳಿದೆ.

ವೃಶ್ಚಿಕ: ನೆನೆಗುದಿಗೆ ಬಿದ್ದ ಕೆಲಸಗಳು ಪುನರಾರಂಭವಾಗುತ್ತದೆ. ಆರ್ಥಿಕ ಮುಗಟ್ಟು ನಿವಾರಣೆಯಾಗುವುದು. ಸೌಂದರ್ಯ ವರ್ಧನೆಗೆ ರಾಸಾಯನಿಕ ವಸ್ತುಗಳನ್ನು ಬಳಸಬೇಡಿ, ಅಲರ್ಜಿಯಾಗಬಹುದು.

ಧನು: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದ್ದಲ್ಲಿ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳುವಿರಿ. ಪಾರಮಾರ್ಥಿಕ, ನೈತಿಕ ಮೌಲ್ಯಗಳನ್ನು ಆಧರಿಸುವುದರಿಂದ ಎಲ್ಲವೂ ಸುಗಮವಾಗುವುದು.

ಮಕರ: ಬಾಕಿ ಇರಿಸಿದ ಕೆಲಸ ಕಾರ್ಯಗಳನ್ನು ಈ ದಿನ ಪೂರ್ಣಗೊಳಿಸುವ ಬಗ್ಗೆ ಗಮನವಹಿಸಿ ಇಲ್ಲವಾದಲ್ಲಿ ಅಧಿಕಾರಿಗಳ ಕೋಪಕ್ಕೆ ಕಾರಣವಾಗುವಿರಿ. ಕೆಲಸದಲ್ಲಿ ಶ್ರದ್ಧೆಯಿರಲಿ. ಹಿರಿಯರೊಡನೆ ವಾಗ್ವಾದ ಮಾಡಬೇಡಿ.

ಕುಂಭ: ಅಲೆದಾಟದಿಂದ ದೇಹಾಯಾಸವಾದರೂ, ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ಕೌಟುಂಬಿಕ ವ್ಯವಹಾರದಲ್ಲಿ ವಿರೋಧ ವ್ಯಕ್ತವಾಗುತ್ತದೆ. ಮಹಿಳಾ ಉದ್ಯೋಗಿಗಳಿಗೆ ಕೆಲಸದ ಒತ್ತಡ ಹೆಚ್ಚಲಿದೆ .

ಮೀನ: ಕಾರ್ಯಕ್ಷೇತ್ರದಲ್ಲಿ ಅಡ್ಡಿ, ಆತಂಕ ತೋರಿ ಬಂದರೂ ಯೋಜಿತ ಕೆಲಸಗಳು ಫಲ ನೀಡಲಿದೆ. ಸಹೋದ್ಯೋಗಿಗಳ ಸಹಕಾರ ಉತ್ತಮವಾಗಿರುವುದು. ದೈವಾನುಗ್ರಹದಿಂದ ನಿಮ್ಮ ಪ್ರಯತ್ನಬಲಕ್ಕೆ ಪುಷ್ಟಿ ಸಿಗಲಿದೆ.



ಬೆರಗಿನ ಬೆಳಕು — ಗುರುರಾಜ ಕರಜಗಿ

ಕರ್ಮದ ಶವಭಾರ

ತನ್ನ ಶಿಲುಬೆಯ ತಾನೆ ಹೊತ್ತನಲ ಗುರು ಯೇಸು? |
ನಿನ್ನ ಕರ್ಮದ ಹೊರೆಯ ಬಿಡದೆ ನೀನೆ ಹೊರು ||
ಖಿನ್ನನಾಗದೆ ತುಟಿಯ ಬಿಗಿದು ಶವಭಾರವನು |
ಬೆನ್ನಿನಲಿ ಹೊತ್ತು ನಡೆ – ಮಂಕುತಿಮ್ಮ || 718 ||

ಪದ-ಅರ್ಥ: ಹೊರೆಯ = ಭಾರವ, ಖಿನ್ನನಾಗದೆ- = ಮನವನ್ನು ಕುಗ್ಗಿಸದೆ

ವಾಚ್ಯಾರ್ಥ: ತನ್ನ ಶಿಲುಬೆಯ ಭಾರವನ್ನು ತಾನೆ ಹೊರಲಿಲ್ಲವೆ ಏಸು? ಅಂತೆಯೇ ನಿನ್ನ ಕರ್ಮದ ಫಲಭಾರವನ್ನು ನೀನೇ ಹೊರಬೇಕು. ಹೊರುವಾಗ ದುಃಖಬೇಡ. ತುಟಿಯನ್ನು ಬಿಗಿದು ಆ ಭಾರವನ್ನು ಬೆನ್ನ ಮೇಲೆ ಹೊತ್ತು ನಡೆ.

ವಿವರಣೆ: ವಾಲ್ಮೀಕಿ ರಾಮಾಯಣದ ಆಯೋಧ್ಯಾ-ಕಾಂಡದಲ್ಲಿ ಒಂದು ಪ್ರಸಂಗ. ರಾಮ ವನವಾಸಕ್ಕೆ ಹೊರಟು ಹೋದ ಮೇಲೆ ದಶರಥ ಪುತ್ರ ವಿರಹದಿಂದ ದುಃಖಿತನಾಗಿದ್ದಾನೆ. ತಾನು ಇನ್ನು ಹೆಚ್ಚು ಕಾಲ ಬದುಕಲಾರೆ ಎಂಬುದು ಖಚಿತವಾಗಿದೆ. ಆಗ ತನ್ನ ಹಿರಿಯ ಪತ್ನಿ, ಕೌಸಲ್ಯೆಗೆ ಒಂದು ಮಾತು ಹೇಳುತ್ತಾನೆ. ಅದೊಂದು ಭರತವಾಕ್ಯ. ಸಾರ್ವಕಾಲಿಕ ಸತ್ಯ.

ಯದಾಚರತಿ ಕಲ್ಯಾಣಿ
ಶುಭಂ ವಾ ಯದಿವಾ ಶುಭಮ್ |
ತದೇವ ಲಭತೇ ಭದ್ರೇ
ಕರ್ತಾ ಕರ್ಮಜಮಾತ್ಮನ: ||


"ಮಂಗಳಾಂಗಿ ಕೌಸಲ್ಯೆ, ಮನುಷ್ಯನು ಒಳ್ಳೆಯದನ್ನು ಮಾಡಲಿ ಅಥವಾ ಕೆಟ್ಟದ್ದನ್ನು ಮಾಡಲಿ, ತನ್ನ ಕರ್ಮಕ್ಕೆ ತಕ್ಕ ಫಲವನ್ನೇ ಪಡೆಯುತ್ತಾನೆ". ಹೀಗೆ ಹೇಳಿ ತನ್ನಿಂದ ಹತನಾದ ಶ್ರವಣಕುಮಾರನ ಕಥೆಯನ್ನು ಹೇಳುತ್ತಾನೆ. ವೃದ್ಧ ದಂಪತಿಗಳಿಂದ ಅವರ ಪುತ್ರನನ್ನು ಅಗಲಿಸಿದ ಕರ್ಮಕ್ಕೆಪ್ರತಿಫಲವಾಗಿ ನಾನು ಇಂದು ನನ್ನ ಅಂತ್ಯಕಾಲದಲ್ಲಿ ಮಗನನ್ನು ಅಗಲುತ್ತಿದ್ದೇನೆ ಎಂದು ಪ್ರಲಾಪ ಮಾಡುತ್ತಾನೆ. ಕೆಟ್ಟ ಕರ್ಮಕ್ಕೆ ಕೆಟ್ಟ ಫಲ, ಒಳ್ಳೆಯ ಕಾರ್ಯಕ್ಕೆ ಒಳ್ಳೆಯ ಫಲ ಎಂದಿಗೂ ತಪ್ಪುವುದಿಲ್ಲವೆಂಬುದು ಸಿದ್ಧಾಂತ. ಅದನ್ನೇ ಕಗ್ಗ ಹೇಳುತ್ತದೆ, "ನಿನ್ನ ಕರ್ಮದ ಹೊರೆಯ ಬಿಡದೆ ನೀನೆ ಹೊರು". ಹಿಂದೆ ಮಾಡಿದ ಕರ್ಮಗಳನ್ನು ನಾವು ಮರೆಯಬಹುದು, ಆದರೆ ವಿಧಿ ಮರೆಯುವುದಿಲ್ಲ. ಅದು ಚಾಚೂ ಬಿಡದೆ ನಮ್ಮಿಂದ ಫಲವನ್ನು ಅನುಭವಿಸುವಂತೆ ಮಾಡುತ್ತದೆ. ನಹುಷನ ಕಾಮಾತುರತೆಗೆ ದೀರ್ಘಕಾಲದ ಸರ್ಪದೇಹದ ಶಿಕ್ಷೆ ದೊರಕಿತು. ಧರ್ಮರಾಜ ಹೇಳಿದ ಒಂದು ಸುಳ್ಳು ಅವನಿಗೆ ನರಕದರ್ಶನ ಮಾಡಿಸಿತು, ವಾಲಿಗೆ ಮರಣವನ್ನು ತಂದಿತ್ತಿತು. ರಾವಣನ ಒಂದು ತಪ್ಪು ಅವನ ವಂಶವನ್ನೇ ಸವರಿ ಹಾಕಿತು. ಅಲೆಗ್ಝಾಂಡರ್‌ನ ಮಹತ್ವಾಕಾಂಕ್ಷೆ ಮತ್ತು ಕ್ರೌರ್ಯ ಅವನನ್ನು ಚಿಕ್ಕ ವಯಸ್ಸಿಗೇ ಅಸಹಾಯಕನಂತೆ ಸಾಯುವಂತೆ ಮಾಡಿತು. ಇತಿಹಾಸದಲ್ಲಿ ಇಂಥ ಸಾವಿರ ಉದಾಹರಣೆಗಳು ಸಿಕ್ಕಾವು.

ಕಗ್ಗ ತಿಳಿಸುತ್ತದೆ, ಮಹಾತ್ಮನಾದ ಏಸುಕ್ರಿಸ್ತನೇ ತನ್ನ ಶಿಲುಬೆಯನ್ನು ತಾನೇ ಹೊತ್ತು ಬೆಟ್ಟ ಏರಿದನಂತೆ. ಅಂತೆಯೇ ವಿಧಿ ನಿನಗೆ ನೀಡಿದ ಕರ್ಮಫಲವನ್ನು ಗೊಣಗದೆ ಹೊತ್ತು ನಡೆ. ನಿನಗೆ ಬೇರೆ ದಾರಿಯಿಲ್ಲ. ಮುಖ ಗಂಟಿಕ್ಕದೆ, ತುಟಿ ಕಚ್ಚಿ ಬಂದದ್ದನ್ನು ಅನುಭವಿಸು. ಯಾಕೆಂದರೆ ಬಂದದ್ದು ನೀನು ಮಾಡಿದ್ದರ ಪ್ರತಿಫಲವೇ. ಅದನ್ನು ಬೆನ್ನಿನಲ್ಲಿ ಹೊತ್ತು ನಡೆಯಬೇಕು.

ಪದಬಂಧ 5085 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇಹಲೋಕಕ್ಕೆ ಸಂಬಂಧಿಸಿದ್ದು (3)
3.ಪುಸ್ತಕದ ಹತ್ತಿರವಿರಿಸಿದ ತಲೆ (3)
5.ಇದು ಸೂರ್ಯನ ರಶ್ಮಿ (5)
6.ತಡಸಲನ್ನು ಸೇರುವಾಗಲೇ ನಿಧಾನ! (2)
8.ಶಹನಾಯಿಯನ್ನು ಕಚ್ಚುತ್ತಿರುವ ಶುನಕ (2)
9.ನಾಗರಿಕನ ಹತ್ತಿರವಿರುವ ಸ್ತ್ರೀ (2)
10.ಕಲಾವಿದನಿಗಾಗಿ ತೆರೆದಿರುವ ಬಾಗಿಲು(2)
14.ಮನುಷ್ಯನನ್ನು ತಿನ್ನುವ ಪ್ರಾಣಿ (5)
15.ಕಮಂಡಲು ಹಿಡಿದವನು ನೋಡಿದ ಸಮುದ್ರ (3)
16.ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ
1.ಇಂದ್ರನ ಆನೆಯಿದು (4)
2.ಕರ ಕಡಿಯಲು ಬಂದಿರುವ ಭಲ್ಲೂಕ (3)
3.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4.ಇನ್ನೂ ಬಲಿಯದಿರುವ ಕಾಯಿ (4)
7.ಅಗಲ ಬಾಯುಳ್ಳ ಲೋಹದ ಪಾತ್ರೆ (3)
8.ದೇವರನ್ನು ನಂಬದವನು (3)
9.ನಡುವೆ ಗರಿ ಹಿಡಿದಿರುವ ಸುಸಂಸ್ಕೃತ(4)
11.ಹತ್ತನೆಯ ಒಂದು ಭಾಗ (4)
12.ಪ್ರವಾಹವನ್ನು ಹೀಗೂ ಹೇಳುವರು(3)
13.ಈತ ಕೆಟ್ಟ ಕವಿ (3)



5084ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅನುರಾಗ 5.ರಾವಣ
6.ವಾತಾಯನ 8.ತಡಸಲು
12.ಜನಹಿತ 4.ಪರಧನ
15. ನಗಾರಿ 16.ರಸಾಯನ

ಮೇಲಿಂದ ಕೆಳಕ್ಕೆ:
1.ಪರಾವಲಂಬಿ
2.ಗುಣವಂತ 3.ಅಹವಾಲು
4.ಗಮನ 7.ಯತ್ನ
9.ಸದನ 10.ದಟ್ಟದಾರಿದ್ರ್ಯ
11.ಕ್ಷೀರ 12.ಜನಮನ
13.ತಲ್ಲೀನತೆ 14.ಪಗಾರ

ಸುಡೊಕು 5471

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5470 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಪಕ್ಷಗಳಿಗೆ ಅನಾಮಧೇಯ ದೇಣಿಗೆ: ₹2 ಸಾವಿರಕ್ಕೆ ತಗ್ಗಿಸಲು ಪ್ರಸ್ತಾವನೆ

ನವದೆಹಲಿ (ಪಿಟಿಐ): 'ರಾಜಕೀಯ ಪಕ್ಷಗಳಿಗೆ ನೀಡಲಾಗುವ ಅನಾಮಧೇಯ ದೇಣಿಗೆಯ ಮೊತ್ತವನ್ನು ₹20 ಸಾವಿರದಿಂದ ₹2 ಸಾವಿರಕ್ಕೆ ತಗ್ಗಿಸುವ ಹಾಗೂ ನಗದು ರೂಪದಲ್ಲಿ ಸ್ವೀಕರಿಸಲ್ಪಡುವ ದೇಣಿಗೆಗಳ ಗರಿಷ್ಠ ಮಿತಿಯನ್ನು ₹20 ಕೋಟಿಗೆ ನಿಗದಿಪಡಿಸುವ ಕುರಿತ ಪ್ರಸ್ತಾವನೆಯೊಂದನ್ನು ಕೇಂದ್ರ ಚುನಾವಣಾ ಆಯೋಗವು (ಇಸಿ) ಕೇಂದ್ರ ಕಾನೂನು ಸಚಿವಾಲಯಕ್ಕೆ ಸಲ್ಲಿಸಿದೆ' ಎಂದು ಮೂಲಗಳು ಸೋಮವಾರ ಹೇಳಿವೆ.

'ಈ ಸಂಬಂಧ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್ ಕುಮಾರ್ ಅವರು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರಿಗೆ ಪತ್ರ ಬರೆದಿದ್ದು, 'ಇದಕ್ಕಾಗಿ ಜನಪ್ರಾತಿನಿಧ್ಯ ಕಾಯ್ದೆಗೆ ತಿದ್ದುಪಡಿ ತರುವಂತೆ ಕೋರಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಚುನಾವಣೆಯಲ್ಲಿ ಕಪ್ಪು ಹಣದ ಚಲಾವಣೆಗೆ ನಿಯಂತ್ರಣ ಹೇರುವ, ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆ ಪ್ರಕ್ರಿಯೆ ಹಾಗೂ ಅಭ್ಯರ್ಥಿಗಳು ಚುನಾವಣೆ ವೇಳೆ ಮಾಡುವ ವೆಚ್ಚದಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಈ ಪ್ರಸ್ತಾವನೆ ಒಳಗೊಂಡಿದೆ ಎಂದು ಹೇಳಲಾಗಿದೆ.

ಈಗಿರುವ ನಿಯಮದ ಪ್ರಕಾರ ರಾಜಕೀಯ ಪಕ್ಷಗಳಿಗೆ ಯಾವುದೇ ವ್ಯಕ್ತಿಗಳು ನಗದು ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ₹20 ಸಾವಿರಕ್ಕಿಂತ ಕಡಿಮೆ ಇದ್ದರೆ, ಅವರ ಹೆಸರನ್ನು ಪಕ್ಷಗಳು ಬಹಿರಂಗಪಡಿಸಬೇಕಿಲ್ಲ. ಒಂದೊಮ್ಮೆ ಚುನಾವಣಾ ಆಯೋಗದ ಹೊಸ ಪ್ರಸ್ತಾವನೆಯನ್ನು ಕಾನೂನು ಸಚಿವಾಲಯ ಅಂಗೀಕರಿಸಿದಲ್ಲಿ ರಾಜಕೀಯ ಪಕ್ಷಗಳು ₹2 ಸಾವಿರ ಹಾಗೂ ಅದಕ್ಕಿಂತ ಮೇಲ್ಪಟ್ಟ ಮೊತ್ತದ ದೇಣಿಗೆಯ ವಿವರವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸುವ ವರದಿಯಲ್ಲಿ ಉಲ್ಲೇಖಿಸಬೇಕಾಗುತ್ತದೆ.

'ಅಭ್ಯರ್ಥಿಗಳ ಚುನಾವಣಾ ಪಾರದರ್ಶಕಗೊಳಿಸುವ ಉದ್ದೇಶದಿಂದ ಆಯೋಗವು ಡಿಜಿಟಲ್ ವಹಿವಾಟು ಹಾಗೂ ಚೆಕ್‌ಗಳ ಮೂಲಕ ಪಾವತಿದಾರರ ಖಾತೆಗೆ ಹಣ ವರ್ಗಾವಣೆ ಮಾಡುವುದನ್ನು (₹2 ಸಾವಿರ ಮೇಲ್ಪಟ್ಟ ಮೊತ್ತ) ಕಡ್ಡಾಯಗೊಳಿಸಲು ನಿರ್ಧರಿಸಿದೆ' ಎಂದೂ ಮೂಲಗಳು ಮಾಹಿತಿ ನೀಡಿವೆ.

ರಾಹುಲ್ ಗಾಂಧಿಗೆ ನಾಯಕತ್ವ ಚುಕ್ಕಾಣಿ: ಪಕ್ಷದಲ್ಲಿ ಹೆಚ್ಚಿದ ಕೂಗು

ಮುಂಬೈ/ಚೆನ್ನೈ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಸಮೀಪದಲ್ಲಿ ಮತ್ತೆ ರಾಹುಲ್ ಗಾಂಧಿಯವರೇ ಪಕ್ಷದ ನಾಯಕತ್ವ ವಹಿಸಿಕೊಳ್ಳಬೇಕೆಂಬ ಒತ್ತಡ, ಕೂಗು ದೇಶದಾದ್ಯಂತ ಪಕ್ಷದೊಳಗೆ ಹೆಚ್ಚುತ್ತಿದೆ.

ರಾಜಸ್ಥಾನ, ಛತ್ತೀಸಗಡ, ಗುಜರಾತ್‌ನಲ್ಲಿ ಪಕ್ಷದ ರಾಜ್ಯ ಘಟಕಗಳು ಹಿಡಿದ ಹಾದಿಯನ್ನೇ ಅನುಸರಿಸಿರುವ ತಮಿಳುನಾಡು, ಮಹಾರಾಷ್ಟ್ರ ಹಾಗೂ ಬಿಹಾರದಲ್ಲೂ ಪ್ರದೇಶ ಕಾಂಗ್ರೆಸ್ ಸಮಿತಿಗಳು, ರಾಹುಲ್ ಅವರೇ ಪಕ್ಷದ ನಾಯಕತ್ವದ ಚುಕ್ಕಾಣಿ ವಹಿಸಬೇಕೆಂದು ಸೋಮವಾರ ನಿರ್ಣಯ ಕೈಗೊಂಡಿವೆ.

ಚೆನ್ನೈನಲ್ಲಿ ನಡೆದ ಪಕ್ಷದ ಸಾಮಾನ್ಯ ಸಭೆಯಲ್ಲಿ, ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್. ಅಳಗಿರಿ ಅವರು ಎಐಸಿಸಿ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವಂತೆ ರಾಹುಲ್ ಗಾಂಧಿಯವರನ್ನು ಕೋರಿ ಪ್ರಸ್ತಾಪಿಸಿದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಇದನ್ನು ಪಕ್ಷವು ಟ್ವೀಟ್‌ನಲ್ಲಿ ತಿಳಿಸಿದೆ.

ದಕ್ಷಿಣ ಮುಂಬೈನ ವೈ.ಬಿ. ಚವಾಣ್ ಕೇಂದ್ರದಲ್ಲಿ ನಡೆದ ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಘಟಕದ 553 ಪ್ರತಿನಿಧಿಗಳು ಭಾಗವಹಿಸಿದ್ದ ಸಭೆಯಲ್ಲೂ ಇದೇ ರೀತಿಯ ನಿರ್ಣಯ ಅಂಗೀಕರಿಸಲಾಯಿತು.

ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ರಾಜ್ಯ ಘಟಕಗಳು, ರಾಹುಲ್ ಗಾಂಧಿಯವರೇ ಪಕ್ಷದ ಅಧ್ಯಕ್ಷರಾಗಬೇಕೆಂಬ ನಿರ್ಣಯಗಳನ್ನು ಮೊದಲು ಅಂಗೀಕರಿಸಿವೆ. ಭಾನುವಾರವಷ್ಟೇ ಗುಜರಾತ್ ಕಾಂಗ್ರೆಸ್ ಘಟಕವೂ ಇದೇ ನಿರ್ಣಯ ಕೈಗೊಂಡಿದೆ.

ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಅಶೋಕ್ ಚವಾಣ್ ಸಲ್ಲಿಸಿದ ನಿರ್ಣಯವನ್ನು ಹಿರಿಯ ನಾಯಕರಾದ ನಸೀಮ್ ಖಾನ್ ಹಾಗೂ ಚಂದ್ರಕಾಂತ್ ಹಂದೊರೆ ಅವರು ಅಂಗೀಕರಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು, ರಾಜ್ಯ ಘಟಕದ ಅಧ್ಯಕ್ಷರು, ಕಚೇರಿ ಸಿಬ್ಬಂದಿ ಹಾಗೂ ಎಐಸಿಸಿ ಪ್ರತಿನಿಧಿಗಳನ್ನು ನೇಮಿಸುವ ಅಧಿಕಾರವನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ನೀಡುವ ನಿರ್ಣಯ ಮಂಡಿಸಿದರು. ಕಾಂಗ್ರೆಸ್ ಶಾಸಕಾಂಗ ನಾಯಕ ಬಾಳಸಾಹೇಬ್ ಥೋರಟ್ ಇದನ್ನು ಅನುಮೋದಿಸಿದರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ 3,500 ಕಿ.ಮೀ ದೂರದ ಕಾಲ್ನಡಿಗೆಯ 'ಭಾರತ್ ಜೋಡೊ ಯಾತ್ರೆ'ಯನ್ನು ರಾಹುಲ್ ಗಾಂಧಿ ಸೆ.7 ರಂದು ಪ್ರಾರಂಭಿಸಿದ್ದಾರೆ.

'ಬಿಜೆಪಿಗೆ ಹತಾಶೆ' (ನವದೆಹಲಿ ವರದಿ): 'ಭಾರತ್ ಜೋಡೊ' ಯಾತ್ರೆಯ ಯಶಸ್ಸಿನಿಂದ ಬಿಜೆಪಿಯ ನಾಯಕರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಭಯಭೀತರಾಗಿದ್ದಾರೆ ಮತ್ತು ಹತಾಶೆಗೊಂಡಿದ್ದಾರೆ. ಹಾಗಾಗಿಯೇ ಯಾತ್ರೆ ಕುರಿತು ಸುಳ್ಳು ಮತ್ತು ಅಪಪ್ರಚಾರದ ಹಾದಿ ಹಿಡಿದಿದ್ದಾರೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ.



ಕೇರಳದ ಆಲಪ್ಪುಳ ಪುನ್ನಮಾಡಾ ಸರೋವರದಲ್ಲಿ ಸೋಮವಾರ ದೋಣಿ ಸ್ಪರ್ಧೆಯ ಪ್ರದರ್ಶನದ ವೇಳೆ ರಾಹುಲ್ ಗಾಂಧಿ ಅವರು ಸ್ಪರ್ಧಿಗಳೊಂದಿಗೆ ಹುಟ್ಟು ಹಾಕಿ ಗಮನ ಸೆಳೆದರು –ಪಿಟಿಐ ಚಿತ್ರ

ಮೀನುಗಾರರ ಅಹವಾಲು ಆಲಿಸಿದ ರಾಹುಲ್

ಆಲಪ್ಪುಳ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 12ನೇ ದಿನದ 'ಭಾರತ್ ಜೋಡೊ' ಯಾತ್ರೆಯನ್ನು ಆರಂಭಿಸುವಾಗ ವಡಾಕಲ್ ಬೀಚ್‌ನಲ್ಲಿ ಮಿನುಗಾರರ ಸಮುದಾಯದವರ ಜತೆಗೆ ಸೋಮವಾರ ಸಂವಾದ ನಡೆಸಿದರು. ದೋಣಿಯಲ್ಲಿ ಕುಳಿತು ಹುಟ್ಟು ಹಾಕುವ ಮೂಲಕ ರಾಹುಲ್ ಗಾಂಧಿ ಗಮನ ಸೆಳೆದರು.

ನಸುಕಿನಲ್ಲಿ ಮೀನುಗಾರರೊಂದಿಗೆ ಸಭೆ ಮಾಡಿದ ರಾಹುಲ್ ಗಾಂಧಿ, ಹೆಚ್ಚುತ್ತಿರುವ ಇಂಧನ ವೆಚ್ಚಗಳು, ಸಬ್ಸಿಡಿಗಳ ಕಡಿತ, ಮೀನು ದಾಸ್ತಾನು ಕ್ಷೀಣಿಸುವಿಕೆ, ಪರಿಸರ ನಾಶ, ಸಾಮಾಜಿಕ ಕಲ್ಯಾಣ ಮತ್ತು ಪಿಂಚಣಿ ಸೌಲಭ್ಯಗಳ ಕೊರತೆ, ಅಸಮರ್ಪಕ ಶೈಕ್ಷಣಿಕ ಅವಕಾಶಗಳು ಹಾಗೂ ಇತರ ಸವಾಲುಗಳ ಕುರಿತು ಚರ್ಚಿಸಿದರು. ಈ ವಿಷಯವನ್ನು ಪಕ್ಷದ ಹಿರಿಯ ನಾಯಕ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ. ಪಕ್ಷದ ನಾಯಕರಾದ ಕೆ.ಮುರಳೀಧರನ್, ಕೊಡಿಕ್ಕುನ್ನಿಲ್ ಸುರೇಶ್, ರಮೇಶ್ ಚೆನ್ನಿಥಾಲಾ, ಕೆ.ಸಿ. ವೇಣುಗೋಪಾಲ್ ಹಾಗೂ ಪ್ರತಿ ಪಕ್ಷದ ನಾಯಕ ವಿ.ಡಿ. ಶತೀಶನ್ ಅವರು ಪಾದಯಾತ್ರೆಯಲ್ಲಿ ರಾಹುಲ್ ಗಾಂಧಿಯವರಿಗೆ ಸಾಥ್ ನೀಡಿದರು.

ಸೆ.10 ರಂದು ಕೇರಳ ಪ್ರವೇಶಿಸಿರುವ 'ಭಾರತ್ ಜೋಡೊ' ಯಾತ್ರೆಯು 19 ದಿನಗಳ ಅವಧಿಯಲ್ಲಿ ಏಳು ಜಿಲ್ಲೆಗಳನ್ನು ಹಾದು, ಅಕ್ಟೋಬರ್ 1ರಂದು ಕರ್ನಾಟಕಕ್ಕೆ ಪ್ರವೇಶಿಸಲಿದೆ.

'ಕಾಂಗ್ರೆಸ್‌ಗೆ ಪ್ರಯೋಜನವಾಗಬಹುದು'

ಪುಣೆ (ಪಿಟಿಐ): 'ಭಾರತ್ ಜೋಡೊ' ಯಾತ್ರೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪ್ರಯೋಜನವಿದೆ ಎನ್ನುವುದನ್ನು ನಿರಾಕರಿಸಲಾಗದು ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

2024ರ ಲೋಕಸಭೆ ಚುನಾವಣೆಗೆ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮೂಡಿದರೆ, ಕಾಂಗ್ರೆಸ್ ಒಳಗೊಳ್ಳುವಿಕೆಯನ್ನು ವಿರೋಧಿಸುವುದಿಲ್ಲವೆಂಬ ಸುಳಿವನ್ನು ಪವಾರ್ ನೀಡಿದರು.

ಸೊಲ್ಲಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತ್ ಜೋಡೊ' ಯಾತ್ರೆಯಂತಹ ಬಹೃತ್ ಪಾದಯಾತ್ರೆ ರಾಜಕೀಯ ಪ್ರಭಾವ ಬೀರಲಿದೆ. ಜನರು ಇಂತಹ ಪಾದಯಾತ್ರೆಯನ್ನು ಪ್ರಾಮಾಣಿಕ ಉದ್ದೇಶದಿಂದ ಸ್ವಾಗತಿಸುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಮರಣ ದಂಡನೆ ಕುರಿತು ಮಾರ್ಗಸೂಚಿ: ಸಂವಿಧಾನ ಪೀಠದಿಂದ ನಿರ್ಧಾರ

ನವದೆಹಲಿ (ಪಿಟಿಐ): ಮರಣ ದಂಡನೆ ಶಿಕ್ಷೆಗೆ ಒಳಪಡಿಸಬಹುದಾದ ಪ್ರಕರಣಗಳಲ್ಲಿ ನ್ಯಾಯಾಲಯಗಳು ಹೇಗೆ ಮತ್ತು ಯಾವ ಸಂದರ್ಭಗಳಲ್ಲಿ ಶಿಕ್ಷೆಯ ಪ್ರಮಾಣ ತಗ್ಗಿಸಬಹುದು ಎಂಬ ಬಗ್ಗೆ ಮಾರ್ಗಸೂಚಿ ರೂಪಿಸುವ ಕುರಿತ ಸುಮೋಟೊ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಸೋಮವಾರ ಐವರು ನ್ಯಾಯಮೂರ್ತಿಗಳನ್ನೊಳಗೊಂಡ ಸಂವಿಧಾನ ಪೀಠಕ್ಕೆ ವರ್ಗಾಯಿಸಿದೆ.

'ಮರಣ ದಂಡನೆ ಶಿಕ್ಷೆಗೆ ಒಳಪಡಬಹುದಾದ ಅಪರಾಧಿಯ ಶಿಕ್ಷೆಯನ್ನು ಎಂತಹ ಸಂದರ್ಭಗಳಲ್ಲಿ ತಗ್ಗಿಸಬೇಕು ಎಂಬುದರ ಕುರಿತು ಸ್ಪಷ್ಟತೆ ಹಾಗೂ ಏಕರೂಪತೆ ಬೇಕಿದೆ. ಈ ವಿಚಾರದ ಬಗ್ಗೆ ವಿಸ್ತೃತ ಪೀಠದಲ್ಲೇ ವಿಚಾರಣೆ ನಡೆಯುವ ಅಗತ್ಯವಿದೆ' ಎಂದು ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ದ್ವಿಸದಸ್ಯ ಪೀಠ ಹೇಳಿತು.

'ಈ ವಿಚಾರವನ್ನು ಮುಖ್ಯ ನ್ಯಾಯಮೂರ್ತಿಗಳ ಎದುರು ಇಡಬಯಸುತ್ತೇನೆ. ಈ ಸಂಬಂಧ ಅವರೇ ಸೂಕ್ತ ಆದೇಶ ಹೊರಡಿಸಲಿ' ಎಂದು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರು ತೀರ್ಪು ಪ್ರಕಟಿಸುವಾಗ ತಿಳಿಸಿದರು.

ಆಗಸ್ಟ್ 17ರಂದು ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿದ್ದ ನ್ಯಾಯಪೀಠವು 'ಮರಣ ದಂಡನೆ ಶಿಕ್ಷೆಯು ಬದಲಾಯಿಸಲು ಆಗದ್ದು. ಹೀಗಾಗಿ ಶಿಕ್ಷೆಯನ್ನು ತಗ್ಗಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡುವ ಎಲ್ಲಾ ಅವಕಾಶಗಳನ್ನೂ ಅಪರಾಧಿಗೆ ನೀಡಬೇಕು' ಎಂದು ಹೇಳಿತ್ತು.



ಲವಲವಿಕೆಯಿಂದ ವಿಹರಿಸಿದ ಚೀತಾಗಳು

ಶಿಯೋಪುರ (ಮಧ್ಯಪ್ರದೇಶ) (ಪಿಟಿಐ): ಕುನೊ ರಾಷ್ಟ್ರೀಯ ಉದ್ಯಾನದ ಕ್ವಾರಂಟೇನ್ ಪ್ರದೇಶದಲ್ಲಿ ಶನಿವಾರ ಬಿಡಲಾದ ನಮೀಬಿಯಾದಿಂದ ತಂದ ಎಂಟು ಚೀತಾಗಳ ಪೈಕಿ ಫ್ರೆಡ್ಡಿ ಮತ್ತು ಆಲ್ಟನ್ ಸೋಮವಾರ ಲವಲವಿಕೆಯಿಂದ ಇದ್ದದ್ದು ಕಂಡುಬಂತು. ಹೆಣ್ಣು ಚೀತಾಗಳಾದ ಸವನ್ನಾ ಮತ್ತು ಸಾಶಾ ಕೂಡ ಉತ್ಸಾಹದಿಂದಲೇ ಇದ್ದವು. ಇತರ ನಾಲ್ಕು ಚೀತಾಗಳಾದ ಒಬಾನ್, ಆಶಾ, ಸಿಬಿಲಿ ಮತ್ತು ಸೈಸಾ ಕೂಡ ಉಲ್ಲಾಸದಲ್ಲಿ ಇದ್ದಂತೆಯೇ ಕಂಡು ಬಂದವು ಎಂದು ರಾಷ್ಟ್ರೀಯ ಉದ್ಯಾನದ ಅಧಿಕಾರಿಗಳು ಹೇಳಿದ್ದಾರೆ.

ಭಾರತಕ್ಕೆ ಸ್ಥಳಾಂತರವಾದ ಬಳಿಕ ಮೊದಲ ಬಾರಿಗೆ ಈ ಚೀತಾಗಳಿಗೆ ಭಾನುವಾರ ಆಹಾರ ನೀಡಲಾಗಿದೆ. ಕೋಣದ ಮಾಂಸವನ್ನು ತಲಾ 2 ಕೆ.ಜಿಯಂತೆ ಚೀತಾಗಳಿಗೆ ನೀಡಲಾಗಿದೆ. ಒಂದು ಚೀತಾ ಮಾತ್ರ ಸ್ವಲ್ಪ ಕಡಿಮೆ ಆಹಾರ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಾಣಿಗಳು ಮೂರು ದಿನಕ್ಕೆ ಒಮ್ಮೆ ಮಾತ್ರ ಆಹಾರ ತೆಗೆದುಕೊಳ್ಳುತ್ತವೆ ಎಂದು ಪರಿಣತರು ಹೇಳಿದ್ದಾರೆ.

ಈ ಚೀತಾಗಳ ಮೇಲೆ ಅಧಿಕಾರಿಗಳು ನಿಕಟ ನಿಗಾ ಇರಿಸಿದ್ದಾರೆ. ಹೊಸ ಸ್ಥಳವನ್ನು ಚೀತಾಗಳು ಕುತೂಹಲದಿಂದ ಗಮನಿಸುತ್ತಿವೆ. ಶನಿವಾರ ಕಾಡಿಗೆ ಬಿಡುವ ಹೊತ್ತಿನಲ್ಲಿ ಚೀತಾಗಳು ಹಿಂಜರಿಕೆ ತೋರಿದಂತೆ ಕಂಡಿತ್ತು. ಆದರೆ, ಸೋಮವಾರದ ಹೊತ್ತಿಗೆ ಈ ಹಿಂಜರಿಕೆ ಮಾಯವಾಗಿದೆ. ಚೀತಾಗಳು ಕ್ವಾರಂಟೈನ್‌ನಲ್ಲಿ ಒಂದು ತಿಂಗಳು ಇರಲಿವೆ.

ಚೀತಾಗಳಿಗೆ ನಮೀಬಿಯಾದಲ್ಲಿಯೇ ಹೆಸರು ಇರಿಸಲಾಗಿದೆ. ಈ ಹೆಸರು ಬದಲಾಯಿಸುವ ಯೋಜನೆ ಸದ್ಯಕ್ಕೆ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಕ್ಷೇಪಾರ್ಹ ವಿಡಿಯೊ ಚಿತ್ರೀಕರಣ ಆರೋಪ: ತನಿಖೆಗೆ ಎಸ್‌ಐಟಿ

ಚಂಡೀಗಡ (ಪಿಟಿಐ): ಚಂಡೀಗಡ ವಿಶ್ವವಿದ್ಯಾಲಯದ ಹಾಸ್ಟೆಲ್‌ನ ವಿದ್ಯಾರ್ಥಿನಿಯೊಬ್ಬರು ಇತರ ವಿದ್ಯಾರ್ಥಿನಿಯರ ಆಕ್ಷೇಪಾರ್ಹ ವಿಡಿಯೊಗಳನ್ನು ಚಿತ್ರೀಕರಿಸಿದ್ದಾರೆ ಎಂಬ ಆರೋಪದ ಕುರಿತು ತನಿಖೆ ನಡೆಸಲು ಮೂವರು ಮಹಿಳಾ ಅಧಿಕಾರಿಗಳ ತಂಡವನ್ನು ಪಂಜಾಬ್ ಪೊಲೀಸ್ ಇಲಾಖೆಯು ರಚಿಸಿದೆ. ಹಾಸ್ಟೆಲ್‌ನ ಶೌಚಾಲಯದಲ್ಲಿ ವಿದ್ಯಾರ್ಥಿನಿಯರ ದೃಶ್ಯಗಳನ್ನು ಆರೋಪಿಯು ಚಿತ್ರೀಕರಿಸಿದ್ದಾರೆ ಎನ್ನಲಾಗಿದೆ.

ಹಿರಿಯ ಐಪಿಎಸ್ ಅಧಿಕಾರಿ ಗುರುಪ್ರೀತ್ ಕೌರ್ ಅವರ ಮೇಲ್ವಿಚಾರಣೆಯಲ್ಲಿ ಈ ವಿಶೇಷ ತನಿಖಾ ತಂಡವು (ಎಸ್‌ಐಟಿ) ತನಿಖೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಮಗ್ರವಾಗಿ ತನಿಖೆ ನಡೆಸಲಾಗುವುದು ಮತ್ತು ಇದರಲ್ಲಿ ಭಾಗಿಯಾಗಿರುವ ಯಾರನ್ನೂ ಬಿಡುವುದಿಲ್ಲ ಎಂದು ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಹೇಳಿದ್ದಾರೆ.

ಮೊಹಾಲಿಯಲ್ಲಿರುವ ಚಂಡೀಗಡ ವಿಶ್ವವಿದ್ಯಾಲಯದಲ್ಲಿ ಶನಿವಾರ ರಾತ್ರಿಯಿಂದಲೇ ಭಾರಿ ಪ್ರತಿಭಟನೆಗಳು ನಡೆದಿವೆ. ಕೆಲವು ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲಾಗಿದೆ ಎಂದೂ ಕೆಲವು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಹಾಸ್ಟೆಲ್‌ನ ವಾರ್ಡನ್ ತಮ್ಮ ಜೊತೆ ಕೆಟ್ಟದಾಗಿ ನಡೆಸಿಕೊಂಡಿದ್ದಾರೆ ಎಂದು ಕೆಲವು ವಿದ್ಯಾರ್ಥಿಗಳು ದೂರಿದ್ದಾರೆ. ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವದಂತಿ ಕೂಡ ಭಾನುವಾರ ಹಬ್ಬಿತ್ತು.

ಈ ಎಲ್ಲವೂ ಸುಳ್ಳು ಮತ್ತು ಆಧಾರರಹಿತ ಎಂದು ವಿಶ್ವವಿದ್ಯಾಲಯ ಆಡಳಿತವು ಸ್ಪಷ್ಟಪಡಿಸಿದೆ.

ಆರೋಪಿ ವಿದ್ಯಾರ್ಥಿನಿಯು ತನ್ನ ವಿಡಿಯೊವನ್ನು ಗೆಳೆಯನ ಜೊತೆಗೆ ಹಂಚಿಕೊಂಡಿದ್ದು ಮಾತ್ರ ಪತ್ತೆಯಾಗಿದೆ. ಬೇರೆ ಯಾವುದೇ ವಿದ್ಯಾರ್ಥಿನಿಯ ಆಕ್ಷೇಪಾರ್ಹ ವಿಡಿಯೊ ಆರೋಪಿಯ ಮೊಬೈಲ್‌ನಲ್ಲಿ ಸಿಕ್ಕಿಲ್ಲ ಎಂದು ಪೊಲೀಸರು ಭಾನುವಾರ ಹೇಳಿದ್ದರು.

ಆರೋಪಿ ವಿದ್ಯಾರ್ಥಿನಿ, ಆಕೆಯ ಗೆಳೆಯ ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಇದೇ 24ರವರೆಗೆ ಪಾಠ, ಪ್ರವಚನಗಳು ಇರುವುದಿಲ್ಲ ಎಂದು ವಿಶ್ವವಿದ್ಯಾಲಯ ಘೋಷಿಸಿದೆ. ಹಾಸ್ಟೆಲ್‌ನ ಇಬ್ಬರು ವಾರ್ಡನ್‌ಗಳನ್ನು ಅಮಾನತು ಮಾಡಲಾಗಿದೆ.

ವಿಮಾನದಿಂದ ಪಂಜಾಬ್ ಸಿಎಂ ಕೆಳಗಿಳಿಸಲಾಗಿತ್ತೇ?

ಚಂಡೀಗಡ (ಪಿಟಿಐ): ಜರ್ಮನಿಗೆ ಎಂಟು ದಿನಗಳ ಪ್ರವಾಸ ಕೈಗೊಂಡಿದ್ದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಶುಕ್ರವಾರ ದೇಶಕ್ಕೆ ವಾಪಸಾಗಿದ್ದಾರೆ. ಆದರೆ, ಅವರು ಪ್ರಯಾಣದ ವೇಳೆ ಪಾನಮತ್ತರಾಗಿದ್ದರು ಎನ್ನುವ ಕಾರಣಕ್ಕೆ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ ದೆಹಲಿಗೆ ಹೊರಟಿದ್ದ ವಿಮಾನದಿಂದ ಕೆಳಗಿಳಿಸಲಾಗಿತ್ತು ಎನ್ನುವ ಗಂಭೀರ ಆರೋಪ ಕೇಳಿಬಂದಿದೆ. ಇದು ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳಲ್ಲಿ ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ.

ಮದ್ಯ ಸೇವಿಸಿದ ಕಾರಣಕ್ಕೆ ಅವರನ್ನು ವಿಮಾನದಿಂದ ಕೆಳಗಿಳಿಸಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದರೆ, ಆಡಳಿತ ಪಕ್ಷ ಎಎಪಿಯ ಮುಖ್ಯ ವಕ್ತಾರ ಮಲ್ವಿಂದರ್ ಸಿಂಗ್ 'ಇದೊಂದು ಆಧಾರ ರಹಿತ ಆರೋಪ' ಎಂದು ಹೇಳಿದ್ದಾರೆ.

ಶಿರೋಮಣಿ ಅಕಾಲಿ ದಳದ ಮುಖ್ಯಸ್ಥ ಸುಖ್ಬೀರ್ ಸಿಂಗ್ ಬಾದಲ್, ಪಾನಮತ್ತರಾಗಿದ್ದರಿಂದ ಮಾನ್ ಅವರನ್ನು ಲುಫ್ಥಾನ್ಸ ವಿಮಾನದಿಂದ ಕೆಳಗಿಳಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಸಹ ಪ್ರಯಾಣಿಕರೊಬ್ಬರು ನೀಡಿದ ಮಾಹಿತಿ ಉಲ್ಲೇಖಿಸಿ. 'ಮಾನ್ ಅವರು ನಡೆಯಲು ಆಗದಷ್ಟು ಪಾನಮತ್ತರಾಗಿದ್ದರು. ಇದರಿಂದ ವಿಮಾನ ಹೊರಡುವುದು 4 ತಾಸು ವಿಳಂಬವಾಯಿತು. ಎಎಪಿಯ ರಾಷ್ಟ್ರೀಯ ಸಮಾವೇಶದಲ್ಲೂ ಭಾಗವಹಿಸಲು ಅವರಿಗೆ ಆಗಲಿಲ್ಲ. ಇದು ವಿಶ್ವದಾದ್ಯಂತ ಪಂಜಾಬಿಗರನ್ನು ಮುಜುಗರಕ್ಕೀಡುಮಾಡಿ ಅವಮಾನಿಸಿದೆ' ಅವರು ಟ್ವೀಟ್ ಮಾಡಿದ್ದಾರೆ. ವೇಳಾಪಟ್ಟಿ ಬದಲಾವಣೆಯಿಂದಾಗಿ ದೆಹಲಿಗೆ ಹೊರಟಿದ್ದ ವಿಮಾನ ಸಂಚಾರದಲ್ಲಿ ವಿಳಂಬವಾಗಿದೆ ಎಂದು ಲುಫ್ಥಾನ್ಸ ವಿಮಾನಯಾನ ಸಂಸ್ಥೆಯ ವಕ್ತಾರರು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ಮಾನ್ ಅವರು ಅರವಿಂದ ಕೇಜ್ರಿವಾಲ್ ಅವರನ್ನು ಭೇಟಿ ಮಾಡಿದ್ದಾರೆ.



ರಾಣಿ 2ನೇ ಎಲಿಜಬೆತ್‌ಗೆ ಭಾವಪೂರ್ಣ ವಿದಾಯ

ಲಂಡನ್ (ಪಿಟಿಐ): ಸುದೀರ್ಘ ಅವಧಿಗೆ ಬ್ರಿಟನ್‌ನ ರಾಣಿಯಾಗಿದ್ದ 2ನೇ ಎಲಿಜಬೆತ್ ಅವರ ಅಂತ್ಯಕ್ರಿಯೆಯು ಸೋಮವಾರ ರಾಜಮನೆತನದ ಸಂಪ್ರದಾಯ, ಸಕಲ ಸರ್ಕಾರಿ ಗೌರವದೊಂದಿಗೆ ಇಲ್ಲಿನ ವಿಂಡ್ಸರ್ ಕ್ಯಾಸಲ್‌ನಲ್ಲಿ ನಡೆಯಿತು.

ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು, ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸೇರಿ ವಿವಿಧ ರಾಷ್ಟ್ರಗಳ 500ಕ್ಕೂ ಹೆಚ್ಚು ನಾಯಕರು ಸೇರಿದಂತೆ 2000 ಗಣ್ಯರು ರಾಣಿಯ ಅಂತಿಮಯಾತ್ರೆಗೆ ಸಾಕ್ಷಿಯಾದರು. ಬ್ರಿಟನ್‌ನ ಅಸಂಖ್ಯ ನಾಗರಿಕರು ವಿದಾಯ ಹೇಳಿದರು.

70 ವರ್ಷ ಬ್ರಿಟನ್‌ನ ರಾಣಿಯಾಗಿದ್ದ 96 ವರ್ಷದ 2ನೇ ಎಲಿಜಬೆತ್ ಅವರು ಈ ಮೂಲಕ ಇತಿಹಾಸದ ಪುಟ ಸೇರಿದರು. ಅಲ್ಪಕಾಲದ ಅಸ್ವಸ್ಥತೆಯ ನಂತರ ಸೆ. 8ರಂದು ಅವರು ತಮ್ಮ ನಿವಾಸ ಬಾಲ್ಮೋರಲ್ ಕ್ಯಾಸಲ್‌ನಲ್ಲಿ ಮೃತಪಟ್ಟಿದ್ದರು.

ಸೋಮವಾರ ಬೆಳಿಗ್ಗೆ ಅಂತ್ಯಕ್ರಿಯೆ ವಿಧಿವಿಧಾನಗಳು ಆರಂಭವಾದವು. ಸರ್ಕಾರಿ ಗೌರವದೊಂದಿಗೆ ಭಾರತೀಯ ಕಾಲಮಾನ ಮಧ್ಯಾಹ್ನ 3.30ರ ವೇಳೆಗೆ ಪೂರ್ಣಗೊಂಡಿತು.

ರಾಣಿಯ ಪಾರ್ಥಿವ ಶರೀರವಿದ್ದ ಶವಪೆಟ್ಟಿಗೆಯನ್ನು ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ಕಡೆಯದಾಗಿ ನೋಡಿದ ಸ್ಥಳೀಯ ಪ್ರಜೆಯು, 'ಇದು ನನ್ನ ಬದುಕಿನ ಪ್ರಮುಖ ಕ್ಷಣಗಳಲ್ಲಿ ಒಂದು' ಎಂದು ಪ್ರತಿಕ್ರಿಯಿಸಿದರು.

ನೇರ ಪ್ರಸಾರ: ಮೆರವಣಿಗೆ, ಅಂತ್ಯಕ್ರಿಯೆ ವಿಧಿವಿಧಾನಗಳನ್ನು ಸುಮಾರು 125 ಸಿನಿಮಾ ಮಂದಿರಗಳು, ಹಲವು ಕ್ಯಾಥೆಡ್ರಲ್‌ಗಳಲ್ಲಿ ನೇರಪ್ರಸಾರ ಮಾಡಲಾಯಿತು. ಹಾಲಿರೂಡ್ ಪಾರ್ಕ್‌ನಲ್ಲಿ ವಿಶಾಲ ಪರದೆ ಅಳವಡಿಸಲಾಗಿತ್ತು.

ಅಂತ್ಯಕ್ರಿಯೆಗೆ ಸ್ವಲ್ಪ ಮೊದಲು ರಾಜಮನೆತನದವರು ರಾಣಿ 2ನೇ ಎಲಿಜಬೆತ್ ಅವರ ಕೊನೆಯ ಭಾವಚಿತ್ರವನ್ನು ಬಿಡುಗಡೆ ಮಾಡಿದರು. ತಿಳಿ ನೀಲಿ ಬಣ್ಣದ ಉಡುಪಿನಲ್ಲಿ, ಹಸನ್ಮುಖಿ ಭಾವದಲ್ಲಿದ್ದ ರಾಣಿಯ ಚಿತ್ರ ಅದಾಗಿತ್ತು. ಬ್ರಿಟನ್‌ನ ಪ್ರಧಾನಿ ಲಿಜ್ ಟ್ರಸ್, ಕಾಮನ್ ವೆಲ್ತ್‌ನ ಪ್ರಧಾನ ಕಾರ್ಯದರ್ಶಿ ಬರೊನೆಸ್ ಪ್ಯಾಟ್ರಿಕಾ ಅವರು ರಾಣಿಯ ಸೇವೆ ಸ್ಮರಿಸುವ ಅಧ್ಯಾಯಗಳನ್ನು ಓದಿದರು.

ಸಾಂಪ್ರದಾಯಿಕ ಗೌರವ ಸಲ್ಲಿಸುವ ಕಾರ್ಯದಲ್ಲಿ ಸೇನಾಪಡೆಗಳ ಸುಮಾರು 4,000 ಮಂದಿ ಭಾಗವಹಿಸಿದ್ದರು. ಈ ಹಿಂದೆ ಇಂತಹದೇ ಸರ್ಕಾರಿ ಗೌರವವನ್ನು 1965ರಲ್ಲಿ ನಿಧನರಾಗಿದ್ದ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರಿಗೆ ನೀಡಲಾಗಿತ್ತು.

ಸೇಂಟ್ ಜಾರ್ಜ್ ಚಾಪಲ್‌ನಲ್ಲಿ, ರಾಣಿಯ ಪತಿ ರಾಜ ಫಿಲಿಪ್‌ರ ಅಂತ್ಯಕ್ರಿಯೆ ನಡೆಸಿದ್ದ ಸ್ಥಳದ ಪಕ್ಕದಲ್ಲೇ ರಾಣಿ 2ನೇ ಎಲಿಜಬೆತ್ ಅವರ ಶರೀರವನ್ನು ಸಮಾಧಿ ಮಾಡಲಾಯಿತು. ರಾಜ ಫಿಲಿಪ್ 99ನೇ ವಯಸ್ಸಿನಲ್ಲಿ ಏ.9, 2021ರಂದು ಮೃತಪಟ್ಟಿದ್ದರು.

ರಾಣಿಯ ಗೌರವಾರ್ಥ ದೇಶದಾದ್ಯಂತ ಎರಡು ನಿಮಿಷ ಮೌನ ವಹಿಸಲಾಗಿತ್ತು.

ದಶಕದ ಹಿಂದೆಯೇ ಸಿದ್ಧವಾಗಿದ್ದ ಶವಪೆಟ್ಟಿಗೆ: ಲಂಡನ್ (ಪಿಟಿಐ): ರಾಣಿ 2ನೇ ಎಲಿಜಬೆತ್ ಅವರ ಪಾರ್ಥಿವ ಶರೀರ ಇಡಲಾಗಿದ್ದ ಶವಪೆಟ್ಟಿಗೆಯನ್ನು, ರಾಜಮನೆತನದ ಸ್ಯಾಂಡ್ರಿಂಗ್‌ಹ್ಯಾಮ್ ಎಸ್ಟೇಟ್‌ನಲ್ಲಿ ಬೆಳೆಯಲಾಗಿದ್ದ ಓಕ್ ಮರ ಬಳಸಿ ನಿರ್ಮಿಸಿದ್ದು, ಸೀಸದ ಹಾಳೆಯ ಅಂಚು ಅಳವಡಿಸಲಾಗಿತ್ತು.

ಹೆನ್ರಿ ಸ್ಮಿತ್ ಅವರು ದಶಕದ ಹಿಂದೆಯೇ ಶವಪೆಟ್ಟಿಗೆ ನಿರ್ಮಿಸಿದ್ದರು. ಅಂತ್ಯಕ್ರಿಯೆ ವಿಧಿ ಉಸ್ತುವಾರಿ ವಹಿಸುವ ಎರಡು ಸಂಸ್ಥೆಗಳ ಉಸ್ತುವಾರಿಯಲ್ಲಿ ಇದನ್ನು ಇರಿಸಲಾಗಿತ್ತು. ಬಾಹ್ಯ ಕವಚ ಓಕ್ ಮರದ್ದಾಗಿದ್ದರೆ, ಒಳಗಿನ ಆವರಣ ಸೀಸದ ಹಾಳೆಗಳನ್ನು ಆವರಿಸಿತ್ತು.



ರಾಣಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಅಪಾರ ಜನಸ್ತೋಮ – ಎಎಫ್‌ಪಿ ಚಿತ್ರ

ಗುಂಡಿನ ದಾಳಿ: ಗಾಯಗೊಂಡಿದ್ದ ಭಾರತೀಯ ವಿದ್ಯಾರ್ಥಿ ಸಾವು

ಟೊರೊಂಟೊ (ಪಿಟಿಐ): ಕೆನಡಾದ ಒಂಟಾರಿಯೊ ಪ್ರಾಂತ್ಯದಲ್ಲಿ ನಡೆದಿದ್ದ ಗುಂಡಿನ ಚಕಮಕಿ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಭಾರತೀಯ ವಿದ್ಯಾರ್ಥಿ ಸತ್ವಿಂದರ್ ಸಿಂಗ್ (28) ಸೋಮವಾರ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ಚಕಮಕಿ ವೇಳೆ ಪೊಲೀಸ್ ಕಾನ್‌ಸ್ಟೆಬಲ್ ಸೇರಿ ಮೂವರು ಮೃತಪಟ್ಟಿದ್ದರು. ದಾಳಿ ನಡೆಸಿದ್ದ ಸೀನ್ ಪೀಟರ್ (40) ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ ಎಂದು ಹೇಳಿದ್ದಾರೆ.

ಎಂ.ಕೆ ಆಟೊ ರಿಪೇರ್ಸ್ ಸಂಸ್ಥೆಯಲ್ಲಿ ಸಿಂಗ್ ಅರೆಕಾಲಿಕ ಉದ್ಯೋಗಿಯಾಗಿದ್ದರು. ಕಳೆದ ಸೋಮವಾರ ನಡೆದಿದ್ದ ದಾಳಿಯಲ್ಲಿ ಗಾಯಗೊಂಡಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.


ಬ್ರಿಟನ್‌ನಲ್ಲಿ ಭಾರತೀಯರ ಮೇಲಿನ ದಾಳಿಗೆ ಖಂಡನೆ; ಕ್ರಮಕ್ಕೆ ಆಗ್ರಹ

ಲಂಡನ್ (ಪಿಟಿಐ): ಬ್ರಿಟನ್‌ನ ಲೈಸೆಸ್ಟರ್ ನಗರದಲ್ಲಿ ಭಾರತೀಯರ ಮೇಲೆ ಹಿಂಸಾತ್ಮಕ ದಾಳಿ ನಡೆದಿದೆ. ಹಿಂದೂ ದೇಗುಲ ಆವರಣ ಹಾಗೂ ಧಾರ್ಮಿಕ ಚಿಹ್ನೆಗಳ ಧ್ವಂಸ ಮಾಡಲಾಗಿದೆ. ಭಾರತೀಯರಿದ್ದ ಸ್ಥಳದಲ್ಲಿ ದಾಂದಲೆ ನಡೆಸಲಾಗಿದೆ.

ಈ ಕೃತ್ಯವನ್ನು ಭಾರತವು ಬಲವಾಗಿ ಖಂಡಿಸಿದ್ದು, ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ. ಈ ಸಂಬಂಧ ಭಾರತೀಯ ಹೈಕಮಿಷನ್ ಹೇಳಿಕೆ ಬಿಡುಗಡೆ ಮಾಡಿದೆ.

'ತೈವಾನ್ ಬೆಂಬಲಕ್ಕೆ ಅಮೆರಿಕ ಪಡೆ'

ಬೀಜಿಂಗ್ (ಎಪಿ): ಚೀನಾ ತೈವಾನ್‌ನ ಅತಿಕ್ರಮಣಕ್ಕೆ ಮುಂದಾದರೆ ಅಮೆರಿಕದ ಪಡೆಗಳು ತೈವಾನ್ ಪರವಾಗಿ ನಿಲ್ಲಲಿವೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಭಾನುವಾರ ಎಚ್ಚರಿಸಿದ್ದಾರೆ.



ಸಿಬಿಎಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಎಚ್ಚರಿಕೆ ನೀಡಿದ್ದಾರೆ. ಬೈಡನ್ ಹೇಳಿಕೆಯನ್ನು ತೈವಾನ್‌ನ ವಿದೇಶಾಂಗ ಸಚಿವಾಲಯ ಸ್ವಾಗತಿಸಿದೆ.

'ತೈವಾನ್ ಮತ್ತು ಚೀನಾ ನಡುವಣ ಬಿಕ್ಕಟ್ಟು ಶಾಂತಿಯುತವಾಗಿ ಬಗೆಹರಿಯಬೇಕೆಂದು ಅಮೆರಿಕ ಬಯಸುತ್ತದೆ. ಎಂದು ಶ್ವೇತಭವನ ಸ್ಪಷ್ಟಪಡಿಸಿದೆ' ಎಂದು ಸಿಬಿಎಸ್ ನ್ಯೂಸ್ ವರದಿ ಮಾಡಿದೆ. ವಿಶ್ವಸಂಸ್ಥೆ ಸಾಮಾನ್ಯ ಅಧಿವೇಶನದ ಸಂದರ್ಭದಲ್ಲಿ ಬೈಡನ್ ಅವರನ್ನು ಭೇಟಿ ಮಾಡುವ ಉದ್ದೇಶವಿಲ್ಲ ಎಂದು ಇರಾನ್ ಅಧ್ಯಕ್ಷ ಇಬ್ರಾಹಿಮ್ ರೈಸಿ ಅವರು ಹೇಳಿದ್ದಾರೆ.

ಭಾರತ ಒಲಿಂಪಿಕ್ ಸಂಸ್ಥೆಯ ಆಡಳಿತ ನೋಡಿಕೊಳ್ಳಲು ಕ್ರಮ

‘ತಟಸ್ಥ ವ್ಯಕ್ತಿ’ ನೇಮಕ: ಸುಪ್ರೀಂ

ಮುಖ್ಯಾಂಶಗಳು

- ಐಒಸಿ ಜತೆ ಮಾತುಕತೆ ನಡೆಸುವಂತೆ ಸೂಚನೆ
- ಸೆ.22 ರಂದು ಮುಂದಿನ ವಿಚಾರಣೆ
- ಅಮಾನತು ಎಚ್ಚರಿಕೆ ನೀಡಿದ್ದ ಐಒಸಿ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ದೈನಂದಿನ ವ್ಯವಹಾರ ನೋಡಿಕೊಳ್ಳಲು ‘ತಟಸ್ಥ ವ್ಯಕ್ತಿ’ಯನ್ನು ನೇಮಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿತು.

ಈ ಸಂಬಂಧ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಜತೆ ಮಾತುಕತೆ ನಡೆಸುವಂತೆ ಕ್ರೀಡಾ ಇಲಾಖೆಯ ಕಾರ್ಯದರ್ಶಿಗೆ ನಿರ್ದೇಶಿಸಿತು.

ಡಿಸೆಂಬರ್ ಒಳಗಾಗಿ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರದಿದ್ದರೆ, ಐಒಎಯನ್ನು ಅಮಾನತು ಮಾಡುವುದಾಗಿ ಐಒಸಿ ಸೆ.8 ರಂದು ಅಂತಿಮ ಎಚ್ಚರಿಕೆ ನೀಡಿತ್ತು. ಐಒಎಗೆ ‘ಹಂಗಾಮಿ/ ಮಧ್ಯಂತರ ಅಧ್ಯಕ್ಷ’ರನ್ನು ನೇಮಿಸಿದರೆ ಅದನ್ನು ಅಂಗೀಕರಿಸುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು.

ಐಒಎ ಬಿಕ್ಕಟ್ಟಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠ, ತಟಸ್ಥ ವ್ಯಕ್ತಿಯ ನೇಮಕಕ್ಕೆ ಸಂಬಂಧಿಸಿದಂತೆ ಐಒಸಿಯ ಒಲಿಂಪಿಕ್ ಸಾಲಿಡಾರಿಟಿ ಮತ್ತು ಎನ್‌ಒಸಿ ವಿಭಾಗದ ನಿರ್ದೇಶಕರ ಜತೆ ಮಾತುಕತೆ ನಡೆಸುವಂತೆ ಕ್ರೀಡಾ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿತು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಐಒಎ ನಿಯಮಾವಳಿಗಳ ತಿದ್ದುಪಡಿ, ಮತದಾರರ ಪಟ್ಟಿ ಸಿದ್ಧಪಡಿಸುವುದು ಮತ್ತು ಚುನಾವಣೆ ಪ್ರಕ್ರಿಯೆ ನಡೆಸಲು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯನ್ನು ನೇಮಿಸಬೇಕು’ ಎಂಬ ಸಲಹೆ ನೀಡಿದರು.

‘ಚುನಾವಣೆ ನಡೆದು ಹೊಸ ಆಡಳಿತ ಅಸ್ತಿತ್ವಕ್ಕೆ ಬರುವವರೆಗೆ ಐಒಎಯ ಆಡಳಿತ ನೋಡಿಕೊಳ್ಳಲು ತಟಸ್ಥ ವ್ಯಕ್ತಿಯೊಬ್ಬರನ್ನು ನೇಮಿಸಬೇಕು’ ಎಂಬ ಸಲಹೆಯನ್ನೂ ಮುಂದಿಟ್ಟರು.

‘ಐಒಸಿಯು ಸೆ.27 ರಂದು ಲಾಸನ್‌ನಲ್ಲಿ ಐಒಎ ಪ್ರತಿನಿಧಿಗಳ ಜತೆ ಜಂಟಿ ಸಭೆ ನಡೆಸುವ ಪ್ರಸ್ತಾವ ಮುಂದಿಟ್ಟಿದೆ. ಆದ್ದರಿಂದ ಒಬ್ಬರು ಐಒಸಿ ಜತೆ ಸಂಪರ್ಕದಲ್ಲಿರುವುದು ಅಗತ್ಯವಾಗಿದೆ. ತಟಸ್ಥ ವ್ಯಕ್ತಿಯನ್ನು ನೇಮಿಸುವ ಸಂಬಂಧ ಐಒಸಿ ಅಧಿಕಾರಿಗಳ ಜತೆ ಮಾತುಕತೆ ನಡೆಸಿ, ಮುಂದಿನ ವಿಚಾರಣೆ ವೇಳೆ ಮಾಹಿತಿ ನೀಡಬೇಕು’ ಎಂದು ಪೀಠ ಹೇಳಿತು. ವಿಚಾರಣೆಯನ್ನು ಸೆ.22ಕ್ಕೆ ಮುಂದೂಡಿತು.

ಐಒಎ ಚುನಾವಣೆ ಕಳೆದ ಡಿಸೆಂಬರ್‌ನಲ್ಲಿ ನಡೆಯಬೇಕಿತ್ತು. ಆದರೆ ನಿಯಮಾವಳಿಯ ತಿದ್ದುಪಡಿ ಪ್ರಕ್ರಿಯೆ ನಡೆದ ಕಾರಣ ಚುನಾವಣೆ ನಡೆದಿರಲಿಲ್ಲ. ಈ ವರ್ಷದ ಮೇ ತಿಂಗಳಲ್ಲಿ ನರೀಂದರ್ ಬಾತ್ರಾ ಅವರನ್ನು ಐಒಎ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿತ್ತು.

ಫಿಫಾ ಅಧ್ಯಕ್ಷ ಗಿಯಾನಿ ಮೋದಿ ಭೇಟಿ ಸಾಧ್ಯತೆ

ಕೋಲ್ಕತ್ತ (ಪಿಟಿಐ): ವಿಶ್ವ ಫುಟ್‌ಬಾಲ್ ಆಡಳಿತ ಮಂಡಳಿ (ಫಿಫಾ) ಅಧ್ಯಕ್ಷ ಗಿಯಾನಿ ಇನ್ಫೆಂಟಿನೊ ಅವರು ಮುಂದಿನ ತಿಂಗಳು ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಸೋಮವಾರ ಇಲ್ಲಿ ನಡೆದ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ವಿಷಯ ತಿಳಿಸಲಾಯಿತು.

‘ಅಕ್ಟೋಬರ್ ಕೊನೆಯ ವಾರ ಫಿಫಾ ಅಧ್ಯಕ್ಷರು ಭಾರತಕ್ಕೆ ಭೇಟಿ ನೀಡಲಿದ್ದಾರೆ. ದೇಶದಲ್ಲಿ ಫುಟ್‌ಬಾಲ್ ಕ್ರೀಡೆಯ ಬೆಳವಣಿಗೆಯ ಬಗ್ಗೆ ಅವರು ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಜತೆ ಮಾತುಕತೆ ನಡೆಸುವ ಸಾಧ್ಯತೆಯೂ ಇದೆ’ ಎಂದು ಫಿಫಾ ಪ್ರಕಟಣೆ ತಿಳಿಸಿದೆ.

ಸ್ಟಿಮ್ಯಾಚ್‌ಗೆ ಗುರಿ: ‘ಮುಂಬರುವ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಕ್ವಾರ್ಟರ್ ಫೈನಲ್‌ವರೆಗೆ ಕೊಂಡೊಯ್ಯದಿದ್ದರೆ ಹುದ್ದೆಯನ್ನು ತ್ಯಜಿಸಬೇಕು’ ಎಂದು ಎಐಎಫ್‌ಎಫ್, ರಾಷ್ಟ್ರೀಯ ತಂಡದ ಕೋಚ್ ಇಗೊರ್ ಸ್ಟಿಮ್ಯಾಚ್ ಅವರಿಗೆ ಗುರಿ ನೀಡಿದೆ.

‘ಸ್ಟಿಮ್ಯಾಚ್‌ಗೆ ನೀಡಿದ ಗುರಿ ಅಲ್ಪ ಕಠಿಣ ನಿಜ. ಆದರೆ ಎಐಎಫ್‌ಎಫ್ ತಾಂತ್ರಿಕ ಸಮಿತಿ ಈ ನಿರ್ಧಾರ ತೆಗೆದುಕೊಂಡಿದ್ದು, ಕಾರ್ಯ ಕಾರಿ ಸಮಿತಿಯು ಅದಕ್ಕೆ ಅನುಮೋದನೆ ನೀಡಿದೆ’ ಎಂದು ಎಐಎಫ್‌ಎಫ್ ಕಾರ್ಯದರ್ಶಿ ಶಾಜಿ ಪ್ರಭಾಕರನ್ ತಿಳಿಸಿದರು.

ಜಿಎಂ ಪ್ರಣವ್‌ಗೆ ₹ 10 ಲಕ್ಷ ಬಹುಮಾನ ಘೋಷಣೆ

‘ಇನ್ನಷ್ಟು ಸಾಧನೆಯ ಗುರಿ’

ಪ್ರಜಾವಾಣಿ ವಾರ್ತೆ



ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರು ಪ್ರಣವ್ ಅವರನ್ನು ಅಭಿನಂದಿಸಿದರು. ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಬೆಂಗಳೂರು: ‘ಆಟವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯು, ಇನ್ನಷ್ಟು ಸಾಧನೆ ಮಾಡುವ ಹಂಬಲ ನನ್ನದು’ ಎಂದು ಗ್ರ್ಯಾಂಡ್‌ಮಾಸ್ಟರ್ ಪದವಿ ಪಡೆದ ಕರ್ನಾಟಕದ ಅತಿಕಿರಿಯ ಚೆಸ್ ಸ್ಪರ್ಧಿ ಪ್ರಣವ್ ಆನಂದ್ ಹೇಳಿದರು.

ಯುವ ಸಬಲೀಕರಣ ಮತ್ತು ಕೀಡಾ ಇಲಾಖೆ ವತಿಯಿಂದ ಸೋಮವಾರ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಪಾಲ್ಗೊಂಡರು.

‘ಮುಂದೆ ಪಾಲ್ಗೊಳ್ಳಲಿರುವ ಟೂರ್ನಿಗಳಲ್ಲಿ ಕಠಿಣ ಸವಾಲು ಎದುರಾಗಲಿದೆ. ನವದೆಹಲಿಯಲ್ಲಿ ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕಾಂಟಿನೆಂಟಲ್ ಟೂರ್ನಿಯಲ್ಲಿ ಭಾಗವಹಿಸಲಿದ್ದೇನೆ. ಅದು ಚೆಸ್ ವಿಶ್ವಕಪ್‌ಗೆ ಅರ್ಹತಾ ಟೂರ್ನಿಯಾಗಿದೆ’ ಎಂದರು.

‘ಆ ಬಳಿಕ ಏನು ಮಾಡಬೇಕು ಎಂಬುದರ ಬಗ್ಗೆ ಸದ್ಯಕ್ಕೆ ಯಾವುದೇ ಯೋಜನೆ ಹಾಕಿಕೊಂಡಿಲ್ಲ. ಇದರ ನಡುವೆ ಎಸ್ಸೆಸ್ಸೆಲ್ಸಿ ಪರೀಕ್ಷೆಗೂ ತಯಾರಿ ನಡೆಸಬೇಕಿದೆ’ ಎಂದು ತಿಳಿಸಿದರು.

₹ 10 ಲಕ್ಷ ಬಹುಮಾನ ಘೋಷಣೆ: ‘ರಾಜ್ಯದ ಅತಿಕಿರಿಯ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡ ಪ್ರಣವ್ ಅವರಿಗೆ ರಾಜ್ಯ ಸರ್ಕಾರ ₹ 10 ಲಕ್ಷ ನಗದು ಬಹುಮಾನ ನೀಡಲು ನಿರ್ಧರಿಸಿದೆ. ಅವರು ಇನ್ನಷ್ಟು ಸಾಧನೆ ಮೂಲಕ ರಾಜ್ಯ ಹಾಗೂ ದೇಶದ ಕೀರ್ತಿ ಹೆಚ್ಚಿಸಲಿ’ ಎಂದು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಶುಭಹಾರೈಸಿದರು.

15 ವರ್ಷದ ಪ್ರಣವ್ ಅವರು ರೊಮೇನಿಯದಲ್ಲಿ ನಡೆದ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು. ಮಾತ್ರವಲ್ಲ, ಗ್ರ್ಯಾಂಡ್‌ಮಾಸ್ಟರ್ ಪಟ್ಟ ತಮ್ಮದಾಗಿಸಿಕೊಂಡಿದ್ದರು.

ಎಂ.ಎಸ್.ತೇಜಕುಮಾರ್, ಜಿ.ಎ.ಸ್ಟ್ಯಾನಿ ಮತ್ತು ಗಿರೀಶ್ ಕೌಶಿಕ್ ಅವರ ಬಳಿಕ ಜಿಎಂ ಪಟ್ಟ ಪಡೆದ ಕರ್ನಾಟಕದ ನಾಲ್ಕನೇ ಚೆಸ್ ಆಟಗಾರ ಎಂಬ ಗೌರವ ಪಡೆದಿದ್ದರು.

ಡೋಪಿಂಗ್: ಕುಸ್ತಿ ಆಯ್ಕೆ ಟ್ರಯಲ್ಸ್ ಆಯೋಜಕರಿಗೆ ನೋಟಿಸ್–ಸಚಿವ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಗಾಗಿ ಹರಿಹರದಲ್ಲಿ ಇತ್ತೀಚೆಗೆ ನಡೆದಿದ್ದ ರಾಜ್ಯ ತಂಡದ ಆಯ್ಕೆ ಟ್ರಯಲ್ಸ್ ವೇಳೆ ಡೋಪಿಂಗ್ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಆಯೋಜಕರಿಗೆ ನೋಟಿಸ್ ನೀಡಲಾಗಿದೆ ಎಂದು ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ತಿಳಿಸಿದರು.

ಸೆ.16ರಂದು ‘ಪ್ರಜಾವಾಣಿ’ಯಲ್ಲಿ ಕುಸ್ತಿ ಆಯ್ಕೆ ಟ್ರಯಲ್ಸ್‌ನಲ್ಲಿ ಡೋಪಿಂಗ್ ಛಾಯೆ ಕುರಿತು ವಿಶೇಷ ವರದಿ ಪ್ರಕಟವಾಗಿತ್ತು. ವಿಧಾನ ಪರಿಷತ್‌ನಲ್ಲಿ ಸೋಮವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ಡಿ.ಎಸ್. ಅರುಣ್ ಅವರು ‘ಪ್ರಜಾವಾಣಿ’ ವರದಿಯ ಕುರಿತು ಪ್ರಸ್ತಾಪಿಸಿದಾಗ ಸಚಿವ ನಾರಾಯಣಗೌಡ ನೋಟಿಸ್ ನೀಡಿದ್ದಾಗಿ ಹೇಳಿದರು.

ರಾಜ್ಯದ ಕ್ರೀಡಾ ಸಂಸ್ಥೆಗಳು ಇನ್ನುಮುಂದೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾಕೂಟ ಆಯೋಜಿಸುವಾಗ ಹಾಗೂ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ವೇಳೆ ಕಡ್ಡಾಯವಾಗಿ ಡೋಪಿಂಗ್ ಪರೀಕ್ಷೆಗೆ ಒಳಪಡಿಸುವಂತೆ ಸುತ್ತೋಲೆ ಹೊರಡಿಸಲಾಗುತ್ತಿದೆ. ಡೋಪಿಂಗ್ ಪರೀಕ್ಷೆಯಲ್ಲಿ ಸಿಕ್ಕಿಬೀಳುವ ಕ್ರೀಡಾಪಟುಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವ ಜೊತೆಗೆ ಇಲಾಖೆಯಿಂದ ಯಾವುದೇ ಸೌಲಭ್ಯ ನೀಡದಂತೆಯೂ ಸೂಚಿಸಲಾಗಿದೆ ಎಂದು ಸಚಿವರು ವಿವರಿಸಿದರು.



ಡ್ರೀಮ್ ಯುನೈಟೆಡ್‌ನ ಆ್ಯಂಡಿ ಜೊಯ್ ಮತ್ತು ರೆಬೆಲ್ಸ್‌ನ ಅರ್ನೆಸ್ಟೊ ಅಡೊ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಮಾಡರ್ನ್ ಗರ್ಲ್ಸ್ ಜಯಭೇರಿ

ಬೆಂಗಳೂರು: ಸಂಘಟಿತ ಆಟವಾಡಿದ ಮಾಡರ್ನ್ ಗರ್ಲ್ಸ್ ತಂಡದವರು ಕೆಎಸ್‌ಎಫ್‌ಎ ಮಹಿಳಾ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮಾಡರ್ನ್ ಗರ್ಲ್ಸ್ 3–1ರಿಂದ ಮಾತೃ ಪ್ರತಿಷ್ಠಾನ ಎಫ್‌ಸಿ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಉಷಂ ಪುಷ್ಪಾರಾಣಿ ಚಾನು (59ನೇ ನಿಮಿಷ), ಅಂಜನಾ ಥಾಪಾ (62ನೇ ನಿಮಿಷ) ಮತ್ತು ಲಕ್ಷ್ಮಿ ಪ್ರಿಯಾ ಲೆಂಕಾ (63ನೇ ನಿ.) ಕಾಲ್ಚಳಕ ತೋರಿದರು.

ಮಾತೃ ಪ್ರತಿಷ್ಠಾನ ತಂಡಕ್ಕಾಗಿ ನ್ಯಾನ್ಸಿ (24ನೇ ನಿ.) ಗೋಲು ಹೊಡೆದರು.

ಮಂಗಳವಾರ ಕೆಂಪ್ ಎಫ್‌ಸಿ–ಕಿಕ್‌ಸ್ಟಾರ್ಟ್ ಎಫ್‌ಸಿ, ರೂಟ್ಸ್ ಎಫ್‌ಸಿ–ರೆಬೆಲ್ಸ್ ಎಫ್‌ಸಿ ಸೆಣಸಲಿವೆ.

ಪಂದ್ಯ ಡ್ರಾ: ಪುರುಷರಿಗಾಗಿ ನಡೆಯುತ್ತಿರುವ ಬಿಡಿಎಫ್‌ಎ ಸೂಪರ್ ಡಿವಿಷನ್ ಪಂದ್ಯದಲ್ಲಿ ರೆಬೆಲ್ಸ್ ಎಫ್‌ಸಿ ತಂಡವು ಬೆಂಗಳೂರು ಡ್ರೀಮ್ ಯುನೈಟೆಡ್ ತಂಡದೊಂದಿಗೆ ಗೋಲು ರಹಿತ ಡ್ರಾ ಸಾಧಿಸಿತು.

ಟಿ20 ಲೀಗ್: ಸ್ಟಬ್ಸ್‌ಗೆ ಜಾಕ್‌ಪಾಟ್

ಕೇಪ್‌ಟೌನ್, ದಕ್ಷಿಣ ಆಫ್ರಿಕಾ (ಪಿಟಿಐ): ಸ್ಥಳೀಯ ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್ ಅವರು ದಕ್ಷಿಣ ಆಫ್ರಿಕಾ ಟಿ20 ಕ್ರಿಕೆಟ್ ಲೀಗ್ ಹರಾಜು ಪ್ರಕ್ರಿಯೆಯಲ್ಲಿ ಸುಮಾರು ₹ 4 ಕೋಟಿ ಮೊತ್ತಕ್ಕೆ ಸನ್‌ರೈಸರ್ಸ್ ಈಸ್ಟರ್ನ್ ತಂಡದ ಪಾಲಾಗಿದ್ದಾರೆ.

ಪ್ರತಿ ತಂಡವು ಒಟ್ಟು ₹ 15 ಕೋಟಿ ವ್ಯಯಿಸಬಹುದಾಗಿದೆ. ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಜಾನ್ಸೆನ್ ಅವರನ್ನೂ ಸನ್‌ರೈಸರ್ಸ್ ₹ 2.70 ಕೋಟಿಗೆ ತನ್ನದಾಗಿಸಿಕೊಂಡಿತು. ಅದೇ ದೇಶದ ಇನ್ನೊಬ್ಬ ಬ್ಯಾಟರ್ ರಿಲೀ ರುಸ್ಸೊ ₹3.10 ಕೋಟಿಗೆ ಪ್ರಿಟೋರಿಯಾ ಕ್ಯಾಪಿಟಲ್ಸ್ ಪಾಲಾದರು.

ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸ್‌ಗಳೇ ದಕ್ಷಿಣ ಆಫ್ರಿಕಾ ಲೀಗ್‌ನ ಎಲ್ಲ ಆರೂ ತಂಡಗಳ ಮಾಲೀಕತ್ವ ಹೊಂದಿವೆ.

ಚೆಟ್ರಿ ‘ತಳ್ಳಿದ’ ರಾಜ್ಯಪಾಲ: ಆಕ್ರೋಶ



ಪಶ್ಚಿಮ ಬಂಗಾಳ ರಾಜ್ಯಪಾಲರು ಚೆಟ್ರಿ ಅವರನ್ನು ತಳ್ಳಿದ ಕ್ಷಣ –ಟ್ವಿಟರ್ ಚಿತ್ರ

ಕೋಲ್ಕತ್ತ (ಪಿಟಿಐ): ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲ ಲಾ.ಗಣೇಶನ್ ಅವರು ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಅವರಿಗೆ ಅವಮಾನ ಮಾಡಿದ್ದಾರೆ ಎಂದು ಕ್ರೀಡಾಪ್ರೇಮಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಬಿಎಫ್‌ಸಿ 2–1 ರಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿ ಚೊಚ್ಚಲ ಕಿರೀಟ ಜಯಿಸಿತ್ತು. ಬಳಿಕ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯಪಾಲ ಗಣೇಶನ್ ಮತ್ತು ಪಶ್ಚಿಮ ಬಂಗಾಳ ಕ್ರೀಡಾ ಸಚಿವ ಅರೂಪ್ ಬಿಶ್ವಾಸ್ ಅವರು ಚೆಟ್ರಿಗೆ ಟ್ರೋಫಿ ವಿತರಿಸಿದ್ದರು.

ಟ್ರೋಫಿ ಸ್ವೀಕರಿಸಿದ ಚೆಟ್ರಿ ಹಾಗೂ ವೇದಿಕೆಯಲ್ಲಿದ್ದ ಗಣ್ಯರು ಫೋಟೊಗೆ ಪೋಸ್ ನೀಡಿದ್ದಾರೆ. ಈ ವೇಳೆ ರಾಜ್ಯಪಾಲರು, ಚೆಟ್ರಿ ಅವರ ಹಿಂದೆ ಇದ್ದರು. ಫೋಟೊದಲ್ಲಿ ಕಾಣಿಸಿಕೊಳ್ಳುವ ಉದ್ದೇಶದಿಂದ ಚೆಟ್ರಿ ಅವರನ್ನು ಪಕ್ಕಕ್ಕೆ ತಳ್ಳಿದ್ದಾರೆ. ಈ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಹಲವರು, ‘ಭಾರತದ ಫುಟ್‌ಬಾಲ್ ದಿಗ್ಗಜನಿಗೆ ಮಾಡಿರುವ ಅವಮಾನ’ ಎಂದಿದ್ದಾರೆ.

‘ಇದು ಅವಮಾನಕರ’ ಎಂದು ವೀಕ್ಷಕ ವಿವರಣೆಕಾರನಾಗಿರುವ ಭಾರತ ಕ್ರಿಕೆಟ್ ತಂಡದ ಮಾಜಿ ಆರಂಭಿಕ ಬ್ಯಾಟರ್ ಆಕಾಶ್ ಚೋಪ್ರಾ ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದಿದ್ದಾರೆ.

‘ಡುರಾಂಡ್ ಕಪ್ ಗೆದ್ದ ಲಾ.ಗಣೇಶನ್ ಅವರಿಗೆ ಅಭಿನಂದನೆಗಳು’ ಎಂದು ಕ್ರೀಡಾಭಿಮಾನಿಯೊಬ್ಬರು ವ್ಯಂಗ್ಯವಾಡಿದ್ದಾರೆ.

24ರಿಂದ ಬೆಂಚ್‌ಪ್ರೆಸ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಬೆಂಗಳೂರು ಜಿಲ್ಲಾ ಮತ್ತು ಅಂತರ್‌ಕಾಲೇಜು ಬೆಂಚ್‌ಪ್ರೆಸ್ ಚಾಂಪಿಯನ್‌ಷಿಪ್ ಸೆಪ್ಟೆಂಬರ್ 24 ಮತ್ತು 25ರಂದು ನಡೆಯಲಿದೆ.

ಕಬ್ಬನ್‌ಪಾರ್ಕ್‌ನ ಕೆ.ಜಿ.ಎಸ್ ಕ್ಲಬ್‌ನಲ್ಲಿ ಸಬ್‌ಜೂನಿಯರ್ಸ್, ಜೂನಿಯರ್ಸ್, ಸೀನಿಯರ್ಸ್ ಮತ್ತು ಮಾಸ್ಟರ್ಸ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಬೆಂಗಳೂರು ಪವರ್‌ಲಿಫ್ಟಿಂಗ್ ಸಂಸ್ಥೆಯು ಚಾಂಪಿಯನ್‌ಷಿಪ್‌ಅನ್ನು ಆಯೋಜಿಸುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಕಾರ್ಯದರ್ಶಿ ಎನ್. ಸುಬ್ರಮಣ್ಯ (ಮೊಬೈಲ್ ಸಂಖ್ಯೆ 9900872427) ಅವರನ್ನು ಸಂಪರ್ಕಿಸಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,530
ಇಂದಿನ ಅಂತ್ಯ	17,622
▲	91
ದಿನದ ಕನಿಷ್ಠ	17,667

ವಿನಿಮಯ ದರ

$ ಡಾಲರ್	79.81
£ ಪೌಂಡ್	90.64
€ ಯುರೊ	79.52
¥ ಯೆನ್ (100ಕ್ಕೆ)	55.54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1170 (1170)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲಿನ್	₹930 (930)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹500-800
ಮಧ್ಯಮ	₹300-500
ಸಣ್ಣ	₹100-200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹131

ದುಪ್ಪಟ್ಟು ಆಗಲಿದೆ ಅಂಬುಜಾ ಸಿಮೆಂಟ್ಸ್ ಉತ್ಪಾದನೆ: ಅದಾನಿ

ನವದೆಹಲಿ (ಪಿಟಿಐ): ಅಂಬುಜಾ ಸಿಮೆಂಟ್ಸ್ ಕಂಪನಿಯ ಸ್ವಾಧೀನ ಪ್ರಕ್ರಿಯೆಯನ್ನು ಅದಾನಿ ಸಮೂಹವು ಪೂರ್ಣ ಗೊಳಿಸಿದ್ದು, ಕಂಪನಿಯ ಸಿಮೆಂಟ್ ತಯಾರಿಕಾ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸುವುದಾಗಿ ಉದ್ಯಮಿ ಗೌತಮ್ ಅದಾನಿ ಸೋಮವಾರ ಹೇಳಿದ್ದಾರೆ.

ಅದಾನಿ ಸಮೂಹವು ದೇಶದಲ್ಲಿ ಅತ್ಯಂತ ಹೆಚ್ಚು ಲಾಭ ಗಳಿಸುವ ಸಿಮೆಂಟ್ ತಯಾರಕ ಆಗಲಿದೆ ಎಂದೂ ಅವರು ಹೇಳಿದ್ದಾರೆ. ಸರ್ಕಾರವು ಮೂಲ ಸೌಕರ್ಯ ಅಭಿವೃದ್ಧಿಗೆ ನೀಡುತ್ತಿರುವ ಉತ್ತೇಜನ ಹಾಗೂ ಆರ್ಥಿಕ ಬೆಳವಣಿಗೆಯ ಪರಿಣಾಮವಾಗಿ ದೇಶದಲ್ಲಿ ಸಿಮೆಂಟ್ ಬೇಡಿಕೆಯು ಹಲವು ಪಟ್ಟು ಹೆಚ್ಚಾಗಲಿದೆ ಎಂದು ಅಂದಾಜಿಸಿದ್ದಾರೆ.

ಸಮೂಹವು ಈಗ ದೇಶದ 2ನೇ ಅತಿದೊಡ್ಡ ಸಿಮೆಂಟ್ ಉತ್ಪಾದನಾ ಕಂಪನಿಯನ್ನು ಹೊಂದಿದೆ ಎಂದು ಅದಾನಿ ಹೇಳಿದ್ದಾರೆ.

ತಾವು ಸಿಮೆಂಟ್ ಉತ್ಪಾದನಾ ಕಂಪನಿಯೊಂದನ್ನು ಸ್ವಾಧೀನಪಡಿಸಿಕೊಂಡಿರುವುದಕ್ಕೆ ಕಾರಣ ವಿವರಿಸಿರುವ ಅವರು, ‘ಭಾರತದಲ್ಲಿ ಸಿಮೆಂಟ್‌ನ ತಲಾವಾರು ಬಳಕೆಯು 250 ಕೆ.ಜಿ. ಇದೆ. ಚೀನಾದಲ್ಲಿ ಇದು 1,600 ಕೆ.ಜಿ. ಇದೆ. ಸಿಮೆಂಟ್ ಉದ್ಯಮವು ಭಾರತದಲ್ಲಿ ಇನ್ನೂ ಏಳು ಪಟ್ಟು ಬೆಳೆಯಲು ಅವಕಾಶ ಇದೆ’ ಎಂದಿದ್ದಾರೆ.

ಪರಿಶೀಲನಾ ಪ್ರಕ್ರಿಯೆ ಇನ್ನಷ್ಟು ಕಠಿಣಗೊಳಿಸಲು ಕೇಂದ್ರ ಸರ್ಕಾರ, ಆರ್‌ಬಿಐ ಸೂಚನೆ

ಅಕ್ರಮ ಸಾಲ ಆ್ಯಪ್: ಗೂಗಲ್ ಮೇಲೆ ಒತ್ತಡ



ಪ್ರಾತಿನಿಧಿಕ ಚಿತ್ರ

ಮುಂಬೈ (ರಾಯಿಟರ್ಸ್): ದೇಶದಲ್ಲಿ ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳನ್ನು ನಿಯಂತ್ರಿಸುವ ಉದ್ದೇಶದಿಂದ, ಗೂಗಲ್ ಕಂಪನಿಯು ತನ್ನ ಪರಿಶೀಲನಾ ಪ್ರಕ್ರಿಯೆಯನ್ನು ಇನ್ನಷ್ಟು ಕಠಿಣವಾಗಿಸಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚಿಸಿವೆ.

ದೇಶದಲ್ಲಿ ಗೂಗಲ್ ಕಂಪನಿಯು ಆರ್‌ಬಿಐ ರೂಪಿಸಿದ ನಿಯಮಗಳ ಅಡಿಯಲ್ಲಿ ವ್ಯವಹಾರ ನಡೆಸುತ್ತಿಲ್ಲ. ಹೀಗಿದ್ದರೂ, ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ನಡೆಸಿದ ಹಲವು ಸಭೆಗಳಿಗೆ ಹಾಜರಾಗುವಂತೆ ಗೂಗಲ್‌ಗೆ ಈಚಿನ ಕೆಲವು ತಿಂಗಳಲ್ಲಿ ಸೂಚಿಸಲಾಗಿತ್ತು. ಅಕ್ರಮ ಸಾಲ ಆ್ಯಪ್‌ಗಳನ್ನು ನಿರ್ಮೂಲಗೊಳಿಸಲು ನೆರವಾಗುವ ರೀತಿಯಲ್ಲಿ ಕಂಪನಿಯು ಕಠಿಣ ನಿಯಮಗಳನ್ನು ರೂಪಿಸಬೇಕು ಎಂದು ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಪ್ಲೇಸ್ಟೋರ್ ಹಾಗೂ ಹಣಕಾಸು ಸೇವಾ ಆ್ಯಪ್‌ಗಳಿಗೆ ಸಂಬಂಧಿಸಿದ ನಿಯಮಗಳನ್ನು 2021ರ ಸೆಪ್ಟೆಂಬರ್‌ನಿಂದ ಅನ್ವಯಿಸುವಂತೆ ಪರಿಷ್ಕರಿಸಲಾಗಿದೆ ಎಂದು ಗೂಗಲ್ ಹೇಳಿದೆ. ‘ವೈಯಕ್ತಿಕ ಸಾಲ ನೀಡುವ ಎರಡು ಸಾವಿರಕ್ಕೂ ಹೆಚ್ಚಿನ ಆ್ಯಪ್‌ಗಳನ್ನು ನಾವು ಪ್ಲೇಸ್ಟೋರ್‌ನಿಂದ ತೆಗೆದಿದ್ದೇವೆ. ನಿಯಮಗಳನ್ನು ಉಲ್ಲಂಘಿಸಿದ್ದು ಕಂಡು ಬಂದ ಕಾರಣ ಹೀಗೆ ಮಾಡಲಾಗಿದೆ’ ಎಂದು ಗೂಗಲ್ ವಕ್ತಾರರು ತಿಳಿಸಿದ್ದಾರೆ. ಈ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ಕಡೆಯಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಇತರ ವೆಬ್‌ಸೈಟ್‌ಗಳು ಮತ್ತು ಬೇರೆ ಮೂಲಗಳಿಂದ ಇಂತಹ ಆ್ಯಪ್‌ಗಳು ಲಭ್ಯವಾಗುವುದನ್ನು ತಡೆಯುವ ಬಗ್ಗೆಯೂ ಗಮನ ಹರಿಸುವಂತೆ ಗೂಗಲ್‌ಗೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ವಿವರಿಸಿವೆ. ಉದ್ಯಮದ ವಲಯದಿಂದ ಬರುವ ದೂರುಗಳನ್ನು ಆಧರಿಸಿ ಕ್ರಮ ಜರುಗಿಸುವುದನ್ನು ಗೂಗಲ್ ಆರಂಭಿಸಿದೆ.

‘ನಿರ್ದಿಷ್ಟ ಆ್ಯಪ್‌ಗಳ ಬಗ್ಗೆ ದೂರು ನೀಡಿದಾಗ ಗೂಗಲ್ ಈ ಮೊದಲು ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಆದರೆ ಈಗ ಕಂಪನಿಯು ಹೆಚ್ಚು ಸ್ಪಂದನಶೀಲವಾಗಿದೆ’ ಎನ್ನಲಾಗಿದೆ. ಸಾಲ ಕೊಡಲು ಮಾನ್ಯತೆ ಪಡೆದಿರುವ ಆ್ಯಪ್‌ಗಳ ಪಟ್ಟಿಯನ್ನು ಸಿದ್ಧಪಡಿಸುವ ಕೆಲಸ ಆರ್‌ಬಿಐ ಹಾಗೂ ಸರ್ಕಾರದ ಮಟ್ಟದಲ್ಲಿ ನಡೆದಿದೆ.

ದೇಶದ ಆ್ಯಪ್ ಮಾರುಕಟ್ಟೆಯಲ್ಲಿ ಗೂಗಲ್ ಪ್ರಾಬಲ್ಯ ಹೊಂದಿದೆ. ದೇಶದ ಶೇಕಡ 95ರಷ್ಟು ಸ್ಮಾರ್ಟ್‌ಫೋನ್‌ಗಳು ಗೂಗಲ್ ಅಭಿವೃದ್ಧಿಪಡಿಸಿರುವ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯನ್ನು ಹೊಂದಿವೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹389-673
ದ್ವಿತಳಿ (ಬಿ.ವಿ)	₹399-823

ಮುಂಬೈ ಧಾರಣೆ

ಶೇಂಗಾ

19-9-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1125 (1120)
ಪಾಮ್ ವಾರದ ಡೆಲಿವರಿ	928 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 49,150 (49,100)

ಬೆಳ್ಳಿ ಕೆ.ಜಿ 56,300 (55,200)

ಆವರಣದಲ್ಲಿ ಇರುವುದು ಶನಿವಾರದ ಧಾರಣೆ

ಕೊಬ್ಬರಿ ಧಾರಣೆ

ಪುತ್ತೂರು (ಇತರೆ)	₹4000-8500
ತುರುವೇಕೆರೆ	₹13700-13800

ಬೆಂಗಳೂರಿನಿಂದ ಸಿಡ್ನಿಗೆ ನೇರ ವಿಮಾನ

ಬೆಂಗಳೂರು: ಆಸ್ಟ್ರೇಲಿಯಾದ ರಾಷ್ಟ್ರೀಯ ವಿಮಾನಯಾನ ಕಂಪನಿಯಾಗಿರುವ ‘ಕ್ವಂಟಾಸ್’, ಬೆಂಗಳೂರಿನಿಂದ ಸಿಡ್ನಿಗೆ ಹೊಸ ನೇರ ವಿಮಾನ ಸೇವೆಯನ್ನು ಆರಂಭಿಸಿದೆ.

ದಕ್ಷಿಣ ಭಾರತದಿಂದ ಆಸ್ಟ್ರೇಲಿಯಾಕ್ಕೆ ನೇರ ವಿಮಾನ ಸಂಪರ್ಕ ಕಲ್ಪಿಸುವಲ್ಲಿ ತಾನೇ ಮೊದಲಿಗ ಎಂದು ಕಂಪನಿ ಹೇಳಿದೆ. ಹೊಸ ಸೇವೆಯು ಎರಡೂ ನಗರಗಳ ನಡುವಿನ ಪ್ರಯಾಣ ಅವಧಿಯನ್ನು ಮೂರು ಗಂಟೆಗಳಷ್ಟು ಕಡಿಮೆ ಮಾಡಲಿದೆ.

ಕ್ವಂಟಾಸ್ ವಿಮಾನ ಸೇವೆಯು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಿಡ್ನಿಗೆ ವಾರಕ್ಕೆ ನಾಲ್ಕು ದಿನ (ಬುಧವಾರ, ಶುಕ್ರವಾರ, ಶನಿವಾರ ಮತ್ತು ಭಾನುವಾರ) ಲಭ್ಯವಿರಲಿದೆ.

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಮೂರು ದಿನಗಳಿಂದ ಕುಸಿತ ಕಾಣುತ್ತಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಚೇತರಿಕೆ ದಾಖಲಿಸಿದವು. ಬ್ಯಾಂಕಿಂಗ್, ಹಣಕಾಸು, ಎಫ್‌ಎಂಸಿಜಿ ಮತ್ತು ಆಟೊಮೊಬೈಲ್ ವಲಯಗಳ ಷೇರುಗಳ ಹೆಚ್ಚಿನ ಖರೀದಿಯು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 300 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 91 ಅಂಶ ಏರಿಕೆ ಕಂಡವು. ‘ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರ ಹೆಚ್ಚಿಸುವ ಕುರಿತು ತೀರ್ಮಾನ ಕೈಗೊಳ್ಳುವ ದಿನ ಹತ್ತಿರ ಬರುತ್ತಿರುವ ಕಾರಣ ಜಾಗತಿಕ ಮಾರುಕಟ್ಟೆಗಳಲ್ಲಿ ಅಸ್ಥಿರತೆ ಇರಲಿದೆ. ಬಡ್ಡಿ ದರ ದೊಡ್ಡ ಮಟ್ಟದಲ್ಲಿ ಹೆಚ್ಚಾದರೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಗಳಿಂದ ಹಣ ಹಿಂಪಡೆಯಲಿದ್ದಾರೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಆದರೆ, ಹಣದುಬ್ಬರವು ನಿಯಂತ್ರಣಕ್ಕೆ ಬರುವ ಅಂದಾಜು ಇದೆ. ವರ್ಷಾಂತ್ಯದ ವೇಳೆಗೆ ಹಣಕಾಸಿನ ನೀತಿಯಲ್ಲಿ ಸ್ಥಿರತೆ ಬರಲಿದೆ’ ಎಂದು ಅವರು ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಇಂಗ್ಲೆಂಡ್ ಕೂಡ ಬಡ್ಡಿ ದರವನ್ನು ಶೇ 0.50ರಷ್ಟು ಹೆಚ್ಚಿಸುವ ಸಾಧ್ಯತೆ ಇದ್ದು, ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಒತ್ತಡ ಇರಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 90.10 ಡಾಲರ್‌ಗೆ ಇಳಿಕೆ ಯಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚಿತ್ರದುರ್ಗ	
ಆಪಿ	48139-48599
ಬೆಟ್ಟೆ	39619-40059
ಕೆಂಪುಗೋಟು	30100-30500
ರಾಶಿ	47629-48069
ಕುಮಟಾ	
ಚಿಪ್ಪು	29099-33609
ಕೋಕ	22099-33299
ಫ್ಯಾಕ್ಟರಿ	12099-21809
ಹಳೆಚಾಲಿ	43509-46899
ಹೊಸಚಾಲಿ	38699-43119
ಪುತ್ತೂರು	
ಕೋಕ	11000-26000
ಹೊಸತು	34500-47500
ಕಾರ್ಕಳ	
ಹೊಸತು	40000-47500
ಸಾಗರ	
ಬಿಳಿಗೋಟು	13989-33399
ಚಾಲಿ	32690-41099
ಕೋಕ	7690-34989
ಕೆಂಪುಗೋಟು	28269-39319
ರಾಶಿ	38409-51209
ಸಿಪ್ಪೆಗೋಟು	10000-22911
ಶಿವಮೊಗ್ಗ	
ಬೆಟ್ಟೆ	50769-54499
ಗೊರಬಲು	17000-38786
ರಾಶಿ	46099-51699
ಸರಕು	57899-79000
ಸಿದ್ದಾಪುರ	
ಬಿಳಿಗೋಟು	28899-34099
ಚಾಲಿ	37809-42599
ಕೋಕ	28000-34369
ಕೆಂಪುಗೋಟು	30119-35777
ರಾಶಿ	47849-51309
ತಟ್ಟಿಬೆಟ್ಟೆ	42109-47849
ಯಲ್ಲಾಪುರ	
ಬಿಳಿಗೋಟು	27699-35899
ಚಾಲಿ	37899-43599
ಕೋಕ	18699-29122
ಕೆಂಪುಗೋಟು	31919-36669
ರಾಶಿ	49299-56419
ತಟ್ಟಿಬೆಟ್ಟೆ	40699-47182

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15700	15850	216.40 ಸೆಂಟ್ಸ್
ಎಸಿ	9100	8400	8700	
ಆರ್‌ಪಿ	9750	9800	9800	ಲಂಡನ್
ಆರ್‌ಸಿ	4800	4500	4725	2226 ಡಾಲರ್ಸ್

ಎಂಜಿನಿಯರಿಂಗ್ ಹುದ್ದೆಗಳನ್ನು ಕಡಿತ ಮಾಡಲಿರುವ ಓಲಾ

ಬೆಂಗಳೂರು (ರಾಯಿಟರ್ಸ್): ಉದ್ಯೋಗಗಳ ಸಂಖ್ಯೆಯು ಅಗತ್ಯಕ್ಕಿಂತ ಹೆಚ್ಚಾಗುವುದನ್ನು ನಿಯಂತ್ರಿಸಲು ಓಲಾ ಕಂಪನಿಯು ಒಟ್ಟು 200 ಎಂಜಿನಿಯರಿಂಗ್ ಹುದ್ದೆಗಳನ್ನು ಕಡಿಮೆ ಮಾಡಲಿದೆ.

ಪ್ರಸ್ತುತವಾಗಿರುವ ಹುದ್ದೆಗಳನ್ನು ಇನ್ನಷ್ಟು ಬಲಪಡಿಸಲು ತನ್ನ ಕಾರ್ಯಾಚರಣೆಗಳನ್ನು ಕೇಂದ್ರೀಕೃತಗೊಳಿಸಲಾಗುತ್ತಿದೆ ಎಂದು ಕಂಪನಿ ಹೇಳಿದೆ. ಕಂಪನಿಯು ದ್ವಿಚಕ್ರ ವಾಹನ ಗಳು ಹಾಗೂ ನಾಲ್ಕು ಚಕ್ರದ ವಾಹನಗಳ ಕ್ಷೇತ್ರದಲ್ಲಿ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಿದೆ. ಇದಕ್ಕಾಗಿ ಎಂಜಿನಿಯರ್‌ಗಳ ಸಂಖ್ಯೆಯನ್ನು ಮುಂದಿನ 18 ತಿಂಗಳಲ್ಲಿ ಈಗಿನ 2,000ದಿಂದ 5,000ಕ್ಕೆ ಹೆಚ್ಚಿ ಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದೆ.

ಏರ್ ಇಂಡಿಯಾ ಅಂಗಸಂಸ್ಥೆಗಳ ಖಾಸಗೀಕರಣ ಪ್ರಕ್ರಿಯೆ ಶುರು

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ಅಂಗಸಂಸ್ಥೆಗಳಾಗಿದ್ದ ‘ಏರ್ ಇಂಡಿಯಾ ಏರ್‌ಪೋರ್ಟ್ ಸರ್ವಿಸಸ್ ಲಿಮಿಟೆಡ್’ (ಎಐಎಎಸ್‌ಎಲ್) ಮತ್ತು ‘ಏರ್ ಇಂಡಿಯಾ ಎಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್’ನ (ಎಐಇಎಸ್‌ಎಲ್) ಖಾಸಗೀಕರಣ ಪ್ರಕ್ರಿಯೆ ಶುರುವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ಎರಡು ಕಂಪನಿಗಳ ಬಗ್ಗೆ ಖಾಸಗಿ ವಲಯದಲ್ಲಿ ಇರುವ ಆಸಕ್ತಿಯನ್ನು ತಿಳಿದುಕೊಳ್ಳಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯು (ಡಿಐಪಿಎಎಂ) ಹೂಡಿಕೆದಾರರ ಜೊತೆ ಸಭೆ ಮತ್ತು ರೋಡ್‌ಶೋ ಆಯೋಜಿಸುವುದನ್ನು ಶುರು ಮಾಡಿದೆ. ಆಸಕ್ತ ಬಿಡ್ಡರ್‌ಗಳಿಂದ ಅರ್ಜಿಯನ್ನು ಶೀಘ್ರದಲ್ಲಿಯೇ ಆಹ್ವಾನಿಸಲಾಗುತ್ತದೆ’ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ರಷ್ಯಾ ತೈಲ: ₹ 35,000 ಕೋಟಿ ಉಳಿತಾಯ?



ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಕಚ್ಚಾ ತೈಲವನ್ನು ರಿಯಾಯಿತಿ ದರಕ್ಕೆ ಖರೀದಿಸುತ್ತಿರುವ ಕಾರಣ, ₹ 35 ಸಾವಿರ ಕೋಟಿ ಉಳಿತಾಯ ಆಗಿದೆ ಎಂದು ಮೂಲಗಳು ಹೇಳಿವೆ.

ರಷ್ಯಾ ದೇಶವು ಉಕ್ರೇನ್ ಮೇಲೆ ಸಮರ ಸಾರಿದ ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳು ರಷ್ಯಾ ಮೇಲೆ ಆರ್ಥಿಕ ನಿರ್ಬಂಧಗಳನ್ನು ವಿಧಿಸಿದ್ದು, ರಷ್ಯಾದಿಂದ ತೈಲ ಖರೀದಿಸುವುದನ್ನು ಹಲವು ದೇಶಗಳು ಸ್ಥಗಿತಗೊಳಿಸಿವೆ.

ಭಾರತ– ಆಸ್ಟ್ರೇಲಿಯಾ ಮೊದಲ ಟಿ20 ಪಂದ್ಯ ಇಂದು: ರೋಹಿತ್ ಬಳಗಕ್ಕೆ ಶುಭಾರಂಭ ನಿರೀಕ್ಷೆ

ವಿಶ್ವಕಪ್‌ಗೆ ಸಜ್ಜಾಗಲು ಅವಕಾಶ

ತಂಡಗಳ ವಿವರ

ಭಾರತ: ರೋಹಿತ್ ಶರ್ಮ (ನಾಯಕ), ಕೆ.ಎಲ್.ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್, ದಿನೇಶ್ ಕಾರ್ತಿಕ್, ಹಾರ್ದಿಕ್ ಪಾಂಡ್ಯ, ಆರ್.ಅಶ್ವಿನ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ದೀಪಕ್ ಚಾಹರ್, ಜಸ್‌ಪ್ರೀತ್ ಬೂಮ್ರಾ, ಉಮೇಶ್ ಯಾದವ್

ಆಸ್ಟ್ರೇಲಿಯಾ: ಆ್ಯರನ್ ಫಿಂಚ್ (ನಾಯಕ), ಸೀನ್ ಅಬಾಟ್, ಆಸ್ಟನ್ ಅಗರ್, ಪ್ಯಾಟ್ ಕಮಿನ್ಸ್, ಟಿಮ್ ಡೇವಿಡ್, ನೇಥನ್ ಎಲಿಸ್, ಕೆಮರಾನ್ ಗ್ರೀನ್, ಜೋಶ್ ಹ್ಯಾಜೆಲ್‌ವುಡ್, ಜೋಶ್ ಇಂಗ್ಲಿಸ್, ಗ್ಲೆನ್ ಮ್ಯಾಕ್ಸ್‌ವೆಲ್, ಕೇನ್ ರಿಚರ್ಡ್ಸನ್, ಡೇನಿಯಲ್ ಸ್ಯಾಮ್ಸ್, ಸ್ಟೀವ್ ಸ್ಮಿತ್, ಮ್ಯಾಥ್ಯೂ ವೇಡ್, ಆ್ಯಡಂ ಜಂಪಾ


ರೋಹಿತ್ ಶರ್ಮ– ಎಎಫ್‌ಪಿ ಚಿತ್ರ

ಮೊಹಾಲಿ (ಪಿಟಿಐ): ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಎದುರಾದ ನಿರಾಸೆಯನ್ನು ಮರೆತು ಟಿ20 ವಿಶ್ವಕಪ್‌ಗೆ ಸಜ್ಜಾಗುತ್ತಿರುವ ಭಾರತ ತಂಡಕ್ಕೆ ಮತ್ತೊಂದು ಸವಾಲು ಎದುರಾಗಿದೆ.

ಆಸ್ಟ್ರೇಲಿಯಾ ಎದುರಿನ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯ ಇಲ್ಲಿನ ಮೊಹಾಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿದ್ದು, ರೋಹಿತ್ ಶರ್ಮ ಬಳಗ ಶುಭಾರಂಭದ ನಿರೀಕ್ಷೆಯಲ್ಲಿದೆ.

ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಬೆನ್ನಲ್ಲೇ ದಕ್ಷಿಣ ಆಫ್ರಿಕಾ ವಿರುದ್ಧವೂ ಭಾರತ ಆಡಲಿದೆ. ಈ ಎರಡೂ ಸರಣಿಗಳು, ವಿಶ್ವಕಪ್ ಟೂರ್ನಿಗೆ ಸಜ್ಜಾಗಲು ಭಾರತದ ಆಟಗಾರರಿಗೆ ಉತ್ತಮ ಅವಕಾಶ ಕಲ್ಪಿಸಿದೆ.

ಏಷ್ಯಾಕಪ್‌ನಲ್ಲಿ ವೈಫಲ್ಯ ಅನುಭವಿದ್ದ ತಂಡ ಪುಟಿದೆದ್ದು ನಿಲ್ಲಬೇಕಿದೆ. ಆದ್ದರಿಂದ ತವರು ನೆಲದಲ್ಲಿ ನಡೆಯುವ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡುವುದು ರೋಹಿತ್ ಬಳಗದ ಗುರಿ. ಬ್ಯಾಟಿಂಗ್ ಕ್ರಮಾಂಕದಲ್ಲಿನ ಗೊಂದಲ ಬಗೆಹರಿಸುವುದರತ್ತ ಭಾರತ ಹೆಚ್ಚಿನ ಗಮನ ನೀಡಲಿದೆ.


ವಿಶ್ವಕಪ್ ಟೂರ್ನಿಯಲ್ಲಿ ಕೆ.ಎಲ್.ರಾಹುಲ್ ಅವರು ತಮ್ಮೊಂದಿಗೆ ಇನಿಂಗ್ಸ್ ಆರಂಭಿಸಲಿದ್ದಾರೆ ಎಂದು ನಾಯಕ ರೋಹಿತ್ ಹೇಳಿದ್ದಾರೆ. ಆದರೂ ಕೆಲವು ಪಂದ್ಯಗಳಲ್ಲಿ ವಿರಾಟ್ ಕೊಹ್ಲಿ ಅವರೂ ಆರಂಭಿಕ ಆಟಗಾರನ ಜವಾಬ್ದಾರಿ ನಿಭಾಯಿಸುವರು ಎಂಬ ಸೂಚನೆ ಕೊಟ್ಟಿದ್ದಾರೆ.

ಬ್ಯಾಟಿಂಗ್‌ನಲ್ಲಿ ಮೊದಲ ನಾಲ್ಕು ಕ್ರಮಾಂಕ (ರೋಹಿತ್, ರಾಹುಲ್, ಕೊಹ್ಲಿ ಮತ್ತು ಸೂರ್ಯಕುಮಾರ್ ಯಾದವ್) ಈಗಾಗಲೇ ನಿರ್ಧಾರವಾಗಿದೆ. ಆದರೆ ವಿಕೆಟ್‌ಕೀಪರ್‌ಗಳಾದ ರಿಷಭ್ ಪಂತ್ ಮತ್ತು ದಿನೇಶ್ ಕಾರ್ತಿಕ್ ಅವರ ಜವಾಬ್ದಾರಿ ಏನೆಂಬುದು ಖಚಿತವಾಗಿಲ್ಲ.

ರವೀಂದ್ರ ಜಡೇಜ ಗಾಯಗೊಂಡಿರುವುದರಿಂದ ಭಾರತ ತಂಡ ಎಡಗೈ ಬ್ಯಾಟ್ಸ್‌ಮನ್ ಪಂತ್ ಅವರನ್ನು ನೆಚ್ಚಿಕೊಳ್ಳಲಿದೆಯೇ ಎಂಬ ಪ್ರಶ್ನೆ ಎದ್ದಿದೆ. ಕಾರ್ತಿಕ್ ಅವರಿಗೆ ಏಷ್ಯಾಕಪ್‌ನಲ್ಲಿ ಹೆಚ್ಚಿನ ಅವಕಾಶ ಸಿಕ್ಕಿರಲಿಲ್ಲ. ಆದ್ದರಿಂದ ಅವಕಾಶ ಸಿಕ್ಕರೆ, ಸಾಮರ್ಥ್ಯ ತೋರಿಸಲು ಅವರೂ ಸಜ್ಜಾಗಿದ್ದಾರೆ.

ದೀಪಕ್ ಹೂಡಾ ಏಷ್ಯಾ ಕಪ್‌ನಲ್ಲಿ ‘ಸೂಪರ್ 4’ ಹಂತದ ಎಲ್ಲ ಪಂದ್ಯಗಳಲ್ಲಿ ಆಡಿದ್ದರೂ, ತಂಡದಲ್ಲಿ ಅವರ ಪಾತ್ರ ಏನು ಎಂಬುದರಲ್ಲಿ ಸ್ಪಷ್ಟತೆ ಇಲ್ಲ. ಒಟ್ಟಿನಲ್ಲಿ ವಿಶ್ವಕಪ್‌ಗೆ ತೆರಳುವ ಮುನ್ನ, ಮಧ್ಯಮ ಕ್ರಮಾಂಕದಲ್ಲಿ ಎದ್ದಿರುವ ‘ಗೊಂದಲ’ ಬಗೆಹರಿಯಬೇಕಿದೆ.

ಬಲಾಬಲ



ಪಂದ್ಯ ಆರಂಭ: ಸಂಜೆ 7.30
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ಮತ್ತು ಡಿಸ್ನಿ ಹಾಟ್‌ಸ್ಟಾರ್


ಆ್ಯರನ್ ಫಿಂಚ್– ಪಿಟಿಐ ಚಿತ್ರ

ವೇಗಿಗಳಾದ ಹರ್ಷಲ್ ಪಟೇಲ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ವಾಪಸಾಗಿರುವುದು ತಂಡದ ಬೌಲಿಂಗ್ ವಿಭಾಗದ ಬಲ ಹೆಚ್ಚಿಸಿದೆ.

ಮತ್ತೊಂದೆಡೆ ಆ್ಯರನ್ ಫಿಂಚ್ ನೇತೃತ್ವದ ಆಸ್ಟ್ರೇಲಿಯಾ, ಕೆಲವು ಪ್ರಮುಖ ಆಟಗಾರರ ಅನುಪಸ್ಥಿತಿಯೊಂದಿಗೆ ಭಾರತಕ್ಕೆ ಬಂದಿದೆ. ಡೇವಿಡ್ ವಾರ್ನರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಕ್ ಮತ್ತು ಮಿಚೆಲ್ ಮಾರ್ಷ್ ಅವರೂ ಈ ಸರಣಿಯಲ್ಲಿ ಆಡುತ್ತಿಲ್ಲ.

ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿರುವ ಫಿಂಚ್, ಈ ಸರಣಿಯಲ್ಲಿ ಬ್ಯಾಟಿಂಗ್ ಲಯ ಕಂಡುಕೊಳ್ಳಲು ಪ್ರಯತ್ನಿಸಲಿದ್ದಾರೆ. ಬಿರುಸಿನ ಬ್ಯಾಟಿಂಗ್‌ಗೆ ಹೆಸರು ಪಡೆದಿರುವ ಟಿಮ್ ಡೇವಿಡ್ ಅವರ ಪ್ರದರ್ಶನದ ಮೇಲೂ ಎಲ್ಲರ ಚಿತ್ತ ನೆಟ್ಟಿದೆ. ಸಿಂಗಪುರ ಪರ ಅಂತರರಾಷ್ಟ್ರೀಯ ಪಂದ್ಯ ಆಡಿರುವ 26 ವರ್ಷದ ಡೇವಿಡ್, ಇದೇ ಮೊದಲ ಬಾರಿ ಆಸ್ಟ್ರೇಲಿಯಾ ಪರ ಆಡಲಿದ್ದಾರೆ.

ಬಾಕ್ಸಿಂಗ್: ಭಾರತಕ್ಕೆ 19 ಪದಕ

ನವದೆಹಲಿ (ಪಿಟಿಐ): ಭಾರತದ ಯುವ ಬಾಕ್ಸರ್‌ಗಳು ಸರ್ಬಿಯಾದ ವೊವ್ರೊದಿನಾದಲ್ಲಿ ನಡೆದ ಗೋಲ್ಡನ್ ಗ್ಲೋವ್ ಯೂತ್ ಬಾಕ್ಸಿಂಗ್ ಟೂರ್ನಿಯಲ್ಲಿ ಭರ್ಜರಿ 19 ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಟೂರ್ನಿಯ ಕೊನೆಯ ದಿನವಾದ ಸೋಮವಾರ 10 ಚಿನ್ನದ ಪದಕಗಳು ಭಾರತದ ಮಡಿಲು ಸೇರಿದವು.ಮಹಿಳಾ ವಿಭಾಗದಲ್ಲಿ ಭಾವನಾ ಶರ್ಮಾ (48 ಕೆಜಿ ವಿಭಾಗ), ದೇವಿಕಾ ಘೋರ್ಪಡೆ (52 ಕೆಜಿ), ಕುಂಜರಾಣಿ ದೇವಿ (60 ಕೆಜಿ), ರವೀನಾ (63 ಕೆಜಿ) ಮತ್ತು ಕೀರ್ತಿ (+81 ಕೆಜಿ) ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಸ್ಪರ್ಧೆಯಲ್ಲಿದ್ದ ಭಾರತದ 12 ಮಹಿಳೆಯರೂ ‘ಪೋಡಿಯಂ ಫಿನಿಶ್‘ ಮಾಡಿದರು.

ಫೈನಲ್ ತಲುಪಿದ್ದ ಭಾರತದ ಎಲ್ಲ ಐದೂ ಮಂದಿ ಪುರುಷ ಸ್ಪರ್ಧಿಗಳು ಚಿನ್ನದ ಪದಕಗಳಿಗೆ ಮುತ್ತಿಟ್ಟರು. ವಿಶ್ವನಾಥ್ (48 ಕೆಜಿ), ಆಶಿಷ್ (54 ಕೆಜಿ), ಸಾಹಿಲ್ (71 ಕೆಜಿ), ಜಾದೂಮಣಿ (51 ಕೆಜಿ), ಭರತ್ ಜೂನ್ (92 ಕೆಜಿ) ಅಗ್ರಸ್ಥಾನ ಗಳಿಸಿದರು.

ಪೂವಮ್ಮಗೆ 2 ವರ್ಷ ನಿಷೇಧ

ನವದೆಹಲಿ (ಪಿಟಿಐ): ಕರ್ನಾಟಕದ ಅಥ್ಲೀಟ್ ಎಂ.ಆರ್. ಪೂವಮ್ಮ ಅವರಿಗೆ ಆ್ಯಂಟಿ ಡೋಪಿಂಗ್ ಅಪೀಲ್ ಪ್ಯಾನಲ್ (ಎಡಿಎಪಿ) ಎರಡು ವರ್ಷಗಳ ನಿಷೇಧ ಶಿಕ್ಷೆ ವಿಧಿಸಿದೆ.

32 ವರ್ಷದ ಪೂವಮ್ಮ ಅವರು ಕಳೆದ ವರ್ಷ ಫೆಬ್ರುವರಿಯಲ್ಲಿ ಪಟಿಯಾಲದಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರಿ ಕೂಟದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಅವರು ಪರೀಕ್ಷೆಗೆ ನೀಡಿದ್ದ ಮಾದರಿಯಲ್ಲಿ ನಿಷೇಧಿತ ಮೆಥೈಲ್‌ಹೆಕ್ಸಾನೀಮೈನ್ ಮದ್ದಿನ ಅಂಶ ಇರುವುದು ಪತ್ತೆಯಾಗಿತ್ತು.

ಈ ಹಿನ್ನೆಲೆಯಲ್ಲಿ ಈ ವರ್ಷದ ಜೂನ್‌ನಲ್ಲಿ ಅವರಿಗೆ ಎಡಿಎಪಿ ಮೂರು ತಿಂಗಳ ನಿಷೇಧ ಶಿಕ್ಷೆ ವಿಧಿಸಿತ್ತು. ಆದರೆ ಈ ಆದೇಶವನ್ನು ಪ್ರಶ್ನಿಸಿ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಮೇಲ್ಮನವಿ ಸಲ್ಲಿಸಿತ್ತು. ಈ ಮನವಿಯನ್ನು ಪುರಸ್ಕರಿಸಿರುವ ಎಡಿಎಪಿ ಶಿಕ್ಷೆಯನ್ನು ಎರಡು ವರ್ಷಕ್ಕೆ ವಿಸ್ತರಿಸಿದೆ.



‘ಪೂವಮ್ಮ ಅವರಿಂದ ಪರೀಕ್ಷೆಗಾಗಿ 2021ರ ಫೆಬ್ರುವರಿ 18ರಂದು ಮಾದರಿ ಸಂಗ್ರಹಿಸಲಾಗಿತ್ತು. ಅಂದಿನಿಂದ ಅವರು ಸ್ಪರ್ಧಿಸಿದ್ದ ಎಲ್ಲ ಫಲಿತಾಂಶಗಳನ್ನು ಅಮಾನ್ಯಗೊಳಿಸಲಾಗುತ್ತದೆ. ಗೆದ್ದ ಪದಕಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಎಡಿಎಪಿ ಮುಖ್ಯಸ್ಥ ಅಭಿನವ್ ಮುಖರ್ಜಿ ಇದೇ 16ರಂದು ನೀಡಿದ ಆದೇಶದಲ್ಲಿ ತಿಳಿಸಿದ್ದಾರೆ.

2018ರ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 4X400 ಮೀಟರ್ಸ್ ರಿಲೆಯಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ಪೂವಮ್ಮ ಇದ್ದರು. 2012ರ ಏಷ್ಯನ್ ಗೇಮ್ಸ್‌ನ 400 ಮೀ. ಓಟದಲ್ಲಿ ಅವರು ಕಂಚಿನ ಪದಕ ಗಳಿಸಿದ್ದರು.

ಪ್ರಗ್ನಾನಂದಗೆ ಮಣಿದ ಇವಾಂಚುಕ್

ನ್ಯೂಯಾರ್ಕ್ (ಪಿಟಿಐ): ಭಾರತದ ಆರ್. ಪ್ರಗ್ನಾನಂದ ಅವರು ಜೂಲಿಯಸ್ ಬಾರ್ ಜೆನರೇಷನ್ ಕಪ್ ಆನ್‌ಲೈನ್ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ದಿಗ್ಗಜ ಆಟಗಾರರಿಗೆ ಸೋಲುಣಿಸಿ ಗಮನಸೆಳೆದರು.

ಸೋಮವಾರ ಆರಂಭವಾದ ಟೂರ್ನಿಯ ಪಂದ್ಯಗಳಲ್ಲಿ 17 ವರ್ಷದ ಪ್ರಗ್ನಾನಂದ, ಉಕ್ರೇನ್‌ನ ವ್ಯಾಸಿಲ್ ಇವಾಂಚುಕ್, ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ ಮತ್ತು ಬೆಲಾರಸ್ ಸಂಜಾತ ಇಸ್ರೇಲ್ ಆಟಗಾರ ಬೋರಿಸ್ ಗೆಲ್‌ಫಾಂಡ್ ಅವರನ್ನು ಮಣಿಸಿದರು. ಬಳಿಕ ಅಮೆರಿಕದ 15 ವರ್ಷದ ಕ್ರಿಸ್ಟೊಫರ್ ಎದುರು ಭಾರತದ ಆಟಗಾರ ಸೋಲು ಕಂಡರು.

ಮೂರು ಗೆಲುವು ಸಾಧಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದತ್ತ ಮುನ್ನಡೆದಿದ್ದ ಪ್ರಗ್ನಾನಂದ, ಒಂದು ಸೋಲಿನ ಬಳಿಕ 2ನೇ ಸ್ಥಾನಕ್ಕೆ ಜಾರಿದರು. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅಗ್ರಸ್ಥಾನದಲ್ಲಿದ್ದರು.